# www.karunaduexams.com

ರಾಜ್ಯ ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- 1 to 25

www.karunaduexams.com

1. ಇತ್ತೀಚೆಗೆ ಈ ಕೆಳಗಿನ ಯಾರನ್ನು ಪ್ರತಿಷ್ಠಿತ ನೃಪತುಂಗ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ?

ಅ) ಡಾ. ಟಿ. ವಿ ವೆಂಕಟಚಲ ಶಾಸ್ತ್ರಿ

ಆ) ಚಂದ್ರಶೇಖರ ಕಂಬಾರ

ಇ) ವೈದೇಹಿ

ಈ) ಸುಧಾ ಮೂರ್ತಿ

**ಡಾ. ಟಿ. ವಿ ವೆಂಕಟಚಲ ಶಾಸ್ತ್ರಿ**

ಖ್ಯಾತ ವಿದ್ವಾಂಸರಾದ ಡಾ.ಟಿ.ವಿ ವೆಂಕಟಚಲ ಶಾಸ್ತ್ರಿ ರವರನ್ನು ಪ್ರತಿಷ್ಠಿತ ನೃಪತುಂಗ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ನೃಪತುಂಗ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಸ್ಥಾಪಿಸಿದ್ದು, ಪ್ರಶಸ್ತಿಯು ರೂ 7 ಲಕ್ಷ ನಗದನ್ನು ಒಳಗೊಂಡಿದೆ. ದೇ ಜವರೇಗೌಡರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು.

2. ಈ ಕೆಳಗಿನ ಯಾರು ಕರ್ನಾಟಕ ಉಚ್ಚ ನ್ಯಾಯಾಲಯದ ಈಗಿನ ಮುಖ್ಯ ನ್ಯಾಯಾಧೀಶರು?

ಅ) ನ್ಯಾ. ಎಚ್.ಡಿ. ವಘೇಲಾ

ಆ) ನ್ಯಾ. ಎಸ್.ಕೆ. ಮುಖರ್ಜಿ

ಇ) ನ್ಯಾ. ನಾಗರತ್ನ

ಈ) ನ್ಯಾ. ಚಂದ್ರಕಾಂತ್ ಚಿಂಚೊಳ್ಳಿ

**ನ್ಯಾ. ಎಸ್.ಕೆ. ಮುಖರ್ಜಿ**

ನ್ಯಾಯಮೂರ್ತಿ ಸುಬ್ರೊ ಕಮಲ್ ಮುಖರ್ಜಿ ಅವರು ಕರ್ನಾಟಕ ಉಚ್ಚನ್ಯಾಯಾಲಯದ ಪ್ರಸ್ತುತ ಮುಖ್ಯ ನ್ಯಾಯಾಧೀಶರಾಗಿದ್ದಾರೆ.

3. ಕರ್ನಾಟಕದ ಮೊದಲ ಸ್ಕಿನ್ ಬ್ಯಾಂಕ್ (Skin Bank) ಅನ್ನು ಇತ್ತೀಚೆಗೆ ಎಲ್ಲಿ ತೆರೆಯಲಾಯಿತು?

ಅ) ಮಣಿಪಾಲ್ ಆಸ್ಪತ್ರೆ

ಆ) ವಿಕ್ಟೋರಿಯಾ ಆಸ್ಪತ್ರೆ

ಇ) ಕೊಲೊಂಬಿಯ ಏಷಿಯಾ

ಈ) ವಾಣಿ ವಿಲಾಸ್ ಆಸ್ಪತ್ರೆ

**ವಿಕ್ಟೋರಿಯಾ ಆಸ್ಪತ್ರೆ**

ಬೆಂಗಳೂರಿನ ವಿಕ್ಟೋರಿತಯಾ ಆಸ್ಪತ್ರೆ ರಾಜ್ಯದ ಮೊದಲ ಸ್ಕಿನ್ ಬ್ಯಾಂಕ್ ವ್ಯವಸ್ಥೆ ಹೊಂದಿರುವ ಆಸ್ಪತ್ರೆ ಎಂಬ ಹೆಗ್ಗಳಿಕೆ ಪಾತ್ರವಾಯಿತು. ಆಕಸ್ಮಿಕವಾಗಿ ಬೆಂಕಿಗೆ ತುತ್ತಾದವರು ಮತ್ತು ಅಪಘಾತದಿಂದ ಗಾಯಗೊಂಡವರಿಗೆ ಈ ಸೇವೆ ಅತ್ಯಂತ ಉಪಯುಕ್ತವಾಗಲಿದೆ.

www.karunaduexams.com

4. ಪ್ರಸ್ತುಕ ಸಾಲಿನ ಡಾ.ಬೆಟಗೇರಿ ಕೃಷ್ಣಶರ್ಮ ಸ್ಮಾರಕ ನೀಡುವ ಬೇಟಗೇರಿ ಕೃಷ್ಣಶರ್ಮ ವಿಮರ್ಶಾ ಪ್ರಶಸ್ತಿಯನ್ನು ಯಾರಿಗೆ ನೀಡಲಾಯಿತು?

ಅ) ಡಾ. ಚೆನ್ನವೀರ ಕಣವಿ

ಆ) ಡಾ. ಜಿ. ಎಸ್ ಅಮೂರ

ಇ) ಡಾ. ಟಿ. ವಿ ವೆಂಕಟಚಲ ಶಾಸ್ತ್ರಿ

ಈ) ಡಾ. ಅನುರೂಪ ಭಟ್

**ಡಾ. ಜಿ. ಎಸ್ ಅಮೂರ**

ಹಿರಿಯ ವಿಮರ್ಶಕ ಡಾ. ಜಿ.ಎಸ್. ಅಮೂರ ಅವರನ್ನು ಪ್ರಸ್ತುಕ ಸಾಲಿನ ಡಾ.ಬೆಟಗೇರಿ ಕೃಷ್ಣಶರ್ಮ ಸ್ಮಾರಕ ನೀಡುವ ಬೇಟಗೇರಿ ಕೃಷ್ಣಶರ್ಮ ವಿಮರ್ಶಾ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ರೂ 1 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

5. ಇತ್ತೀಚೆಗೆ ಜಾರಿಗೆ ತಂದ ಮುಖ್ಯಮಂತ್ರಿ ಸಾಂತ್ವನ-ಹರೀಶ್ ಯೋಜನೆಗೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

i) ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ತುರ್ತಾಗಿ ಧನ ಸಹಾಯ ಮಾಡುವುದು

ii) ಈ ಯೋಜನೆಯು ಕೇವಲ ಕರ್ನಾಟಕ ರಾಜ್ಯದ ಹಾಗೂ ಬಿಪಿಲ್ ಅರ್ಹತೆ ಇರುವವರಿಗೆ ಮಾತ್ರ

iii) ಈ ಯೋಜನೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಜಾರಿಗೊಳಿಸಲಾಗುತ್ತಿದೆ

ಈ ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ.

ಅ) i ಮಾತ್ರ

ಆ) i & ii ಮಾತ್ರ

ಇ) i & iii ಮಾತ್ರ

ಈ) ಮೇಲಿನ ಎಲ್ಲವೂ

**i & iii ಮಾತ್ರ**

ಮುಖ್ಯಮಂತ್ರಿ ಸಾಂತ್ವನ-ಹರೀಶ್ ಯೋಜನೆಯನ್ನು ರಾಜ್ಯ ಸರ್ಕಾರ ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಆರ್ಥಿಕವಾಗಿ ನೆರವಾಗುವ ಸಲುವಾಗಿ ಸಲುವಾಗಿ ಜಾರಿಗೆ ತಂದಿದೆ. ಇದೊಂದು ನಗದು ರಹಿತ ಯೋಜನೆಯಾಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯೋಜನೆಯಡಿ ಸ್ಥಾಪಿಸಲಾಗಿರುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯು ರಾಜ್ಯದಲ್ಲಾಗುವ ಅಪಘಾತಗಳಲ್ಲಿ ರಾಜ್ಯ ವಲ್ಲದೇ ಬೇರೆ ರಾಜ್ಯದ ಜನರಿಗೂ ಮತ್ತು ಬಿಪಿಲ್/ಎಪಿಲ್ ಹೊಂದಿರುವವರಿಗೂ ಅನ್ವಯವಾಗಲಿದೆ. ಒಂದು ಬಾರಿಗೆ ಗರಿಷ್ಟ ರೂ 25,000/ ಗಳವರೆಗೂ ನಗದು ರಹಿತ ಚಿಕಿತ್ಸೆ ನೆರವು ನೀಡಲಾಗುವುದು.

www.karunaduexams.com

6. ದೇಶದ ಮೊದಲ ಹೊಗೆ ರಹಿತ ಗ್ರಾಮ ಎಂಬ ಹೆಗ್ಗಳಿಕೆ ಪಾತ್ರವಾದ **ವ್ಯಾಚಕುರಹಳ್ಳಿ** ರಾಜ್ಯದ ಯಾವ ಜಿಲ್ಲೆಯಲ್ಲಿದೆ?

ಅ) ಬೆಂಗಳೂರು ಗ್ರಾಮಾಂತರ

ಆ) ಕೋಲಾರ

ಇ) ಚಿಕ್ಕಬಳ್ಳಾಪುರ

ಈ) ಮಂಡ್ಯ

**ಚಿಕ್ಕಬಳ್ಳಾಪುರ**

ವ್ಯಾಚಕುರಹಳ್ಳಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರುನಲ್ಲಿದೆ. ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಇತ್ತೀಚೆಗೆ ವ್ಯಾಚಕುರಹಳ್ಳಿಯನ್ನು ದೇಶದ ಮೊದಲ ಹೊಗೆ ರಹಿತ ಗ್ರಾಮವೆಂದು ಘೋಷಿಸಿದೆ. ಇಂಡಿಯ ಆಯಿಲ್ ಕಾರ್ಪೋರೇಷನ್ ಹೊಗೆ ರಹಿತ ಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

7. ಹೆಚ್.ಎ.ಎಲ್ ನ ಹೆಲಿಕಾಪ್ಟರ್ ತಯಾರಿಕ ಘಟಕಾ ಸ್ಥಾಪನೆಯಾಗುತ್ತಿರುವ ಜಿಲ್ಲೆ_______?

ಅ) ತುಮಕೂರು

ಆ) ಕೋಲಾರ

ಇ) ಚಿತ್ರದುರ್ಗ

ಈ) ಹಾಸನ

**ತುಮಕೂರು**

ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ನ ಹೆಲಿಕಾಪ್ಟರ್ ತಯಾರಿಕ ಘಟಕಾ ರಾಜ್ಯದ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿತವಾಗುತ್ತಿದೆ. 2018 ರ ವೇಳೆಗೆ ಈ ಘಟಕದಿಂದ ತಯಾರಾಗುವ ಮೊದಲ ಹೆಲಿಕಾಪ್ಟರ್ ಹಾರಾಟ ಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

8. ಕರ್ನಾಟಕ ರಾಜ್ಯವು ಪಾವಗಡದಲ್ಲಿ ಸ್ಥಾಪಿಸುತ್ತಿರುವ ಸೋಲಾರ್ ವಿದ್ಯುತ್ ಉತ್ಪಾದನ ಘಟಕದ ಸಾಮರ್ಥ್ಯವೆಷ್ಟು?

ಅ) 1000 ಮೆಗಾ ವ್ಯಾಟ್

ಆ) 1500 ಮೆಗಾ ವ್ಯಾಟ್

ಇ) 2000 ಮೆಗಾ ವ್ಯಾಟ್

ಈ) 500 ಮೆಗಾ ವ್ಯಾಟ್

**2000 ಮೆಗಾ ವ್ಯಾಟ್**

ಕರ್ನಾಟಕ ರಾಜ್ಯ ಸರ್ಕಾರ ಪಾವಗಡದಲ್ಲಿ ನಿರ್ಮಿಸುತ್ತಿರುವ ಸೋಲಾರ್ ವಿದ್ಯುತ್ ಉತ್ಪಾದನ ಘಟಕದ ಸಾಮರ್ಥ್ಯ 2000 ಮೆಗಾ ವ್ಯಾಟ್. ಸುಮಾರು 10,000 ಎಕರೆ ಪ್ರದೇಶದಲ್ಲಿ ಈ ಘಟಕ ನಿರ್ಮಾಣಗೊಳ್ಳುತ್ತಿದ್ದು, ದೇಶದಲ್ಲೇ ಅತಿ ದೊಡ್ಡ ಸೋಲಾರ್ ವಿದ್ಯುತ್ ಘಟಕವಾಗಲಿದೆ.

www.karunaduexams.com

11. 2011 ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ಜನ ಸಾಂದ್ರತೆ ಎಷ್ಟು?

ಅ) 350

ಆ) 320

ಇ) 319

ಈ) 370

**319**

12. ವಿಸ್ತೀರ್ಣತೆಯಲ್ಲಿ ರಾಜ್ಯದ ಅತಿ ದೊಡ್ಡ ರಾಷ್ಟ್ರೀಯ ಉದ್ಯಾನವನ ಯಾವುದು?

ಅ) ನಾಗರಹೊಳೆ ರಾಷ್ಟ್ರೀಯ ಉದ್ಯಾನವನ

ಆ) ಬಂಡೀಪುರ ರಾಷ್ಟ್ರೀಯ ಉದ್ಯಾನವನ

ಇ) ಅಂಶಿ ರಾಷ್ಟ್ರೀಯ ಉದ್ಯಾನವನ

ಈ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

**ಬಂ1ಡೀಪುರ ರಾಷ್ಟ್ರೀಯ ಉದ್ಯಾನವನ**

ಬಂಡೀಪುರ ರಾಷ್ಟ್ರೀಯ ಉದ್ಯಾನವನ ವಿಸ್ತೀರ್ಣತೆಯಲ್ಲಿ ರಾಜ್ಯದ ಅತಿ ದೊಡ್ಡ ರಾಷ್ಟ್ರೀಯ ಉದ್ಯಾನವನ. ಇದರ ಒಟ್ಟು ವಿಸ್ತೀರ್ಣ 872.24 ಚದರ ಕಿ.ಮೀ.

13. ಕರ್ನಾಟಕದ ಕೃಷಿ ನೀರಾವರಿ ಕ್ಷೇತ್ರದಲ್ಲಿ ಎಲ್ಲಾ ನೀರಾವರಿ ಮೂಲಗಳ ಪೈಕಿ ಯಾವ ಕ್ಷೇತ್ರದ ಪಾಲು ಅಧಿಕವಾಗಿದೆ?

ಅ) ಕೊಳವೆ/ಕೊರೆದ ಬಾವಿ

ಆ) ನೀರಾವರಿ ಕಾಲುವೆ

ಇ) ತೋಡಿದ ಬಾವಿ

ಈ) ಕೆರೆಗಳು

**ಕೊಳವೆ/ಕೊರೆದ ಬಾವಿ**

ರಾಜ್ಯದ ನಿವ್ವಳ ನೀರಾವರಿ ಕ್ಷೇತ್ರದಲ್ಲಿ ಎಲ್ಲಾ ನೀರಾವರಿ ಮೂಲಗಳ ಪೈಕಿ ಕೊಳವೆ/ಕೊರೆದ ಬಾವಿ ಬಾವಿಗಳಿಂದ ನೀರಾವರಿಯಾಗುವ ಪಾಲು ಶೇ 37% ರಷ್ಟಿದ್ದು ಅಧಿಕವಾಗಿದೆ. ಎರಡನೇ ಪ್ರಮುಖ ನೀರಾವರಿ ಮೂಲ ನೀರಾವರಿ ಕಾಲುವೆಗಳು (ಶೇ 35%), ತೋಡಿದ ಬಾವಿಗಳು ಶೇ 12 ರಷ್ಟಿದೆ.

14. ಯಾವ ವರ್ಷ ರಾಜ್ಯದಲ್ಲಿ ಲಿಂಗಧಾರಿತ ಆಯವ್ಯಯವನ್ನು ಮೊದಲ ಬಾರಿಗೆ ಮಂಡಿಸಲಾಯಿತು?

ಅ) 2006-07

ಆ) 2007-08

www.karunaduexams.com

ಇ) 2008-09

ಈ) 2009-10

**2006-07**

ಲಿಂಗಧಾರಿತ ಆಯವ್ಯಯವನ್ನು ಕರ್ನಾಟಕ ರಾಜ್ಯ ಸರ್ಕಾರ 2006-07 ರಿಂದ ಮಂಡಿಸುತ್ತಿದ್ದು, ಲಿಂಗಧಾರಿತ ಆಯವ್ಯಯ ಮಂಡಿಸಿದ ಮೊದಲ ರಾಜ್ಯವೆನಿಸಿದೆ.

15. ಕರ್ನಾಟಕದ ಮಲ್ಟಿ ಸೆಕ್ಟರಲ್ ಸ್ಟಾರ್ಟ್‌ಆಪ್ ನೀತಿ 2015-2020 ರ ಪ್ರಕಾರ ರಾಜ್ಯದಲ್ಲಿ 2020 ರ ವೇಳೆಗೆ ಎಷ್ಟು ಸ್ಟಾರ್ಟ್ ಆಪ್ ಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ?

ಅ) 10,000

ಆ) 20,000

ಇ) 15,000

ಈ) 25,000

**20,000**

ಕರ್ನಾಟಕ ರಾಜ್ಯದ ಮಲ್ಟಿ ಸೆಕ್ಟರಲ್ ಸ್ಟಾರ್ಟ್‌ಆಪ್ ನೀತಿ 2015-2020 ರ ಪ್ರಕಾರ ರಾಜ್ಯದಲ್ಲಿ 2020 ರ ವೇಳೆಗೆ 20,000 ಸ್ಟಾರ್ಟ್ ಆಪ್ ಅನ್ನು ಸ್ಥಾಪಿಸುವ ಗುರಿಹೊಂದಿದೆ. ಮಲ್ಟಿ ಸೆಕ್ಟರಲ್ ಸ್ಟಾರ್ಟ್‌ಆಪ್ ನೀತಿಯನ್ನು ದೇಶದಲ್ಲಿ ಪ್ರಥಮ ಬಾರಿಗೆ ಜಾರಿಗೆ ತಂದ ರಾಜ್ಯ ಕರ್ನಾಟಕ.

16. ಕರ್ನಾಟಕವು ದೇಶದಲ್ಲೆ ನೂತನ ಜವಳಿ ನೀತಿಯನ್ನು ತಂದ ಮೊದಲ ರಾಜ್ಯ. ಕರ್ನಾಟಕದ ನೂತನ ಜವಳಿ ನೀತಿ ಜಾರಿ ಇರುವ ವರ್ಷ_____?

ಅ) 2013-18

ಆ) 2014-19

ಇ) 2015-20

ಈ) 2012-17

**2013-18**

ಕರ್ನಾಟಕದ ನೂತನ ಜವಳಿ ನೀತಿ 2013-18 ಆಗಿದ್ದು, ಜವಳಿ ನೀತಿಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ.

17. ಕರ್ನಾಟಕದಲ್ಲಿ ವಾರ್ಷಿಕ ಮುಖ್ಯಮಂತ್ರಿ ಪ್ರಶಸ್ತಿಯನ್ನು ಪ್ರತಿ ವರ್ಷ ಎಷ್ಟು ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುತ್ತಿದೆ?

ಅ) ಒಂದು

www.karunaduexams.com

ಆ) ಮೂರು

ಇ) ಐದು

ಈ) ನಾಲ್ಕು

**ಮೂರು**

ವಾರ್ಷಿಕ ಮುಖ್ಯಮಂತ್ರಿ ಪ್ರಶಸ್ತಿಯನ್ನು ಪ್ರತಿ ವರ್ಷ ಮೂರು ಸಾರ್ವಜನಿಕ ಉದ್ದಿಮೆಗಳಿಗೆ ನೀಡಲಾಗುತ್ತಿದೆ.

18. ಈ ಕೆಳಗಿನ ಯಾವ ಜಿಲ್ಲೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಗೆ ಒಳಪಡುವುದಿಲ್ಲ?

ಅ) ಗದಗ

ಆ) ವಿಜಯಪುರ

ಇ) ಕಲ್ಬುರ್ಗಿ

ಈ) ಬೀದರ್

**ಗದಗ**

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಡಿಲ್ಲಿ ಕಲ್ಬುರ್ಗಿ, ಬೀದರ್, ಯಾದಗಿರಿ, ರಾಯಚೂರು, ವಿಜಯಪುರ, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳು ಒಳಪಡುತ್ತವೆ.

19. ಡಾ. ನಂಜುಂಡಪ್ಪ ರವರ ವರದಿಯ ಮೇರೆಗೆ ರಾಜ್ಯದಲ್ಲಿ ಎಷ್ಟು ತಾಲ್ಲೂಕಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿದೆ?

ಅ) 110

ಆ) 114

ಇ) 121

ಈ) 125

**114**

ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಸಲುವಾಗಿ ರಾಜ್ಯ ಸರ್ಕಾರ ಡಾ. ನಂಜುಂಡಪ್ಪರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದು, ಸಮಿತಿಯು 2002 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತ್ತು. ಈ ಸಮಿತಿಯು 35 ಸೂಚಕಗಳಿಗೆ ಸೂಕ್ತ ತೂಕವನ್ನು ನೀಡಿ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವನ್ನು ಅಂದಾಜಿಸಿ ರಾಜ್ಯದಲ್ಲಿ 114 ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕಗಳೆಂದು ಗುರುತಿಸಿದೆ.

20. ಕೆಳಗಿನ ಯಾವ ಸೂತ್ರವನ್ನು ಅನುಸರಿಸಿ ರಾಜ್ಯದಲ್ಲಿ ರಾಜ್ಯ ಆಂತರಿಕ ಉತ್ಪನ್ನವನ್ನು ಮಾರುಕಟ್ಟೆ ದರದಲ್ಲಿ ತಯಾರಿಸಲಾಗುತ್ತಿದೆ?

www.karunaduexams.com

ಅ) GSDP= Gross State Value added at basic prices + Product Taxes –Product Subsidies

ಆ) GSDP= Gross State Value added at basic prices - Product Taxes + Product Subsidies

ಇ) GDSP= Gross State Value added at basic prices + Product Taxes + Product Subsidies

ಈ) GDSP= Gross State Value added at basic prices - Product Taxes - Product Subsidies

**GSDP= Gross State Value added at basic prices + Product Taxes –Product Subsidies**

21. ರಾಷ್ಟ್ರದ ಆದಾಯ ಮತ್ತು ತಲಾದಾಯ ಹೋಲಿಕೆಯಲ್ಲಿ ಕರ್ನಾಟಕ ರಾಜ್ಯದ ಆದಾಯ ಮತ್ತು ತಲಾದಾಯದಲ್ಲಿ ಕ್ರಮವಾಗಿ ಎಷ್ಟನೇ ಸ್ಥಾನದಲ್ಲಿದೆ?

ಅ) ನಾಲ್ಕು ಮತ್ತು ಏಳು

ಆ) ಏಳು ಮತ್ತು ನಾಲ್ಕು

ಇ) ನಾಲ್ಕು ಮತ್ತು ಆರು

ಈ) ಐದು ಮತ್ತು ಎಂಟು

**ನಾಲ್ಕು ಮತ್ತು ಆರು**

ರಾಷ್ಟ್ರದ ಆದಾಯ ಮತ್ತು ತಲಾದಾಯ ಹೋಲಿಕೆಯಲ್ಲಿ ರಾಜ್ಯ ಕ್ರಮವಾಗಿ ನಾಲ್ಕು ಮತ್ತು ಆರನೇ ಸ್ಥಾನದಲ್ಲಿದೆ.

22. 2011 ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಸರಿಯಾಗಿ ಹೊಂದಾಣಿಕೆ ಆಗಿಲ್ಲ?

ಅ) ಸಾಕ್ಷರತಾ ಪ್ರಮಾಣ - 95.40%

ಆ) ಲಿಂಗ ಅನುಪಾತ - 973

ಇ) ನಗರ ಜನಸಂಖ್ಯೆ ಪ್ರಮಾಣ - 40%

ಈ) ಸರಾಸರಿ ಹಿಡುವಳಿ ವಿಸ್ತೀರ್ಣ - 1.55 (ಹೆಕ್ಟೇರ್)

**ನಗರ ಜನಸಂಖ್ಯೆ ಪ್ರಮಾಣ – 40%**

2011 ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದ ನಗರ ಜನಸಂಖ್ಯೆಯೂ ರಾಜ್ಯದ ಒಟ್ಟು ಜನಸಂಖ್ಯೆಯ ಶೇ 38.7 ರಷ್ಟಿದೆ ಹಾಗೂ ಗ್ರಾಮೀಣ ಭಾಗದ ಜನಸಂಖ್ಯೆ ಶೇ 61.30 ರಷ್ಟಿದೆ.

23. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಯಾವ ವಲಯಕ ಕೊಡುಗೆ ಅತ್ಯಂತ ಹೆಚ್ಚಾಗಿದೆ?

ಅ) ಕೃಷಿ ವಲಯ

ಆ) ಸೇವಾ ವಲಯ

ಇ) ಕೈಗಾರಿಕ ವಲಯ

www.karunaduexams.com

ಈ) ತಯಾರಿಕ ವಲಯ

**ಸೇವಾ ವಲಯ**

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸೇವಾ ವಲಯದ ಕೊಡುಗೆ ಶೇ 64% ರಷ್ಟಿದ್ದು ಅತ್ಯಂತ ಹೆಚ್ಚು ಕೊಡುಗೆ ನೀಡುವ ವಲಯವಾಗಿದೆ. ನಂತರದ ಸ್ಥಾನದಲ್ಲಿ ಕೈಗಾರಿಕೆ ಮತ್ತು ಕೃಷಿ ವಲಯ ಗುರುತಿಸಿಕೊಂಡಿವೆ.

24. ಈ ಕೆಳಗಿನ ಯಾವ ಹೇಳಿಕೆ ರಾಜ್ಯಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯಲ್ಲ?

ಅ) ವಿಸ್ತೀರ್ಣದಲ್ಲಿ ಕರ್ನಾಟಕವೂ ದೇಶದಲ್ಲಿ ಎಂಟನೇ ಅತಿ ದೊಡ್ಡ ರಾಜ್ಯ

ಆ) 2001-11 ರ ದಶಕದಲ್ಲಿ ರಾಜ್ಯದ ಜನಸಂಖ್ಯೆ ಶೇ 15.6 ರಷ್ಟು ಬೆಳೆದಿದೆ

ಇ) 2001 ರ ಜನಗಣತಿಗೆ ಹೋಲಿಸಿದಾಗ 2011 ರಲ್ಲಿ ರಾಜ್ಯದ ಮಕ್ಕಳ ಲಿಂಗಾನುಪಾತದಲ್ಲಿ ಇಳಿಕೆಯಾಗಿದೆ

ಈ) ಮೇಲಿನ ಎಲ್ಲಾವೂ ಸರಿಯಾಗಿವೆ

**ಮೇಲಿನ ಎಲ್ಲಾವೂ ಸರಿಯಾಗಿವೆ**

25. ರಾಜ್ಯದ ಓಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಅತಿ ಹೆಚ್ಚು ವಿದ್ಯುತ್ ಬಳಕೆಯಾಗುತ್ತಿರುವ ಕ್ಷೇತ್ರ ಯಾವುದು?

ಅ) ಗೃಹ ಬಳಕೆ

ಆ) ಕೈಗಾರಿಕೆ

ಇ) ಕೃಷಿ

ಈ) ಮೇಲಿನ ಯಾವುದು ಇಲ್ಲ

**ಕೃಷಿ**

2014-15 ನೇ ಸಾಲಿನ ಅಂತ್ಯಕ್ಕೆ ರಾಜ್ಯದ ಓಟ್ಟು ವಿದ್ಯುತ್ ಉತ್ಪಾದನೆ 62035 ದಶಲಕ್ಷ ಯೂನಿಟ್ ಗಳು ಹಾಗೂ ಓಟ್ಟು ಬಳಕೆ 59760 ದಶಲಕ್ಷ ಯೂನಿಟ್. ಇದರಲ್ಲಿ ಕೃಷಿ ಕ್ಷೇತ್ರ 17872 ದಶಲಕ್ಷ ಯೂನಿಟ್ ಬಳಸುವ ಮೂಲಕ ಅತಿ ಹೆಚ್ಚು ವಿದ್ಯುತ್ ಬಳಸುವ ಕ್ಷೇತ್ರವೆನಿಸಿದೆ ನಂತರದಲ್ಲಿ ಗೃಹ ಬಳಕೆ ಮತ್ತು ಕೈಗಾರಿಕೆ.

26. ಯಾವ ಜಿಲ್ಲೆ ರಾಜ್ಯದಲ್ಲಿ ಅತಿ ಕಡಿಮೆ ನಗರೀಕರಣಗೊಳ್ಳುತ್ತಿರುವ ಜಿಲ್ಲೆಯಾಗಿದೆ?

ಅ) ಕೊಡಗು

ಆ) ಕೊಪ್ಪಳ

ಇ) ಮಂಡ್ಯ

ಈ) ಚಾಮರಾಜನಗರ

**ಕೊಡಗು**

www.karunaduexams.com

ಕೊಡಗು ರಾಜ್ಯದಲ್ಲಿ ಅತಿ ಕಡಿಮೆ ನಗರೀಕಗೊಳ್ಳುತ್ತಿರುವ ಜಿಲ್ಲೆಯಾಗಿದೆ. ಕೊಡಗಿನಲ್ಲಿ ಶೇ 14.61% ರಷ್ಟು ಜನಸಂಖ್ಯೆ ಮಾತ್ರ ನಗರದಲ್ಲಿ ವಾಸಿಸುತ್ತಿದ್ದಾರೆ. ಕೊಡಗಿನ ನಂತರ ಕಡಿಮೆ ನಗರೀಕರಣಗೊಳ್ಳುತ್ತಿರುವ ಜಿಲ್ಲೆಗಳೆಂದರೆ ಕೊಪ್ಪಳ (ಶೇ 16.81%), ಮಂಡ್ಯ (ಶೇ 17.08%) ಹಾಗೂ ಚಾಮರಾಜನಗರ (ಶೇ.17.14%).

27. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ

i) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು (BMRD) ಒಂದು ಸ್ವಾಯುತ್ತ ಸಂಸ್ಥೆ

ii) ಇದನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ರ ಪ್ರಕಾರ ರಚಿಸಲಾಗಿದೆ

ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

ಅ) ಒಂದು ಮಾತ್ರ

ಆ) ಎರಡು ಮಾತ್ರ

ಇ) ಎರಡು ಸರಿ

ಈ) ಎರಡು ತಪ್ಪು

**ಒಂದು ಮಾತ್ರ**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವು (BMRD) ಒಂದು ಸ್ವಾಯುತ್ತ ಸಂಸ್ಥೆಯಾಗಿದೆ. ಇದನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1985 ರ ಪ್ರಕಾರ ರಚಿಸಲಾಗಿದೆ.

28. 2014-15 ರ ಅಂತ್ಯಕ್ಕೆ ಕರ್ನಾಟಕದಲ್ಲಿ ಶಿಶು ಮರಣ ಪ್ರಮಾಣ ಎಷ್ಟಿದೆ?

ಅ) 35

ಆ) 32

ಇ) 40

ಈ) 48

**32**

ರಾಜ್ಯದಲ್ಲಿ 2014-15 ರ ಅಂತ್ಯಕ್ಕೆ ಶಿಶು ಮರಣ ಪ್ರಮಾಣ ಪ್ರತಿ ಸಾವಿರ ಜನನಗಳಿಗೆ 32 ರಷ್ಟಿದೆ.

29. ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ?

i) ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಕರ್ನಾಟಕದ ಮೊದಲ ಹುಲಿ ಸಂರಕ್ಷಿತ ತಾಣ

ii) ಪ್ರಸ್ತುತ ಕರ್ನಾಟಕದಲ್ಲಿ ಐದು ಹುಲಿ ಸಂರಕ್ಷಿತ ತಾಣಗಳಿವೆ

iii) ಹುಲಿಗಳ ಸಂಖ್ಯೆಯಲ್ಲಿ ಕರ್ನಾಟಕ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ

ಸರಿಯಾದ ಉತ್ತರವನ್ನು ಆಯ್ಕೆಮಾಡಿ:

www.karunaduexams.com

ಅ) I & ii

ಆ) ii & iii

ಇ) iii ಮಾತ್ರ

ಈ) ಎಲ್ಲವೂ ಸರಿಯಾಗಿವೆ

**ii & iii**

ಬಂಡೀಪುರ ರಾಷ್ಟ್ರೀಯ ಉದ್ಯಾನವನ ಕರ್ನಾಟಕದ ಮೊದಲ ಹುಲಿ ಸಂರಕ್ಷಿತ ತಾಣವಾಗಿದೆ. 1973 ರಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನವನ್ನು ಹುಲಿ ಸಂರಕ್ಷಿತ ತಾಣವೆಂದು ಘೋಷಿಸಲಾಯಿತು. ಪ್ರಸ್ತುತ ಕರ್ನಾಟಕದಲ್ಲಿ ಐದು ಹುಲಿ ಸಂರಕ್ಷಿತ ತಾಣಗಳಿವೆ. ಹುಲಿಗಳ ಸಂಖ್ಯೆಯಲ್ಲಿ ಕರ್ನಾಟಕ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ.

30. "ಪಂಚಮಿತ್ರ" ಮತ್ತು "ಪಂಚತಂತ್ರ" ವೆಬ್ ತಾಣವು ರಾಜ್ಯ ಸರ್ಕಾರದ ಯಾವ ಇಲಾಖೆಗೆ ಸಂಬಂಧಿಸಿದಾಗಿದೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಆ) ಕಂದಾಯ ಇಲಾಖೆ

ಇ) ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ

ಈ) ಸಮಾಜ ಕಲ್ಯಾಣ ಇಲಾಖೆ

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಪಂಚತಂತ್ರ ಮತ್ತು ಪಂಚಮಿತ್ರ ವೆಬ್ ತಾಣವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಾಗಿದ್ದು, ಈ ವೆಬ್ ತಾಣದಲ್ಲಿ ರಾಜ್ಯದ ಎಲ್ಲಾ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಸಂಪೂರ್ಣ ವಿವರ, ಯೋಜನೆಗಳ ವಿವರ, ಅಧಿಕಾರಿಗಳ ವಿವರ ಒಳಗೊಂಡಿದೆ.

31. 2015-16 ನೇ ಸಾಲಿನಲ್ಲಿ ಕರ್ನಾಟಕದ ತಲಾದಾಯ ಎಷ್ಟು?

ಅ) 142500

ಆ) 135250

ಇ) 130897

ಈ) 145300

**130897**

ಕರ್ನಾಟಕ ರಾಜ್ಯದ ತಲಾದಾಯ 2015-16 ನೇ ಸಾಲಿನಲ್ಲಿ 130897 ಇದ್ದು, ರಾಜ್ಯವು ತಲಾದಾಯದಲ್ಲಿ ಆರನೇ ಸ್ಥಾನವನ್ನು ಹೊಂದಿದೆ.

32. ಈ ಕೆಳಗಿನ ಯಾವ ಮೂರು ಜಿಲ್ಲೆಗಳು ರಾಜ್ಯದಲ್ಲಿ ಕ್ರಮವಾಗಿ ಅತಿ ಹೆಚ್ಚು ನಗರೀಕರಣಗೊಳ್ಳುತ್ತಿರುವ ಜಿಲ್ಲೆಗಳಾಗಿವೆ?

www.karnaduexams.com

ಅ) ಬೆಂಗಳೂರು, ಧಾರವಾಡ, ಗುಲ್ಬರ್ಗಾ

ಆ) ಬೆಂಗಳೂರು, ಮೈಸೂರು, ಧಾರವಾಡ

ಇ) ಬೆಂಗಳೂರು, ಧಾರವಾಡ, ದಕ್ಷಿಣ ಕನ್ನಡ

ಈ) ಬೆಂಗಳೂರು, ತುಮಕೂರು, ಮೈಸೂರು

**ಬೆಂಗಳೂರು, ಧಾರವಾಡ, ದಕ್ಷಿಣ ಕನ್ನಡ**

ಬೆಂಗಳೂರು, ಧಾರವಾಡ ಮತ್ತು ದಕ್ಷಿಣ ಕನ್ನಡ ರಾಜ್ಯದಲ್ಲಿ ಅತಿ ಹೆಚ್ಚು ನಗರೀಕರಣವಾಗಿರುವ ಮೂರು ಜಿಲ್ಲೆಗಳು. ಬೆಂಗಳೂರಿನಲ್ಲಿ ಶೇ 90.94 ರಷ್ಟು ಜನರು ನಗರದಲ್ಲಿ ವಾಸಿಸುವ ಮೂಲಕ ರಾಜ್ಯದಲ್ಲಿ ಅತಿ ಹೆಚ್ಚು ನಗರೀಕಣಗೊಂಡ ಜಿಲ್ಲೆಯಾಗಿದೆ, ಎರಡನೇ ಸ್ಥಾನದಲ್ಲಿ ಧಾರವಾಡ (ಶೇ 56.82) ಹಾಗೂ ಮೂರನೇ ಸ್ಥಾನದಲ್ಲಿ ದಕ್ಷಿಣ ಕನ್ನಡ (ಶೇ 47.67%) ಇದೆ.

33. ಸಂವಿಧಾನದ ಅನುಚ್ಛೇದ 371-ಜೆ ಅನ್ವಯ ಸ್ಥಾಪಿಸಲಾಗಿರುವ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಎಷ್ಟು ವಿಧಾನ ಸಭಾ ಕ್ಷೇತ್ರಗಳು ಒಳಪಡುತ್ತವೆ?

ಅ) 51

ಆ) 45

ಇ) 42

ಈ) 49

**42**

ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿ ಆರು ಜಿಲ್ಲೆಯ 42 ವಿಧಾನ ಸಭಾ ಕ್ಷೇತ್ರಗಳು ಒಳಪಡುತ್ತವೆ.

34. ಇವರಲ್ಲಿ ಯಾರು ರಾಜ್ಯ ಸರ್ಕಾರದ ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ?

ಅ) ಮುಖ್ಯಮಂತ್ರಿಗಳು

ಆ) ಹಣಕಾಸು ಸಚಿವರು

ಇ) ಮುಖ್ಯಕಾರ್ಯದರ್ಶಿ

ಈ) ಗೃಹ ಸಚಿವರು

**ಮುಖ್ಯಕಾರ್ಯದರ್ಶಿ**

ರಾಜ್ಯ ಸರ್ಕಾರವು ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನಾ ಸಮಿತಿಯನ್ನು ಮುಖ್ಯಕಾರ್ಯದರ್ಶಿ ರವರ ನೇತೃತ್ವದಲ್ಲಿ ಸ್ಥಾಪಿಸಿದ್ದು, ಈ ಸಮಿತಿಯು ರಾಜ್ಯದ ಹಣಕಾಸು ಮತ್ತು ಋಣದ ಸ್ಥಿತಿಗತಿಯ ಬಗ್ಗೆ ಪುನಾರುವಲೋಕನ ಮಾಡಿ ಹಣಕಾಸು ಸಚಿವರಿಗೆ ಸಲಹೆ ನೀಡುತ್ತದೆ.

www.karunaduexams.com

35. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

i) ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ರೂ 15 ಕೋಟಿಯಿಂದ 100 ಕೋಟಿ ಯೋಜನೆಗೆ ಅನುಮೋದನೆ ನೀಡುವ ಅಧಿಕಾರ ಹೊಂದಿದೆ

ii) ರಾಜ್ಯ ಉನ್ನತ ಮಟ್ಟದ ಕ್ಲಿಯರೆನ್ಸ್ ಸಮಿತಿಯು ರೂ 100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಅನುಮೋದನೆ ನೀಡುವ ಅಧಿಕಾರ ಹೊಂದಿದೆ

ಅ) ಹೇಳಿಕೆ ಒಂದು ಮಾತ್ರ ಸರಿ

ಆ) ಹೇಳಿಕೆ ಎರಡು ಮಾತ್ರ ಸರಿ

ಇ) ಎರಡು ಹೇಳಿಕೆಗಳು ಸರಿಯಾಗಿವೆ

ಈ) ಎರಡು ಹೇಳಿಕೆಗಳು ತಪ್ಪಾಗಿವೆ

**ಎರಡು ಹೇಳಿಕೆಗಳು ಸರಿಯಾಗಿವೆ**

36. ಮಹಾತ್ಮಗಾಂಧಿ ಪ್ರಾದೇಶಿಕ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಎಲ್ಲಿದೆ?

ಅ) ಬೆಂಗಳೂರು

ಆ) ಬೆಳಗಾವಿ

ಇ) ಮೈಸೂರು

ಈ) ಹಾಸನ

**ಬೆಂಗಳೂರು**

ಮಹಾತ್ಮಗಾಂಧಿ ಪ್ರಾದೇಶಿಕ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಬೆಂಗಳೂರಿನ ಜಕ್ಕೂರು ಬಳಿ ಇದೆ. ಈ ಸಂಸ್ಥೆಯು ನವೀನ ಹಾಗೂ ನವೀಕರಿಸಬಹುದಾದ ಇಂಧನ ಮಂತ್ರಾಲಯ ಭಾರತ ಸರ್ಕಾರದ ಸಹಯಾನುದಾನದಿಂದ ಅಸ್ಥಿತ್ವಕ್ಕೆ ಬಂದಿದೆ.

37. ಜರ್ಮನಿಯಲ್ಲಿ ಇತ್ತೀಚೆಗೆ ನಡೆದ 13ನೇ ಭಾರತೀಯ ಸಿನಿಮೋತ್ಸವದಲ್ಲಿ "ಜರ್ಮನ್ ಸ್ಟಾರ್ ಆಫ್ ಇಂಡಿಯಾ" ಪ್ರಶಸ್ತಿಯನ್ನು ಪಡೆದ ಚಿತ್ರ ಯಾವುದು?

ಅ) ನಾನು ಅವನಲ್ಲ ಅವಳು

ಆ) ತಿಥಿ

ಇ) ಮೈತ್ರಿ

ಈ) ರಂಗಿತರಂಗ

ತಿಥಿ

ಕನ್ನಡದ ತಿಥಿ ಚಿತ್ರ ಜರ್ಮನಿಯ ಸ್ಟುಟ್‌ಗಾರ್ಟ್‌ನಲ್ಲಿ 4 ದಿನಗಳ ಕಾಲ ನಡೆದ 13ನೇ ಭಾರತೀಯ ಸಿನಿಮೋತ್ಸವದಲ್ಲಿ 'ಜರ್ಮನ್ ಸ್ಟಾರ್ ಆಫ್ ಇಂಡಿಯಾ' ಪ್ರಶಸ್ತಿಯನ್ನು ಪಡೆದುಕೊಂಡಿದೆ. ಕಳೆದ ವರ್ಷ ಈ ಪ್ರಶಸ್ತಿಯನ್ನು ಮರಾಠಿಯ

www.karunaduexams.com

'ಕೋರ್ಟ್' ಚಿತ್ರ ಪಡೆದುಕೊಂಡಿತ್ತು. ಜುಲೈ 20ರಿಂದ 24ರ ವರೆಗೆ ನಡೆದ ಚಿತ್ರೋತ್ಸವದಲ್ಲಿ ನೀರಜಾ, ತೀನ್, ಆಲಿಗಡ್, ಆಂಗ್ರಿ ಇಂಡಿಯನ್ ಗಾಡೆಸಸ್, ಜುಬಾನ್ ಮುಂತಾದ ಚಿತ್ರಗಳು ಪ್ರದರ್ಶನಗೊಂಡವು. ಅವುಗಳ ನಡುವೆ 'ಅತ್ಯುತ್ತಮ ಚಿತ್ರ' ಎನಿಸಿಕೊಳ್ಳುವ ಮೂಲಕ ಕನ್ನಡದ 'ತಿಥಿ' ಮತ್ತೆ ಎಲ್ಲರ ಗಮನ ಸೆಳೆದಿದೆ. ರಾಮರೆಡ್ಡಿ ನಿರ್ದೇಶನದ ತಿಥಿ ಚಿತ್ರ ಈಗಾಗಲೇ ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಬಾಚಿಕೊಂಡಿದೆ.

38. ಕರ್ನಾಟಕ ರಾಜ್ಯ ಇತ್ತೀಚೆಗೆ ಅಪೌಷ್ಠಿಕತೆ ನಿವಾರಿಸುವ ಸಲುವಾಗಿ ಎಷ್ಟು ವರ್ಷದ ಮಕ್ಕಳಿಗೆ ಕೆನೆಭರಿತ ಹಾಲನ್ನು ವಿತರಿಸಲು ನಿರ್ಧರಿಸಿದೆ?

ಅ) 6 ತಿಂಗಳಿಂದ 6 ವರ್ಷ

ಆ) 6 ತಿಂಗಳಿಂದ 8 ವರ್ಷ

ಇ) 6 ವರ್ಷದಿಂದ 12 ವರ್ಷ

ಈ) 6 ವರ್ಷದಿಂದ 10 ವರ್ಷ

6 ತಿಂಗಳಿಂದ 6 ವರ್ಷ

ರಾಜ್ಯದಲ್ಲಿನ 6 ತಿಂಗಳಿಂದ 6 ವರ್ಷಗಳ ವರೆಗಿನ ಅಂಗನವಾಡಿ ಮಕ್ಕಳಿಗೆ ಕೆನೆಭರಿತ ಹಾಲನ್ನು ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದರಿಂದ ರಾಜ್ಯದ 39 ಲಕ್ಷ ಮಕ್ಕಳಿಗೆ ಅನುಕೂಲವಾಗಲಿದೆ. ಮಕ್ಕಳಲ್ಲಿ ಅಪೌಷ್ಠಿಕತೆಯನ್ನು ನಿವಾರಿಸುವ ಸಲುವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಕ್ಷೀರಭಾಗ್ಯ ಯೋಜನೆಯಡಿ 1.10 ಲಕ್ಷ ಮಕ್ಕಳಿಗೆ ಹಾಲು ನೀಡಲಾಗುತ್ತಿದ್ದು, ಈ ಪೈಕಿ 39 ಲಕ್ಷ ಅಂಗನವಾಡಿ ಮಕ್ಕಳಿಗೆ ಕೆನೆರಹಿತ ಹಾಲನ್ನು ಸದ್ಯ ನೀಡಲಾಗುತ್ತಿದೆ.

39. ರಿಯೋ ಒಲಂಪಿಕ್ಸ್ ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಕ್ರೀಡಾಪಟುಗಳ ಪೈಕಿ ರಾಜ್ಯದ ಯಾವ ಜಿಲ್ಲೆಯಿಂದ ಅತಿ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ?

ಅ) ಬಳ್ಳಾರಿ

ಆ) ಕೊಡಗು

ಇ) ಮೈಸೂರು

ಈ) ವಿಜಯಪುರ

ಕೊಡಗು

ಕೊಡಗು ಜಿಲ್ಲೆಯ ಒಟ್ಟು ಏಳು ಮಂದಿ ಕ್ರೀಡಾಳುಗಳು ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. ಭಾರತ ಒಲಂಪಿಕ್ಸ್ ತಂಡದಲ್ಲಿ ಒಟ್ಟು 120 ಕ್ರೀಡಾಪಟುಗಳಿದ್ದು, ಇದರಲ್ಲಿ ಕೊಡಗಿನ 7 ಜನ ಭಾಗವಹಿಸಲಿದ್ದಾರೆ. ಒಲಂಪಿಕ್ಸ್ ಹಾಕಿ ಒಂದರಲ್ಲೇ ಜಿಲ್ಲೆಯ ನಾಲ್ಕು ಆಟಗಾರರು ಪ್ರತಿನಿಧಿಸುತ್ತಿದ್ದಾರೆ.

40. ಬಿಡುಗಡೆಗೆ ಸಿದ್ದಗೊಂಡಿರುವ "ನಿಜಲಿಂಗ" ಯಾವ ಸಾಹಿತಿಯ ಹೊಸ ಕಾದಂಬರಿ ಆಗಿದೆ?

www.karunaduexams.com

ಅ) ಜಿ.ಎಸ್.ಶಿವರುದ್ರಪ್ಪ

ಆ) ಕುಂ. ವೀರಭದ್ರಪ್ಪ

ಇ) ಎಸ್.ಎಲ್. ಭೈರಪ್ಪ

ಈ) ದೇವನೂರು ಮಹಾದೇವ

ಕುಂ. ವೀರಭದ್ರಪ್ಪ

ನಿಜಲಿಂಗ ಕಾದಂಬರಿಯು ಖ್ಯಾತ ಕಾದಂಬರಿಕಾರ ಕುಂ.ವೀರಭದ್ರಪ್ಪನವರ 18 ನೇ ಕಾದಂಬರಿ ಆಗಿದೆ. ಅನುಪಮಾ ಪ್ರಕಾಶನ ಪ್ರಕಟಿಸಿರುವ ಈ ಕಾದಂಬರಿಯು ಆಗಸ್ಟ್ 14 ರಂದು ಬಿಡುಗಡೆಗೊಳ್ಳಲಿದೆ. 1980ರಲ್ಲಿ ಪ್ರಕಟಗೊಂಡ "ಕಪ್ಪು" ಕುಂ.ವೀ ರವರ ಮೊದಲ ಕಾದಂಬರಿ. ನಂತರ ಬೇಲಿ ಮತ್ತು ಹೊಲ, ಶಾಮಣ್ಣ, ಆರೋಹಣ, ಅರಮನೆ ಹೀಗೆ ನಿರಂತರವಾಗಿ ಕಾದಂಬರಿಗಳನ್ನು ಬರೆಯುತ್ತ ಬಂದಿದ್ದಾರೆ. ಭಗವತಿ ಕಾಡು, ಕೂರ್ಮಾವತಾರ ಸೇರಿದಂತೆ ಹತ್ತಕ್ಕೂ ಹೆಚ್ಚು ಕಥಾ ಸಂಕಲನಗಳನ್ನು ನೀಡಿರುವ ಅವರು ತೆಲುಗು ಭಾಷೆಯ 300ಕ್ಕೂ ಹೆಚ್ಚು ಕಥೆಗಳನ್ನು ಅನುವಾದಿಸಿದ್ದಾರೆ. 'ಗಾಂಧಿ ಕ್ಲಾಸು' ಅವರ ಆತ್ಮಕಥೆ. ಅವರ ಕಥೆ, ಕಾದಂಬರಿಗಳನ್ನು ಆಧರಿಸಿ ಏಳು ಸಿನಿಮಾಗಳಾಗಿವೆ. ಅವರ ಅರಮನೆ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

41. ಯಾವ ನಗರದಲ್ಲಿ ಪ್ರಥಮ ಅಂತರರಾಷ್ಟ್ರೀಯ ತೃತೀಯಲಿಂಗಿಗಳ ಕಲಾ ಉತ್ಸವ (Transgender Art Festival)ವನ್ನು ಆಯೋಜಿಸಲಾಗಿದೆ?

ಅ) ಮೈಸೂರು

ಆ) ಮಂಗಳೂರು

ಇ) ಬೆಂಗಳೂರು

ಈ) ರಾಮನಗರ

ಬೆಂಗಳೂರು

ಬೆಂಗಳೂರಿನಲ್ಲಿ ಮೊದಲ ಅಂತರರಾಷ್ಟ್ರೀಯ ತೃತೀಯಲಿಂಗಿಗಳ ಕಲಾ ಉತ್ಸವವನ್ನು ಆಯೋಜಿಸಲಾಗಿದೆ. ಜುಲೈ 29 ರಿಂದ 31 ರವರೆಗೆ ನಡೆಯಲಿರುವ ಈ ಉತ್ಸವವನ್ನು ನ್ಯಾಷನಲ್ ಗ್ಯಾಲರಿ ಆಫ್ ಮಾರ್ಡನ್ ಆರ್ಟ್ ನಲ್ಲಿ ಏರ್ಪಡಿಸಲಾಗಿದೆ. ಈ ಉತ್ಸವದಲ್ಲಿ ಪ್ರಖ್ಯಾತ ಶಾಸ್ತ್ರೀಯ ನೃತ್ಯಪಟುಗಳಾದ ಮಾಲಿಕ ಪಣಿಕರ್, ಕುಚಿಪುಡಿ ನೃತ್ಯಪಟು ವರ್ಷ ವಂದನ ಸೇರಿದಂತೆ ಖ್ಯಾತ ಕಲಾವಿದರುಗಳು ಪಾಲ್ಗೊಳ್ಳಲಿದ್ದಾರೆ.

42. ಒಂದೇ ಸೂರಿನಡಿ ನೂರು ಸಾರ್ವಜನಿಕ ಸೇವೆ ಒದಗಿಸುವ "ಪಂಚಾಯತ್-100 ಬಾಪೂಜಿ ಕೇಂದ್ರ"ಕ್ಕೆ ಯಾವ ಜಿಲ್ಲೆಯಿಂದ ಚಾಲನೆ ನೀಡಲಾಯಿತು?

ಅ) ಚಾಮರಾಜನಗರ

ಆ) ಶಿವಮೊಗ್ಗ



www.karunaduexams.com

ಇ) ಹಾವೇರಿ

ಈ) ಚಿಕ್ಕಬಳ್ಳಾಪುರ

ಹಾವೇರಿ

ಗ್ರಾಮ ಪಂಚಾಯತಿಯಲ್ಲೇ 100 ಸಾರ್ವಜನಿಕ ಸೇವೆ ಕಲ್ಪಿಸುವ ಪಂಚಾಯತ್-100 ಬಾಪೂಜಿ ಸೇವಾ ಕೇಂದ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರವರು, ರಾಣೆಬೆನ್ನೂರು ತಾಲೂಕು ಕಾಕೋಳ ಗ್ರಾ.ಪಂ.ನಲ್ಲಿ ಲೋಕಾರ್ಪಣೆಗೊಳಿಸಿದರು. 100 ಬಾಪೂಜಿ ಕೇಂದ್ರದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯ 43, ಕಂದಾಯ ಇಲಾಖೆಯ 39, ಆರ್‌ಟಿಸಿ, ಇನ್ನಿತರ ಖಾಸಗಿಯ 17 ಸೇವೆಗಳನ್ನು ಗ್ರಾಮ ಪಂಚಾಯತಿ ಕಚೇರಿಯಲ್ಲಿಯೇ ನೀಡಲಾಗುವುದು. ಇದರಿಂದ ಸಾರ್ವಜನಿಕರು ತಾಲ್ಲೂಕ ಕೇಂದ್ರಗಳಿಗೆ ಅಲೆದಾಡುವುದು ತಪ್ಪಲಿದೆ. ರಾಷ್ಟ್ರದಲ್ಲೇ ಮೊದಲ ಬಾರಿಗೆ ಯೋಜನೆ ಜಾರಿಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ 2000 ಬಾಪೂಜಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

43. ಕರ್ನಾಟಕದ ಎಷ್ಟು ಜಿಲ್ಲೆಗಳು ಕೇಂದ್ರ ಸರ್ಕಾರ ಅನುಮೋದಿಸಿರುವ ನಕ್ಸಲ್ ಬಾಧಿತ "ರೆಡ್ ಕಾರಿಡರ್" ಪಟ್ಟಿಯಲ್ಲಿವೆ?

ಅ) ಎರಡು

ಆ) ಐದು

ಇ) ನಾಲ್ಕು

ಈ) ಯಾವ ಜಿಲ್ಲೆಯು ಇಲ್ಲ

ಯಾವ ಜಿಲ್ಲೆಯು ಇಲ್ಲ

ದೇಶದ ಹತ್ತು ರಾಜ್ಯಗಳ 106 ಜಿಲ್ಲೆಗಳನ್ನು ರೆಡ್ ಕಾರಿಡಾರ್ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ರೆಡ್ ಕಾರಿಡಾರ್ ಎಂದರೆ ನಕ್ಸಲ್ ಭಾದಿತ ಪ್ರದೇಶ ಎಂದರ್ಥ. ಕರ್ನಾಟಕದಲ್ಲಿ ನಕ್ಸಲ್ ಚಟುವಟಿಕೆ ಇದೆಯಾದರು ರಾಜ್ಯದ ಯಾವ ಜಿಲ್ಲೆಯು ರೆಡ್ ಕಾರಿಡಾರ್ ಪಟ್ಟಿಯಲ್ಲಿ ಇಲ್ಲ. ರೆಡ್ ಕಾರಿಡಾರ್ ಪಟ್ಟಿಯಲ್ಲಿರುವ ಜಿಲ್ಲೆಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ವಿಶೇಷ ಆರ್ಥಿಕ ಸೌಲಭ್ಯ ನೀಡಲಿದೆ.

44. ಗಂಟೆಗೆ 180 ಕಿ.ಮೀ ವೇಗದಲ್ಲಿ ಚಲಿಸುವ ಟಾಲ್ಗೊ ರೈಲಿನ ಪರೀಕ್ಷಾರ್ಥ ಸಂಚಾರವನ್ನು ರಾಜ್ಯದ ಯಾವ ರೈಲು ಮಾರ್ಗದಲ್ಲಿ ಸಂಚರಿಸುವ ಉದ್ದೇಶವನ್ನು ಹೊಂದಲಾಗಿದೆ?

ಅ) ಬೆಂಗಳೂರು - ಮೈಸೂರು

ಆ) ಬೆಂಗಳೂರು - ದಾವಣಗೆರೆ

ಇ) ಹುಬ್ಬಳ್ಳಿ - ಬೆಂಗಳೂರು

ಈ) ಬೆಂಗಳೂರು - ಬಂಗಾರ ಪೇಟೆ

ಬೆಂಗಳೂರು - ಮೈಸೂರು

www.karunaduexams.com

ಬೆಂಗಳೂರು-ಮೈಸೂರು ನಡುವೆ ಟಾಲ್ಗೊ ರೈಲಿನ ಪರೀಕ್ಷಾರ್ಥ ಸಂಚಾರವನ್ನು ನಡೆಸುವುದಾಗಿ ರೈಲ್ವೆ ಸಚಿವ ಸುರೇಶ್ ಪ್ರಭು ತಿಳಿಸಿದ್ದಾರೆ. ಗಂಟೆಗೆ 180 ಕಿ.ಮೀ ಚಲಿಸುವ ಟಾಲ್ಗೊ ರೈಲು ದೇಶದಲ್ಲಿ ವೇಗವಾಗಿ ಚಲಿಸುವ ಸೆಮಿ ಹೈಸ್ಪೀಡ್ ರೈಲು ಆಗಿದೆ. ಉತ್ತರ ಪ್ರದೇಶದ ಮಥುರಾ-ಪಾವಲ್ ನಗರಗಳ ನಡುವೆ ಟಾಲ್ಗೊ ರೈಲು ಗರಿಷ್ಠ ವೇಗ 180 ಕಿ.ಮೀ ತಲುಪಿತ್ತು.

45. ಮಹದಾಯಿ ನದಿ ನೀರು ವಿವಾದ ನ್ಯಾಯಮಂಡಳಿಯ ಅಧ್ಯಕ್ಷರು ಯಾರು?

ಅ) ನ್ಯಾ. ಆರ್.ಎಂ.ಲೋದಾ

ಆ) ನ್ಯಾ. ಜೆ.ಎಂ. ಪಾಂಚಾಲ್

ಇ) ನ್ಯಾ. ವಿಕ್ರಂ ಸೇಥ್

ಈ) ನ್ಯಾ. ಬ್ರಿಜೇಶ್ ಪಾಟೀಲ್

ನ್ಯಾ. ಜೆ.ಎಂ. ಪಾಂಚಾಲ್

ಮಹದಾಯಿ ನದಿ ನೀರು ವಿವಾದ ನ್ಯಾಯಮಂಡಳಿಯನ್ನು ಕೇಂದ್ರ ಸರ್ಕಾರ ನವೆಂಬರ್ 16, 2010 ರಲ್ಲಿ ಸ್ಥಾಪಿಸಿದೆ. ಅಂತರರಾಜ್ಯ ನದಿ ನೀರು ವಿವಾದ ಕಾಯಿದೆ-1956 ರ ಅಡಿಯಲ್ಲಿ ನ್ಯಾಯಮಂಡಳಿಯನ್ನು ಸ್ಥಾಪಿಸಲಾಗಿದ್ದು, ನಿವೃತ್ತ ನ್ಯಾಯಮೂರ್ತಿ ನ್ಯಾ.ಜೆ.ಎಂ.ಪಾಂಚಾಲ್ ರವರು ಇದರ ಅಧ್ಯಕ್ಷರಾಗಿದ್ದಾರೆ.

46. ಇತ್ತೀಚೆಗೆ ಈ ಕೆಳಗಿನ ಯಾವ ಸಮೂಹಕ್ಕೆ ರಾಜೀವ್ ಆರೋಗ್ಯ ಭಾಗ್ಯ ಯೋಜನೆಯನ್ನು ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ?

ಅ. ಪತ್ರಕರ್ತರು

ಆ. ಅಂಗನವಾಡಿ ಕಾರ್ಯಕರ್ತೆಯರು

ಇ. ಲೈಂಗಿಕ ಶೋಷಿತರು

ಈ. ವಿಧವೆಯರು

ಪತ್ರಕರ್ತರು

ಕರ್ನಾಟಕ ಸರ್ಕಾರ ಎಪಿಎಲ್ ಪಡಿತರ ಕಾರ್ಡ್ ಹೊಂದಿರುವವರಿಗೆ ಆರೋಗ್ಯ ಸೇವೆ ಒದಗಿಸಲು ರಾಜೀವ್ ಆರೋಗ್ಯ ಭಾಗ್ಯ ಯೋಜನೆ ಜಾರಿಗೆ ತಂದಿದೆ. 2015ರ ಜನವರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀವ್ ಆರೋಗ್ಯ ಭಾಗ್ಯ ಯೋಜನೆಗೆ ಚಾಲನೆ ನೀಡಿದರು. ವಾರ್ಷಿಕ ಒಂದೂವರೆ ಲಕ್ಷ ರೂ.ಗಳ ತನಕ ಯೋಜನೆಯಡಿ ಚಿಕಿತ್ಸೆ ಲಭ್ಯವಿದೆ. ಸಾಮಾನ್ಯ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯಲು ಸರ್ಕಾರವು ಶೇ. 70 ರಷ್ಟು ಹಣವನ್ನು ಭರಿಸುತ್ತದೆ. ಉಳಿದ ಶೇ. 30 ರಷ್ಟು ಹಣವನ್ನು ಫಲಾನುಭವಿ ಭರಿಸಬೇಕಾಗುತ್ತದೆ. ವಿಶೇಷ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯಲು ಬಯಸಿದಲ್ಲಿ ಸರ್ಕಾರವು ವಾಜಪೇಯಿ ಆರೋಗ್ಯ ಶ್ರೀ ಯೋಜನೆಯ ಮೂಲ ಪ್ಯಾಕೇಜ್ ದರದ ಶೇ. 50 ರಷ್ಟನ್ನು ಮಾತ್ರ ಭರಿಸುತ್ತದೆ. ಇನ್ನುಳಿದ ಶೇ. 50 ರಷ್ಟನ್ನು ಹಾಗೂ ಆಸ್ಪತ್ರೆಯವರು ಘೋಷಿಸಿರುವ ಪ್ಯಾಕೇಜ್ ದರದ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಯೇ

www.karunaduexams.com

ಪಾವತಿಸಬೇಕು. ಇತ್ತೀಚೆಗೆ ಸರ್ಕಾರ ರಾಜ್ಯದಲ್ಲಿನ ಮಾನ್ಯತೆ ಪಡೆದ ಪತ್ರಕರ್ತರು ಹಾಗೂ ಕಾರ್ಯನಿರತ ಪತ್ರಕರ್ತರಿಗೂ 'ರಾಜೀವ್ ಆರೋಗ್ಯ ಭಾಗ್ಯ' ಯೋಜನೆ ಸೌಲಭ್ಯ ಕಲ್ಪಿಸಲಾಗುವುದು ಎಂದು ರಾಜ್ಯ ಸರಕಾರ ಅಧಿಕೃತ ಆದೇಶವನ್ನು ಹೊರಡಿಸಿದೆ.

47. ಬೆಂಗಳೂರನ್ನು ಜಾಗತಿಕ ಪ್ರವಾಸಿ ಕೇಂದ್ರವನ್ನಾಗಿ ರೂಪಿಸುವ ಸಲುವಾಗಿ ಸಲಹೆ ನೀಡುವಂತೆ ಯಾರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ?

ಅ) ಪ್ರಿಯಾಂಕ ಖರ್ಗೆ

ಆ) ರಾಮಲಿಂಗ ರೆಡ್ಡಿ

ಇ) ಕೌಶಿಕ್ ಮುಖರ್ಜಿ

ಈ) ವಿಜಯ ಭಾಸ್ಕರ್

ಪ್ರಿಯಾಂಕ ಖರ್ಗೆ

ಐಟಿ ರಾಜಧಾನಿ ಎಂದೇ ಖ್ಯಾತಿ ಹೊಂದಿರುವ ಬೆಂಗಳೂರನ್ನು ಜಾಗತಿಕ ಪ್ರವಾಸಿ ಕೇಂದ್ರವನ್ನಾಗಿ ರೂಪಿಸಲು ಸಲಹೆ ನೀಡುವಂತೆ ರಾಜ್ಯ ಸರ್ಕಾರ 10 ಜನ ಸದಸ್ಯರನ್ನು ಒಳಗೊಂಡ ಬೆಂಗಳೂರು ಪ್ರವಾಸೋದ್ಯಮ ಸಲಹಾ ಸಮಿತಿಯನ್ನು ರಚಿಸಿದ್ದು, ಐಟಿ/ಬಿಟಿ ಹಾಗೂ ರಾಜ್ಯ ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ ರವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯು ಮೂರು ತಿಂಗಳೊಳಗೆ ಈ ಸಂಬಂಧ ಕ್ರಿಯಾ ಯೋಜನೆಯನ್ನು ಸಲ್ಲಿಸಲಿದೆ. ಮಾಜಿ ಮುಖ್ಯ ಕಾರ್ಯದರ್ಶಿ ಸುಬೀರ್ ಹರಿ ಸಿಂಗ್, ಅರ್ಬಲ್ ಎಕ್ಸಪರ್ಟ್ ವಿ ರವಿಚಂದರ್, ವಾಸ್ತುಶಿಲ್ಪಿಗಳಾದ ನರೇಶ್ ವಿ ನರಸಿಂಹನ್ ಹಾಗೂ ನರೇಂದ್ರ ಪಿರ್ಗಲ್, ಕಾನೂನು ತಜ್ಞ ಸಿದ್ದಾರ್ಥ್ ರಾಜು, ಆತಿಥ್ಯ ತಜ್ಞ ಸುಂದರ ರಾಜು ಮತ್ತು ಸಂರಕ್ಷಕ ಸತ್ಯ ಪ್ರಕಾಶ್ ವಾರಣಾಸಿ ಸಮಿತಿಯ ಇತರೆ ಸದಸ್ಯರು.

48. ಈ ಕೆಳಗಿನ ಯಾವ ಹುಲಿ ಸಂರಕ್ಷಣಾ ಧಾಮದ ರಕ್ಷಣಾ ಕಾರ್ಯಕ್ಕೆ ಕರ್ನಾಟಕ 12 ಆನೆಗಳನ್ನು ಸ್ಥಳಾಂತರಿಸಲು ನಿರ್ಧರಿಸಲಾಗಿದೆ?

ಅ) ಕಾರ್ಬೆಟ್ ಹುಲಿ ಸಂರಕ್ಷಣ ಧಾಮ

ಆ) ಮಾನಸ್ ಹುಲಿ ಸಂರಕ್ಷಣ ಧಾಮ

ಇ) ಮೇಲ್ಘಾಟ್ ಹುಲಿ ಸಂರಕ್ಷಣ ಧಾಮ

ಈ) ಕನ್ಹಾ ಹುಲಿ ಸಂರಕ್ಷಣ ಧಾಮ

ಕಾರ್ಬೆಟ್ ಹುಲಿ ಸಂರಕ್ಷಣ ಧಾಮ

ಕರ್ನಾಟಕದ 12 ಆನೆಗಳನ್ನು ಉತ್ತರಖಂಡದ ಜಿಮ್ ಕಾರ್ಬೆಟ್ ಹುಲಿ ಸಂರಕ್ಷಣಾ ಧಾಮದ ರಕ್ಷಣಾ ಕಾರ್ಯಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ. ಉತ್ತರಾಖಂಡ ಸರ್ಕಾರ ಈಗಾಗಲೇ ಕರ್ನಾಟಕ ಸರ್ಕಾರದಿಂದ ಈ ಬಗ್ಗೆ ಅನುಮತಿ ಪಡೆದಿದೆ. ಭಾರತ ಮೃಗಾಲಯ ಪ್ರಾಧಿಕಾರ, ಅರಣ್ಯಮತ್ತು ಪರಿಸರ ಮಂತ್ರಾಲಯವೂ ಹಸಿರು ನಿಶಾನೆ ತೋರಿಸಿದೆ. ಕಾರ್ಬೆಟ್‌ನ ದಕ್ಷಿಣ ಭಾಗದಲ್ಲಿ ಭದ್ರತಾ ಸಮಸ್ಯೆ ಕಂಡುಬಂದಿದ್ದು, ಕರ್ನಾಟಕದ ಆನೆಗಳನ್ನು ಈ ಸ್ಥಳದ ಕಾವಲು ಪಡೆಗೆ ಸಹಕರಿಸಲು ಬಳಕೆ ಮಾಡಿಕೊಳ್ಳುವ ಸಲುವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ.

49. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಮಾನದಂಡ ರಚಿಸುವ ಸಲುವಾಗಿ ಯಾರ ನೇತೃತ್ವದಲ್ಲಿ ರಾಜ್ಯ ಸರ್ಕಾರ ವಿಶೇಷ ಸಮಿತಿಯನ್ನು ರಚಿಸಿದೆ?

ಅ) ಬರಗೂರು ರಾಮಚಂದ್ರಪ್ಪ

ಆ) ನಾಗತಿಹಳ್ಳಿ ಚಂದ್ರಶೇಖರ್

ಇ) ನ್ಯಾ. ನಾಗಮೋಹನ್ ದಾಸ್

ಈ) ನಾಗಭರಣ

ನ್ಯಾ. ನಾಗಮೋಹನ್ ದಾಸ್

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಮಾನದಂಡ ರಚನೆಗಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ವಿಶೇಷ ಸಮಿತಿಯನ್ನು ರಚಿಸಿದೆ. ಸಮಿತಿಯು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 22 ಗಣ್ಯರನ್ನು ಒಳಗೊಂಡಿದೆ. 60 ವರ್ಷಗಳಿಂದ ಸರಿಯಾದ ಮಾನದಂಡಗಳಿಲ್ಲದೆ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರಧಾನ ಮಾಡುತ್ತಿರುವುದಕ್ಕೆ ವಿರೋಧ ವ್ಯಕ್ತವಾಗಿತ್ತು.

50. ಈ ಕೆಳಗಿನ ಯಾವ ಸಂಸ್ಥೆ ಜುಲೈ ತಿಂಗಳಲ್ಲಿ 100 ವರ್ಷ ಪೂರೈಸುವ ಮೂಲಕ ಶತಮಾನೋತ್ಸವವನ್ನು ಆಚರಿಸಿಕೊಂಡಿತು?

ಅ) ಮಂಡ್ಯ ಸಕ್ಕರೆ ಕಾರ್ಖಾನೆ

ಆ) ಮೈಸೂರು ಸ್ಯಾಂಡಲ್ಸ್

ಇ) ಭದ್ರಾವತಿ ಉಕ್ಕಿನ ಕಾರ್ಖಾನೆ

ಈ) ಮೈಸೂರು ಸಿಲ್ಕ್ಸ್

ಮೈಸೂರು ಸ್ಯಾಂಡಲ್ಸ್

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ(ಕೆಎಸ್ ಡಿಎಲ್) ತನ್ನ ಶತಮಾನೋತ್ಸವನ್ನು ಇತ್ತೀಚೆಗೆ ಆಚರಿಸಿಕೊಂಡಿತು. ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯರವರು 1916ರಲ್ಲಿ ಸರ್ಕಾರಿ ಶ್ರೀಗಂಧದೆಣ್ಣೆ ಕಾರ್ಖಾನೆ ಸ್ಥಾಪಸಿದರು. ನಂತರದ ದಿನಗಳಲ್ಲಿ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ ಮೈಸೂರು ಸ್ಯಾಂಡಲ್ಸ್ ಈಗ 'ಭಾರತದ ಸುಗಂಧ ರಾಯಭಾರಿ' ಎನಿಸಿಕೊಂಡಿದೆ. 1980 ರಲ್ಲಿ ಮೈಸೂರು ಸ್ಯಾಂಡಲ್ಸ್ ಅನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ(ಕೆಎಸ್ ಡಿಎಲ್) ಎಂದು ಮರುನಾಮಕರಣ ಮಾಡಲಾಯಿತು. ಪ್ರಸ್ತುತ ಈ ಸಂಸ್ಥೆಯು ಸೋಪು, ಡಿಟರ್ಜೆಂಟ್,ಕಾಸ್ಮೆಟಿಕ್, ಅಗರಬತ್ತಿ, ಶ್ರೀಗಂಧದೆಣ್ಣೆ ಸೇರಿದಂತೆ 38ಕ್ಕೂ ಅಧಿಕ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಹೊಂದಿದೆ.

51. ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗದ ಈಗಿನ ಅಧ್ಯಕ್ಷರು ಯಾರು?

ಅ) ಮೀರಾ ಸಿ ಸಕ್ಸೆನಾ

ಆ) ಹೆಚ್. ಸಿ. ಹುನಗುಂದ

ಇ) ನರ್ಗೀಸ್ ಭಾನು

ಈ) ಮನೋಜ್ ಕುಮಾರ್

ಮೀರಾ ಸಿ ಸಕ್ಸೆನಾ

ಪ್ರಸ್ತುತ ಮೀರಾ ಸಿ ಸಕ್ಸೆನಾ ರವರು ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಿದ್ದಾರೆ. ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗವನ್ನು 28 ಜೂನ್ 2005 ರಂದು ಸ್ಥಾಪಿಸಲಾಗಿದೆ. ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ.

52. 2016-ಭಾರತ ಒಲಂಪಿಕ್ಸ್ ತಂಡದ ಭದ್ರತಾ ಸಲಹಗಾರರಾಗಿ ನೇಮಕಗೊಂಡಿರುವ ಕರ್ನಾಟಕದ ನಿವೃತ ಪೊಲೀಸ್ ಅಧಿಕಾರಿ ಯಾರು?

ಅ) ಶಂಕರ್ ಬಿದರಿ

ಆ) ಸಾಂಗ್ಲಿಯಾನ

ಇ) ಗೋಪಾಲ್ ಬಿ ಹೊಸೂರು

ಈ) ಬಿ ಶಿವರಾಂ

ಗೋಪಾಲ್ ಬಿ ಹೊಸೂರು

ಕರ್ನಾಟಕದ ಮಾಜಿ ಐಪಿಎಸ್ ಅಧಿಕಾರಿ ಗೋಪಾಲ್ ಬಿ ಹೊಸೂರು ರವರನ್ನು 2016 ರಿಯೋ ಒಲಂಪಿಕ್ಸ್ ನಲ್ಲಿ ಪ್ರತಿನಿಧಿಸಲಿರುವ 119 ಕ್ರೀಡಾಪಟುಗಳನ್ನ ಒಳಗೊಂಡ ಭಾರತ ತಂಡದ ಭದ್ರತಾ ಸಲಹೆಗಾರರನ್ನಾಗಿ ಆಯ್ಕೆಮಾಡಲಾಗಿದೆ. ಇದೇ ಮೊದಲ ಬಾರಿಗೆ ರಾಜ್ಯದ ಅಧಿಕಾರಿಯೊಬ್ಬರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

53. 2016-17 ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದಿನವೊಂದಕ್ಕೆ ಪಾವತಿಸಲಾಗುತ್ತಿರುವ ಕೂಲಿ ಮೊತ್ತ ಎಷ್ಟು?

ಅ) ರೂ 204

ಆ) ರೂ 224

ಇ) ರೂ 216

ಈ) ರೂ 250

ರೂ 224

2016-17 ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದಿನವೊಂದಕ್ಕೆ ರೂ 224 ಕೂಲಿ ಮೊತ್ತವನ್ನು ಪಾವತಿಸಲಾಗುತ್ತಿದೆ. ಮ.ಗಾ.ರಾ.ಗ್ರಾ.ಉ.ಖಾತ್ರಿ ಕಾಯಿದೆ ಅಡಿ ಮಹಿಳೆ ಮತ್ತು ಪುರುಷರಿಗೆ ಸಮಾನ ವೇತನವನ್ನು ಪಾವತಿಸಬೇಕು.

54. ಇತ್ತೀಚೆಗೆ ಚಾಲನೆ ನೀಡಲಾದ "ಕರ್ನಾಟಕ ಪ್ರಾದೇಶಿಕ ಆರ್ಥಿಕ ವ್ಯಾಪಾರ ಸಂಸ್ಥೆ (KRETO)ದ ಅಧ್ಯಕ್ಷರು ಯಾರು?

ಅ) ಶಬೀನಾ ಸುಲ್ತಾನ

ಆ) ಎಸ್, ಕೃಷ್ಣ ಕುಮಾರ್

ಇ) ಆಸಿಫ್ ಇಕ್ಬಾಲ್

ಈ) ಕ್ರಿಸ್ಟಿ ವಿಜಯನ್ ಪೌಲ್

ಎಸ್, ಕೃಷ್ಣ ಕುಮಾರ್

ಕರ್ನಾಟಕ ಪ್ರಾದೇಶಿಕ ಆರ್ಥಿಕ ವ್ಯಾಪಾರ ಸಂಸ್ಥೆಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ಚಾಲನೆ ನೀಡಿದರು. ರಾಜ್ಯದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಆರಂಭಿಸಲು ಬಯಸುವ ದೇಶಿಯ ಮತ್ತು ವಿದೇಶಿ ಕಂಪೆನಿಗಳಿಗೆ ಅನುಕೂಲಕರ ವಾತಾವರಣ ಸೃಷ್ಟಿಸುವ ಕೆಲಸವನ್ನು ಕರ್ನಾಟಕ ಪ್ರಾದೇಶಿಕ ಆರ್ಥಿಕ ವ್ಯಾಪಾರ ಸಂಸ್ಥೆ ಮಾಡಲಿದೆ. ಮಾಜಿ ಐಎಎಸ್ ಅಧಿಕಾರಿ ಎಸ್ ಕೃಷ್ಣಕುಮಾರ್ ಸಂಸ್ಥೆಯ ಅಧ್ಯಕ್ಷರು ಹಾಗೂ ಶಬೀನಾ ಸುಲ್ತಾನ್ ಇದರ ಉಪಾಧ್ಯಕ್ಷರು.

55. 2015 ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ವಿಭಾಗದಲ್ಲಿ ಡಾ.ರಾಜ್ ಕುಮಾರ್ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಭಾರತಿ ವಿಷ್ಣುವರ್ದನ್

ಆ) ಹರಿಣಿ

ಇ) ಅರುಂದತಿ ನಾಗ್

ಈ) ಸುಮಿತ್ರ ದೇವಿ

ಹರಿಣಿ

ಹಿರಿಯ ನಟಿ ಹರಿಣಿ ರವರನ್ನು 2015 ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಯ ಡಾ.ರಾಜ್ ಕುಮಾರ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. 1950 ರಿಂದ 1970 ರವರೆಗೆ 29ಕ್ಕೂ ಹೆಚ್ಚು ಚಿತ್ರಗಳಲ್ಲಿ ಹರಿಣಿರವರು ನಟಿಸಿದ್ದಾರೆ. ಜಗನ್ಮೋಹಿನಿ ಚಿತ್ರ ಅವರಿಗೆ ಹೆಚ್ಚು ಖ್ಯಾತಿ ತಂದುಕೊಟ್ಟಿತ್ತು. ಪ್ರಶಸ್ತಿಯು 2 ಲಕ್ಷ ನಗದು ಮತ್ತು 50 ಗ್ರಾಂ ಚಿನ್ನದ ನಾಣ್ಯವನ್ನು ಒಳಗೊಂಡಿದೆ.

56. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿರುವ ಹುಲಿ ಸಂರಕ್ಷಣಾ ಧಾಮಗಳ ಸಂಖ್ಯೆ ಎಷ್ಟು?

ಅ) ಎರಡು

ಆ) ಐದು

ಇ) ಎಂಟು

ಈ) ಏಳು

ಐದು

ಕರ್ನಾಟಕದಲ್ಲಿ ಐದು ಹುಲಿ ಸಂರಕ್ಷಣಾ ಧಾಮಗಳಿವೆ ಅವುಗಳೆಂದರೆ ಬಂಡೀಪುರ, ಭದ್ರಾ, ದಾಂಡೇಲಿ-ಅಂಶಿ, ನಾಗರಹೊಳೆ, ಬಿಳಿಗಿರಿ ರಂಗನಬೆಟ್ಟ.

57. ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆಗೊಳಿಸದ 100 ಸ್ಮಾರ್ಟ್ ಸಿಟಿ ಪಟ್ಟಿಯಲ್ಲಿ ಸ್ಥಾನ ಪಡೆದ ಕರ್ನಾಟಕದ ನಗರಗಳನ್ನು ಗುರುತಿಸಿ?

ಅ) ಶಿವಮೊಗ್ಗ, ಮಂಗಳೂರು, ದಾವಣಗೆರೆ, ಬೆಳಗಾವಿ

ಆ) ಬೆಂಗಳೂರು, ಮಂಗಳೂರು, ದಾವಣಗೆರೆ, ಬೆಳಗಾವಿ

ಇ) ಶಿವಮೊಗ್ಗ, ಬೆಂಗಳೂರು, ದಾವಣಗೆರೆ, ಬೆಳಗಾವಿ

ಈ) ಧಾರಾವಾಡ ಮಂಗಳೂರು, ದಾವಣಗೆರೆ, ಬೆಳಗಾವಿ

ಶಿವಮೊಗ್ಗ, ಮಂಗಳೂರು, ದಾವಣಗೆರೆ, ಬೆಳಗಾವಿ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಸ್ಮಾರ್ಟ್ ಸಿಟಿ ಯೋಜನೆಯ 100 ನಗರಗಳ ಆಯ್ಕೆ ಪಟ್ಟಿಹೊರಬಿದ್ದಿದೆ. ರಾಜ್ಯದ ಶಿವಮೊಗ್ಗ, ಮಂಗಳೂರು, ಬೆಳಗಾವಿ, ದಾವಣಗೆರೆ ಸೇರಿ ನಾಲ್ಕು ನಗರಗಳು 48 ಸಾವಿರ ಕೋಟಿಗಳ ಬೃಹತ್ ಯೋಜನೆಯಲ್ಲಿ ಸ್ಥಾನ ಗಿಟ್ಟಿಸಿವೆ. ಆದರೆ ಕರ್ನಾಟಕದ ರಾಜಧಾನಿ ಬೆಂಗಳೂರು ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲವಾಗಿದೆ.

58. ಕರ್ನಾಟಕದ ಕದ್ರ (Kadra) ಜಲವಿದ್ಯುತ್ ಉತ್ಪಾದನೆ ಯೋಜನೆಯನ್ನು ಯಾವ ನದಿಯ ಮೇಲೆ ನಿರ್ಮಿಸಲಾಗಿದೆ?

ಅ) ಕಾಳಿನದಿ

ಆ) ಹೇಮಾವತಿ

ಇ) ಮಲಪ್ರಭಾ

ಈ) ಭೀಮಾ

ಕಾಳಿನದಿ

ಕದ್ರ (Kadra)ಜಲವಿದ್ಯುತ್ ಉತ್ಪಾದನೆ ಯೋಜನೆ ಉತ್ತರಕನ್ನಡ ಜಿಲ್ಲೆಯಲ್ಲಿದ್ದು, ಕಾಳಿನದಿ ಮೇಲೆ ನಿರ್ಮಿಸಲಾಗಿದೆ. ಈ ಯೋಜನೆಯ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 150 ಮೆಗಾ ವ್ಯಾಟ್.

59. ಈ ಕೆಳಗಿನ ಯಾವ ಚರ್ಚ್ ಗೆ ಇತ್ತೀಚೆಗೆ ಬೆಸಿಲಿಕಾ ಸ್ಥಾನವನ್ನು ನೀಡಲಾಯಿತು?

ಅ) ಸೆಂಟ್ ಫಿಲೋಮಿನ ಕ್ಯಾಥಡ್ರೆಲ್, ಮೈಸೂರು

ಆ) ಸಂತ ಲಾರೆನ್ಸ್, ಅತ್ತೂರು, ಉಡುಪಿ

ಇ) ಇನ್ ಫ್ಯಾಂಟ್ ಜೆಸಸ್ ಚರ್ಚ್, ಬೆಂಗಳೂರು

ಈ) ಸೆಂಟ್ ಮೈಕಲ್ ಚರ್ಚ್, ಮಡಿಕೇರಿ

ಸಂತ ಲಾರೆನ್ಸ್, ಅತ್ತೂರು, ಉಡುಪಿ

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಅತ್ತೂರಿನ ಸಂತ ಲಾರೆನ್ಸರ ಚರ್ಚನ್ನು ಬೆಸಿಲಿಕಾ ಎಂದು ಘೋಷಿಸಲಾಗಿದೆ. ಆ ಮೂಲಕ ಕರ್ನಾಟಕದ 2ನೇ ಬೆಸಿಲಿಕಾ ಇದಾಗಿದೆ. ವ್ಯಾಟಿಕನ್ನಲ್ಲಿರುವ ಜಗದ್ಗುರು ಪೋಪ್ ಫ್ರಾನ್ಸಿಸ್ ರವರು ಸಂತ ಲಾರೆನ್ಸ್ ಚರ್ಚ್ ಗೆ ಬೆಸಿಲಿಕಾ ಸ್ಥಾನವನ್ನು ನೀಡಿದ್ದಾರೆ. ಸೆಂಟ್ ಮೆರಿಸ್, ಬೆಂಗಳೂರು ರಾಜ್ಯದ ಮೊದಲ ಬೆಸಿಲಿಕಾ.

www.karunaduexams.com

60. ದೇಶದ ಎರಡನೇ “ನ್ಯಾನೋ ಮತ್ತು ಮೃದು ಪದಾರ್ಥಗಳ ವಿಜ್ಞಾನ ಕೇಂದ್ರ” ರಾಜ್ಯದ ಯಾವ ಪ್ರದೇಶದಲ್ಲಿ ತಲೆ ಎತ್ತಲಿದೆ?

ಅ) ಮೈಸೂರು

ಆ) ಹೊಸದುರ್ಗ

ಇ) ನೆಲಮಂಗಲ

ಈ) ತುಮಕೂರು

ನೆಲಮಂಗಲ

ದೇಶದ ಎರಡನೇ “ನ್ಯಾನೋ ಮತ್ತು ಮೃದು ಪದಾರ್ಥಗಳ ವಿಜ್ಞಾನ ಕೇಂದ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ಶಿವನಪುರದ ಬಳಿ ಸ್ಥಾಪನೆಯಾಗಲಿದೆ. ಕೇಂದ್ರ ಸರ್ಕಾರ ನಾಲ್ಕು ನ್ಯಾನೋ ಕೇಂದ್ರಗಳ ಸ್ಥಾಪನೆಗೆ ಅನುಮತಿ ನೀಡಿದ್ದು, ಮೊಹಾಲಿಯಲ್ಲಿ ಈಗಾಗಲೇ ಒಂದು ಕಾರ್ಯನಿರ್ವಹಿಸುತ್ತಿದೆ.

61. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಈಗಿನ ಅಧ್ಯಕ್ಷರು ಯಾರು?

ಅ) ಲಕ್ಷ್ಮೀ ಹೆಬ್ಬಾಳ್ಕರ್

ಆ) ಮಂಜುಳಾ ಮಾನಸ

ಇ) ಜಯಶ್ರೀ ಚಂದ್ರ

ಈ) ರಾಣಿ ಸತೀಶ್

ಮಂಜುಳಾ ಮಾನಸ

ಮಂಜುಳಾ ಮಾನಸ ರವರು ಈಗಿನ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಗಿದ್ದಾರೆ. ಜೂನ್ 2014 ರಲ್ಲಿ ಇವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಇವರ ಅಧಿಕಾರ ಅವಧಿ ಮೂರು ವರ್ಷ.

62. ನವಿಲುಗಳ ಸಂರಕ್ಷಣೆಗಾಗಿ ಮೀಸಲಿಟ್ಟಿರುವ ರಾಜ್ಯದ ಅಭಯಾರಣ್ಯ ಯಾವುದು?

ಅ) ಬಂಕಾಪುರ ಅಭಯಾರಣ್ಯ

ಆ) ರಂಗನತಿಟ್ಟು ಪಕ್ಷಿಧಾಮ

ಇ) ಮಂಡಗದ್ದೆ ಪಕ್ಷಿಧಾಮ

ಈ) ಬೊನಲ್ ಪಕ್ಷಿಧಾಮ

ಬಂಕಾಪುರ ಅಭಯಾರಣ್ಯ

ಹಾವೇರಿ ಜಿಲ್ಲೆಯ ಬಂಕಾಪುರ ಅಭಯಾರಣ್ಯ ನವಿಲುಗಳ ಸಂರಕ್ಷಣೆ ಮತ್ತು ಸಂತಾನೋತ್ಪಾತಿ ಏಳಿಗೆಗಾಗಿ ಮೀಸಲಿಟ್ಟಿರುವ ಅಭಯಾರಣ್ಯವಾಗಿದೆ. ಸುಮಾರು 139 ಎಕರೆ ವಿಸ್ತೀರ್ಣವನ್ನು ಹೊಂದಿರುವ ಈ ಪ್ರದೇಶವನ್ನು ಭಾರತ ಸರ್ಕಾರ ಜೂನ್ 9, 2006 ರಂದು ನವಿಲು ಅಭಯಾರಣ್ಯವೆಂದು ಘೋಷಿಸಿದೆ.

www.karunaduexams.com

63. ರಾಜ್ಯದಲ್ಲಿ ನವಜಾತ ಶಿಶು ಹಾಗೂ ಬಾಣಂತಿಯರ ಸಾವನ್ನು ತಪ್ಪಿಸುವ ಸಲುವಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಾವ ದೇಶದೊಂದಿಗೆ ಯೋಜನೆ ಜಾರಿಗೊಳಿಸಿದೆ?

ಅ) ಸಿಂಗಾಪುರ

ಆ) ಜಪಾನ್

ಇ) ಅಮೆರಿಕಾ

ಈ) ಸ್ವಿಟ್ಜರ್ಲ್ಯಾಂಡ್

ಸಿಂಗಾಪುರ

ರಾಜ್ಯದಲ್ಲಿನ ನವಜಾತ ಶಿಶು ಹಾಗೂ ಬಾಣಂತಿಯರ ಸಾವನ್ನು ತಪ್ಪಿಸುವ ನಿಟ್ಟಿನಲ್ಲಿ ಸಿಂಗಾಪುರ ಅಂತಾರಾಷ್ಟ್ರೀಯ ಫೌಂಡೇಷನ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಭಾಗಿತ್ವದ ವಿನೂತನ ಯೋಜನೆಗೆ ಚಾಲನೆ ನೀಡಲಾಯಿತು. ವಿಕಾಸಸೌಧ ಸಮ್ಮೇಳನ ಸಭಾಂಗಣದಲ್ಲಿ ಆರೋಗ್ಯ ಸಚಿವ ಕೆ.ಆರ್. ರಮೇಶ್ ಕುಮಾರ್ ಅನುಪಸ್ಥಿತಿ ಯಲ್ಲಿ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್, ಸಿಂಗಾಪುರ ಅಂತಾರಾಷ್ಟ್ರೀಯ ಫೌಂಡೇಷನ್ ಗವರ್ನರ್ ಲಿಯಾನ್ ವಿ. ಚ್ಯೋ ಉಪಸ್ಥಿತಿಯಲ್ಲಿ ಯೋಜನೆ ಯನ್ನು ಉದ್ಘಾಟಿಸಲಾಯಿತು.

64. ಸಿಂದಗಿ ಸಾರಂಗಮಠದ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ನೀಡುತ್ತಿರುವ ಮೊದಲ 'ಭಾಸ್ಕರ' ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಕಿರಣ್ ಕುಮಾರ್

ಆ) ಪ್ರೊ.ಸಿ.ಎನ್.ಆರ್ ರಾವ್

ಇ) ಮಾಧವನ್ ನಾಯರ್

ಈ) ಸತೀಶ್ ಕುಮಾರ್

ಪ್ರೊ.ಸಿ.ಎನ್.ಆರ್ ರಾವ್

ಗಣಿತತಜ್ಞ, ಖಗೋಳವಿಜ್ಞಾನಿ ಭಾಸ್ಕರಾಚಾರ್ಯರ (ಭಾಸ್ಕರ-2) ಸ್ಮರಣಾರ್ಥ, ಸಿಂದಗಿ ಸಾರಂಗಮಠದ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ನೀಡುತ್ತಿರುವ ಮೊದಲ 'ಭಾಸ್ಕರ' ಪ್ರಶಸ್ತಿಗೆ ಪ್ರೊ.ಸಿ.ಎನ್.ಆರ್ ರಾವ್ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ರೂ 1ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಪ್ರತಿ ವರ್ಷ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನ ತಿಳಿಸಿದೆ.

65. ಇತ್ತೀಚೆಗೆ ನಿಧನರಾದ ಕೆ.ಸಿ.ರೆಡ್ಡಿರವರು ಯಾವ ಕ್ಷೇತ್ರದಲ್ಲಿ ಪ್ರಸಿದ್ಧಿ ಹೊಂದಿದ್ದರು?

ಅ) ನೀರಾವರಿ

ಆ) ಸಾಹಿತಿ



www.karunaduexams.com

ಇ) ಸಂಗೀತಾ

ಈ) ಸಿನಿಮಾ

ನೀರಾವರಿ

ಕೆ.ಸಿ.ರೆಡ್ಡಿ ರವರು ಕರ್ನಾಟಕ ರಾಜ್ಯದ ಖ್ಯಾತ ನೀರಾವರಿ ತಜ್ಞ. 1950ರಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜನಿಯರ್ ಆಗಿ ಸೇವೆ ಆರಂಭಿಸಿದ ರೆಡ್ಡಿ, ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕರಾಗಿ, ಇಂಧನ , ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗಳ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು. ರೆಡ್ಡಿರವರ ಕಾರ್ಯದಕ್ಷತೆಯನ್ನು ಗಮನಿಸಿದ ಸರ್ಕಾರ ಇವರನ್ನು 1994 ರಿಂದ 2004ರವರೆಗೆ ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತ್ತು. 2013 ರಿಂದ 2016ರವರೆಗೂ ಅವರು ಕೃಷ್ಣ ಜಲಭಾಗ್ಯ ನಿಗಮದ ತಾಂತ್ರಿಕ ಉಪಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ರೆಡ್ಡಿರವರಿಗೆ ಕನ್ನಡರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ ಸಂದಿವೆ.

66. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ದೇಶದಲ್ಲಿ ಫೆಲ್ಸೈಟ್ ಕಲ್ಲು (Felsite Rocks) ದೊರೆಯುವ ಏಕೈಕ ರಾಜ್ಯ ಕರ್ನಾಟಕ

II) ಕರ್ನಾಟಕದ ಶ್ರೀರಂಗಪಟ್ಟಣ ಮತ್ತು ಮೈಸೂರುನಲ್ಲಿ ಫೆಲ್ಸೈಟ್ ಕಲ್ಲು ಹೆಚ್ಚಾಗಿ ದೊರೆಯುತ್ತದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿಯಾಗಿವೆ

ಈ) ಎರಡು ಹೇಳಿಕೆ ತಪ್ಪಾಗಿವೆ

ಎರಡು ಹೇಳಿಕೆ ಸರಿಯಾಗಿವೆ

67. ರಾಜ್ಯ ಸಚಿವ ಸಂಪಟು ಇತ್ತೀಚೆಗೆ ಅನುಮೋದನೆ ನೀಡಿದ "ಚಡಚಣ ಏತ ನೀರಾವರಿ" ಯೋಜನೆಯನ್ನು ಯಾವ ನದಿ ಮೇಲೆ ನಿರ್ಮಿಸಲಾಗುವುದು?

ಅ) ಮಲಪ್ರಭಾ

ಆ) ಘಟಪ್ರಭಾ

ಇ) ಭೀಮಾ

ಈ) ಕಾಳಿ

ಭೀಮಾ

www.karunaduexams.com

ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಚಡಚಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ನೀರಾವರಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ರೂ 413.20 ಕೋಟಿ ಅಂದಾಜು ಮೊತ್ತದ ಚಡಚಣ ಏತ ನೀರಾವರಿಗೆ ರಾಜ್ಯ ಸಚಿವ ಸಂಪಟು ಅನುಮೋದನೆ ನೀಡಿದೆ. ಚಡಚಣ, ಬರಡೋಲ, ಗೋಡಿಹಾಳ, ಹಾವಿನಹಾಳ, ಹಾಲಹಳ್ಳಿ, ಶಿರಡೋಣ, ರೇವತಗಾಂವ್, ನಿವರಗಿ ಹಾಗೂ ಇತರ ಗ್ರಾಮಗಳು ಬರಪೀಡಿತವಾಗಿದ್ದು, ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ಈ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಭೀಮಾ ನದಿಗೆ ಅಡ್ಡಲಾಗಿ ಈಗಾಗಲೇ ನಿರ್ಮಾಣ ಮಾಡಲಾಗುತ್ತಿರುವ ಸಂಖ್ ಬ್ಯಾರೇಜ್ನ ಮೇಲ್ಭಾಗದಲ್ಲಿ ಚಡಚಣ ಏತ ನೀರಾವರಿ ಯೋಜನೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ ಭೀಮಾ ನದಿಯಿಂದ 1.72 ಟಿಎಂಸಿ ಅಡಿ ನೀರನ್ನು ಪಡೆಯಲಾಗುವುದು. 9,215 ಹೆಕ್ಟೇರ್ ಪ್ರದೇಶದಲ್ಲಿ ಕೃಷಿಗೆ, ಜನ, ಜಾನುವಾರುಗಳ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

68. ಇತ್ತೀಚೆಗೆ ನಿಧನರಾದ "ಪ್ರಮೀಳಾ ಗುಡೂರು" ಯಾವ ಕ್ಷೇತ್ರದಲ್ಲಿ ಪ್ರಸಿದ್ಧಿ ಹೊಂದಿದ್ದರು?

ಅ) ಶಾಸ್ತ್ರೀಯ ಸಂಗೀತ

ಆ) ರಂಗಭೂಮಿ

ಇ) ಸಾಹಿತ್ಯ

ಈ) ಜಾನಪದ

ರಂಗಭೂಮಿ

ವೃತ್ತಿ ರಂಗಭೂಮಿಯ ಹಿರಿಯ ಕಲಾವಿದೆ ಪ್ರಮೀಳಾ ಗುಡೂರು ಅವರು ಶುಕ್ರವಾರ ನಿಧನರಾದರು. ಐದು ದಶಕಗಳ ಕಾಲ ಕರ್ನಾಟಕದ ಹೆಸರಾಂತ ನಾಟಕ ಕಂಪನಿಗಳಲ್ಲಿ ಬಣ್ಣ ಹಚ್ಚಿದ್ದ ಅವರು ವೃತ್ತಿ ರಂಗಭೂಮಿಯಲ್ಲಿ ಹೆಸರಾಗಿದ್ದರು. ಗುಬ್ಬಿ ವೀರಣ್ಣ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಗೌರವ- ಪುರಸ್ಕಾರಗಳು ಅವರಿಗೆ ಸಂದಿವೆ.

69. ರಾಜ್ಯದಲ್ಲಿಯೇ ಪ್ರಪ್ರಥಮ ಬಾರಿಗೆ ಉಪಗ್ರಹ ಆಧಾರಿತ ನಗರ ಆಸ್ತಿ ಮಾಲಕತ್ವದ ಯೋಜನೆ' (ಯುಪಿಒಆರ್) ಯನ್ನು ಯಾವ ನಗರದಲ್ಲಿ ಅನುಷ್ಠಾನಗೊಳಿಸಲಾಗಿದೆ?

ಅ) ಬೆಂಗಳೂರು

ಆ) ಧಾರವಾಡ

ಇ) ಶಿವಮೊಗ್ಗ

ಈ) ತುಮಕೂರು

ಶಿವಮೊಗ್ಗ

www.karunaduexams.com

ರಾಜ್ಯದಲ್ಲಿಯೇ ಪ್ರಪ್ರಥಮ ಬಾರಿಗೆ ಶಿವಮೊಗ್ಗ ನಗರದಲ್ಲಿ 'ಉಪಗ್ರಹ ಆಧಾರಿತ ನಗರ ಆಸ್ತಿ ಮಾಲಕತ್ವದ ಯೋಜನೆ' (ಯುಪಿಒಆರ್) ಯನ್ನು ಕಂದಾಯ ಇಲಾಖೆ ಅನುಷ್ಠಾನಗೊಳಿಸಿದೆ. ಇದೀಗ ಶಿವಮೊಗ್ಗ ನಗರದಲ್ಲಿ ಯಾವುದೇ ಸ್ಥಿರಾಸ್ತಿಯ ನೋಂದಣಿ-ಪರಬಾರೆ ಮಾಡಲು ಪ್ರಾಪರ್ಟಿ ರೆಕಾರ್ಡ್ (ಪಿ.ಆರ್)ಕಾರ್ಡ್ ಹೊಂದುವುದು ಕಡ್ಡಾಯವಾಗಿದೆ. ಇದಕ್ಕಾಗಿಯೇ ಶಿವಮೊಗ್ಗ ನಗರದ ಉಪ ವಿಭಾಗಾಧಿಕಾರಿ ಕಚೇರಿ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಸುಸಜ್ಜಿತ ಯುಪಿಒಆರ್ ಕಚೇರಿಯನ್ನೂ ತೆರೆಯಲಾಗಿದೆ. ಕಳೆದ ಒಂದೂವರೆ ವರ್ಷಗಳಿಂದ ಈ ಕಚೇರಿ ಕಾರ್ಯನಿರ್ವಹಣೆ ಮಾಡುತ್ತಿದ್ದು, ಸರ್ವೇ ಇಲಾಖೆ ಈ ಕಚೇರಿಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದೆ. ಖಾಸಗಿ ಸಂಸ್ಥೆಯ ಹಲವು ಸಿಬ್ಬಂದಿ ಕಚೇರಿಯಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ.

70. ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವಾಲಯವು ಕರ್ನಾಟಕದ ನಗರ ಪ್ರದೇಶದ ಬಡ ಜನರಿಗೆ ನಿರ್ಮಿಸಲು ಎಷ್ಟು ವಸತಿ ಘಟಕಗಳನ್ನು ಮಂಜೂರು ಮಾಡಿದೆ?

ಅ) 36,254

ಆ) 40,200

ಇ) 35,312

ಈ) 28,700

36,254

ಕರ್ನಾಟಕ 468 ಕೋಟಿ ರೂ.ವೆಚ್ಚದಲ್ಲಿ 36,254 ಮನೆಗಳನ್ನು ನಗರ ಪ್ರದೇಶದ ಬಡ ಜನರಿಗೆ ನಿರ್ಮಿಸಲು ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವಾಲಯವು ಅನುಮೋದನೆ ನೀಡಿದೆ. ಹೂಪಾ(HUPA) ಕಾರ್ಯದರ್ಶಿ ಡಾ.ನಂದಿತಾ ಮುಖರ್ಜಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರೀಯ ಅಂತರ ಸಚಿವಾಲಯಗಳ ಮಂಜೂರಾತಿ ಮತ್ತು ನಿಗಾ ಸಮಿತಿಯು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಮನೆಗಳನ್ನು ನಿರ್ಮಿಸಲು ಅನುಮೋದನೆ ನೀಡಿದೆ.

71. ಕರ್ನಾಟಕ ಕೃಷಿ ಬೆಲೆ ಆಯೋಗದ ಈಗಿನ ಅಧ್ಯಕ್ಷರು ಯಾರು?

ಅ) ಹನುಮನಗೌಡ ಬೆಳಗುರ್ಕಿ

ಆ) ಪ್ರಕಾಶ್ ಕಮ್ಮರಡಿ

ಇ) ನರಸಿಂಹ ರೆಡ್ಡಿ

ಈ) ಕುರುಬೂರು ಚಂದ್ರಶೇಖರ್

ಪ್ರಕಾಶ್ ಕಮ್ಮರಡಿ

ಡಾ.ಟಿ.ಎಸ್.ಪ್ರಕಾಶ್ ಕಮ್ಮರಡಿ ಅವರು ಕರ್ನಾಟಕ ಕೃಷಿ ಬೆಲೆ ಆಯೋಗದ ಈಗಿನ ಅಧ್ಯಕ್ಷರು. ಅತ್ಯುತ್ತಮ ಶೈಕ್ಷಣಿಕ ಹಿನ್ನಲೆ ಮತ್ತು ಕೃಷಿ ಮಾರುಕಟ್ಟೆ ಸೇರಿದಂತೆ ಕೃಷಿ ಅರ್ಥಶಾಸ್ತ್ರದಲ್ಲಿ ಪರಿಣಿತಿ ಹೊಂದಿರುವ ಕೃಷಿ ತಜ್ಞರವರ ಅಧ್ಯಕ್ಷತೆಯ ನೇತೃತ್ವದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗ ಕಾರ್ಯ ನಿರ್ವಹಿಸುತ್ತದೆ.

www.karunaduexams.com

ಅಧ್ಯಕ್ಷರಿಗೆ ಸಹಾಯಕರಾಗಿ ಐವರು ಸದಸ್ಯರಿದ್ದು, ಇದರಲ್ಲಿ ಸರ್ಕಾರದಿಂದ ಒಬ್ಬರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವರು. ಐದು ಸದಸ್ಯರುಗಳಲ್ಲಿ ಕೃಷಿ ಅರ್ಥಶಾಸ್ತ್ರ, ಕೃಷಿ ಮಾರಾಟ, ಕೃಷಿ ನಿರ್ವಹಣೆ ಇತ್ಯಾದಿ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಇಬ್ಬರು ಅಧಿಕಾರಿ ಸದಸ್ಯರು. ಇಬ್ಬರು ಅಧಿಕಾರೇತರ ಸದಸ್ಯರು - ಪ್ರಗತಿಪರ ದೃಷ್ಟಿಕೋನವನ್ನು ಹೊಂದಿರುವ ರೈತರು ಮತ್ತು ಕೃಷಿ ಉತ್ಪನ್ನಗಳ ಮಾರಟದ ಬಗ್ಗೆ ಅನುಭವ ಹೊಂದಿರುವವರು.

72. ಈ ಕೆಳಗಿನ ಯಾವ ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರ ಎರಡು ರಾಸಾಯನಿಕ ಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸಲು ಸಮ್ಮತಿಸಿದೆ?

ಅ) ದಾವಣಗೆರೆ ಮತ್ತು ರಾಯಚೂರು

ಆ) ರಾಯಚೂರು ಮತ್ತು ಕೋಲಾರ

ಇ) ಧಾರವಾಡ ಮತ್ತು ಬೆಳಗಾವಿ

ಈ) ಮೈಸೂರು ಮತ್ತು ತುಮಕೂರು

ದಾವಣಗೆರೆ ಮತ್ತು ರಾಯಚೂರು

ಬಹುದಿನಗಳ ಬೇಡಿಕೆಯಂತೆ ರಾಜ್ಯದಲ್ಲಿ ಕೇಂದ್ರ ಸರ್ಕಾರ ಎರಡು ರಾಸಯನಿಕ ರಸಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ. ಉತ್ತರ ಕರ್ನಾಟಕದ ಮಧ್ಯಭಾಗವಾದ ರಾಯಚೂರು ಮತ್ತು ರಾಜ್ಯದ ಎರಡನೇ ರಾಜದಾನಿ ಎನಿಸಿಕೊಂಡಿರುವ ಮ್ಯಾಚೆಂಸ್ಟಾರ್ ಖ್ಯಾತಿಯ ದಾವಣಗೆರೆಯಲ್ಲಿ ಈ ಎರಡೂ ಕಾರ್ಖಾನೆಗಳು ಆರಂಭವಾಗಲಿವೆ. ಸುಮಾರು 10ಸಾವಿರ ಕೋಟಿ ಬಂಡವಾಳ ಹೂಡಿಕೆಯಲ್ಲಿ ವಾರ್ಷಿಕ ನೂರು ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಉತ್ಪಾದನೆ ಮಾಡುವ ಈ ಕಾರ್ಖಾನೆಗಳಿಗೆ ದಾಬೋಲ್‌ನಿಂದ ಬಿಡದಿಗೆ ಸರಬರಾಜಾಗುವ ಗ್ಯಾಸ್ ಪಡೆಯಲು ತೀರ್ಮಾನಿಸಲಾಗಿದೆ. ಸಮತೋಲವನ್ನು ಸರಿದೂಗಿಸಲು ಮುಂದಾಗಿರುವ ಕೇಂದ್ರ ಸರ್ಕಾರ ಮೊದಲ ಹಂತದಲ್ಲೇ ರಾಯಚೂರು ಹಾಗೂ ದಾವಣಗೆರೆ ಕಾರ್ಖಾನೆಗಳನ್ನು ಮಂಜೂರು ಮಾಡಿದೆ ಎಂದು ತಿಳಿದು ಬಂದಿದೆ. ಮುಂದಿನ ದಿನಗಳಲ್ಲಿ ವಿಜಯಪುರ ಹಾಗೂ ಮೈಸೂರು ಇಲ್ಲವೇ ಚಾಮರಾಜನಗರದಲ್ಲಿ ಈ ಕಾರ್ಖಾನೆಗಳು ಪ್ರಾರಂಭವಾಗಲಿವೆ.

73. ಈ ಕೆಳಗಿನ ಯಾವ ಬಂದರನ್ನು ಪೂರ್ಣ ಪ್ರಮಾಣದ ಬಂದರನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ?

ಅ) ತದ್ರಿ ಬಂದರು

ಆ) ಬೇಲೆಕೇರಿ ಬಂದರು

ಇ) ಭಟ್ಕಳ ಬಂದರು

ಈ) ಮಲ್ಪೆ ಬಂದರು

ಬೇಲೆಕೇರಿ ಬಂದರು

www.karunaduexams.com

ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಬಂದರನ್ನು ಪೂರ್ಣ ಪ್ರಮಾಣದ ಬಂದರನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದಾಗಿ ಕೇಂದ್ರ ಭೂ ಸಾರಿಗೆ, ರಾಷ್ಟ್ರೀಯ ಹೆದ್ದಾರಿ ಹಾಗೂ ಬಂದರು ಖಾತೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು. ಭೌಗೋಳಿಕವಾಗಿ, ನೈಸರ್ಗಿಕವಾಗಿ ಪೂರಕ ವಾತಾವರಣ ಹೊಂದಿರುವ ಬೇಲೆಕೇರಿ ಉತ್ತಮ ಬಂದರಾಗುವ ಅರ್ಹತೆ ಹೊಂದಿದೆ. ಅದನ್ನು ಅಭಿವೃದ್ಧಿಪಡಿಸಿದಲ್ಲಿ ಆ ಭಾಗದ ಅಭಿವೃದ್ಧಿಯೂ ಸಾಧ್ಯವಾಗಲಿದೆ ಎಂದರು.ಕರ್ನಾಟಕ ಸರ್ಕಾರವು ಬಂದರಿನ ಅಭಿವೃದ್ಧಿ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಪರವಾನಗಿ ಪಡೆದು ಪ್ರಸ್ತಾವನೆ ಸಲ್ಲಿಸಿದರೆ ಕೇಂದ್ರ ಸರ್ಕಾರವು ರೂ 6000 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಸಿದ್ಧವಿದೆ ಎಂದಿದ್ದಾರೆ.

74. ಇತ್ತೀಚೆಗೆ ಸುದ್ದಿಯಲ್ಲಿದ್ದ ರಾಜ್ಯದ "ಕಲ್ಯಾಣ ಗ್ರಾಮ ಯೋಜನೆ"ಗೆ ಸಂಬಂಧಿಸಿದಂತೆ ಯಾವ ಹೇಳಿಕೆ ಸರಿಯಾಗಿದೆ?

I) ಈ ಯೋಜನೆಯನ್ನು ಆರಂಭಿಕ ಹಂತದಲ್ಲಿ ಚಿತ್ರದುರ್ಗ ಜಿಲ್ಲೆಯ ಎರಡು ಗ್ರಾಮಗಳನ್ನು ಪ್ರಾಯೋಗಿಕವಾಗಿ ನಡೆಸಲು ಉದ್ದೇಶಿಸಲಾಗಿದೆ

II) ರಾಜ್ಯ ಕೃಷಿ ಇಲಾಖೆಯು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ

ಈ ಕೆಳಗಿನ ಕೋಡ್ ಗಳಿಂದ ಸರಿಯಾದ ಉತ್ತರವನ್ನು ಆರಿಸಿ:

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿಯಾಗಿವೆ

ಈ) ಎರಡು ಹೇಳಿಕೆ ತಪ್ಪಾಗಿವೆ

ಹೇಳಿಕೆ ಒಂದು ಮಾತ್ರ

ರೈತರು ಕೃಷಿಯಿಂದ ವಿಮುಖರಾಗುತ್ತಿರುವುದನ್ನು ಮನಗಂಡಿರುವ ಕರ್ನಾಟಕ ಕೃಷಿ ಬೆಲೆ ಆಯೋಗ, ಗ್ರಾಮಗಳನ್ನು ದತ್ತು ಪಡೆದು ಅಲ್ಲಿ ತಾನೇ ಸ್ವಯಂಕೃಷಿ ನಡೆಸಿ ಆದಾಯವೃದ್ಧಿಗೆ ಮಾರ್ಗ ಹುಡುಕುವ ಸಲುವಾಗಿ ದೇಶದಲ್ಲೇ ಮೊದಲ ಬಾರಿ "ಕಲ್ಯಾಣ ಗ್ರಾಮ ಯೋಜನೆ'ಯನ್ನು ಜಾರಿಗೊಳಿಸಿದೆ. ಯೋಜನೆಗೆ ಆರಂಭಿಕ ಹಂತದಲ್ಲಿ ಚಿತ್ರದುರ್ಗ ಜಿಲ್ಲೆಯ ಎರಡು ಗ್ರಾಮಗಳನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲು ಉದ್ದೇಶಿಸಲಾಗಿದ್ದು, ಇದರ ಯಶಸ್ಸನ್ನು ಆಧರಿಸಿ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಿಸಲು ಚಿಂತನೆ ನಡೆದಿದೆ. ಹಿರಿಯೂರು ತಾಲೂಕಿನ ಒಂದು ಗ್ರಾಮ ಹಾಗೂ ಬುಡಕಟ್ಟು ಸಮುದಾಯದವರೇ ಹೆಚ್ಚಿರುವ ಚಳ್ಳಕೆರೆ ತಾಲೂಕಿನ ಒಂದು ಗ್ರಾಮವನ್ನು ಈ ಯೋಜನೆಗೆ ಆಯ್ಕೆ ಮಾಡಲಾಗುತ್ತದೆ. ಕಲ್ಯಾಣ ಗ್ರಾಮಯೋಜನೆಯಡಿ ಹಿರಿಯೂರು ತಾಲೂಕಿನ ಬಬ್ಬೂರಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೇಂದ್ರ ಕಚೇರಿ ತೆರೆಯಲಾಗುತ್ತದೆ.

75. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ರಾಜ್ಯ ಸರ್ಕಾರ ಪಾವಗಡದಲ್ಲಿ ಸ್ಥಾಪಿಸಲಿರುವ ಸೌರ ವಿದ್ಯುತ್ ಘಟಕ ದೇಶದ ಅತಿ ದೊಡ್ಡ ವಿದ್ಯುತ್ ಘಟಕ ಆಗಲಿದೆ.

II) ಉದ್ದೇಶಿತ ಈ ವಿದ್ಯುತ್ ಘಟಕದ ಸಾಮರ್ಥ್ಯ 2000 ಮೆ.ವ್ಯಾ

III) ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ ಇದರಲ್ಲಿ 1500 ಮೆ.ವ್ಯಾ ಉತ್ಪಾದಿಸಲಿದೆ.

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) I & II ಮಾತ್ರ

ಆ) I & III ಮಾತ್ರ

ಇ) II & III ಮಾತ್ರ

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

ಕರ್ನಾಟಕ ರಾಜ್ಯ ಸರ್ಕಾರ ತುಮಕೂರು ಜಿಲ್ಲೆಯ ಪಾವಗಡದ ಬಳಿ 2000 ಮೆ.ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲಿದ್ದು, ಇದು ದೇಶದಲ್ಲಿಯೇ ದೊಡ್ಡ ಸೌರ ವಿದ್ಯುತ್ ಘಟಕ ಎನಿಸಲಿದೆ. ಆಂಧ್ರಪ್ರದೇಶದಲ್ಲಿ ತಲೆಯತ್ತಲಿರುವ 1000 ಮೆ.ವ್ಯಾ ಸೌರ ವಿದ್ಯುತ್ ಘಟಕ ಇದುವರೆಗೂ ದೇಶದ ಅತಿ ದೊಡ್ಡ ವಿದ್ಯುತ್ ಘಟಕ ಆಗಿತ್ತು. 2000 ಮೆ.ವ್ಯಾಟ್ ನಲ್ಲಿ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಷನ್ ಇದರಲ್ಲಿ 1500 ಮೆ.ವ್ಯಾ ಉತ್ಪಾದಿಸಲಿದೆ.

76. ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (IIHR) ಅಭಿವೃದ್ಧಿಪಡಿಸಿರುವ "ಆರ್ಕಾರಕ್ಷಕ" ಯಾವುದರ ತಳಿ ಆಗಿದೆ?

ಅ) ಬದನೆ ಕಾಯಿ

ಆ) ಟೊಮೊಟೊ

ಇ) ಕುಂಬಳಕಾಯಿ

ಈ) ಈರುಳ್ಳಿ

ಟೊಮೊಟೊ

ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು ಆರ್ಕಾರಕ್ಷಕ್ ಎಂಬ ಟೊಮೊಟೊ ತಳಿಯನ್ನು ಅಭಿವೃದ್ಧಿಪಡಿಸಿದೆ. ಅರ್ಕಾರಕ್ಷಕ್ ಟೊಮೊಟೊ ತಳಿಯು ಬೇರೆಲ್ಲಾ ತಳಿಗಳಿಗಿಂತ ವಿಶಿಷ್ಟವಾಗಿದೆ. ಮುಖ್ಯವಾಗಿ ರೋಗ ನಿರೋಧಕ ಶಕ್ತಿ, ಅಧಿಕ ಇಳುವರಿ ಹಾಗೂ ಅಧಿಕ ಬಾಳಿಕೆ ಹಾಗೂ ಸಾಗಾಣಿಕೆಗೆ ಸಹಕಾರಿಯಾಗಿದೆ. ಹಾಗಾಗಿ ರೈತರು ಹೆಚ್ಚಿನ ಆದಾಯ ಪಡೆಯಬಹುದು. ಈ ತಳಿಯನ್ನು ಭಾರತೀಯ ತೋಟಗಾರಿಕಾ ಸಂಸ್ಥೆಯ ಪ್ರಧಾನ ವಿಜ್ಞಾನಿ ಡಾ.ಎ.ಟಿ.ಸದಾಶಿವ ಮತ್ತು ತಂಡದವರು ಅಭಿವೃದ್ಧಿಪಡಿಸಿದ್ದು ಈ ತಳಿಯಿಂದ ಸಹಸ್ರಾರು ರೈತರಿಗೆ ಉಪಯುಕ್ತವಾಗಿದೆ. ಹಣ್ಣು ಗಟ್ಟಿಯಾಗಿದ್ದು ರಫ್ತಿಗೆ ಸಹಕಾರಿಯಾಗಿದೆ. ಉತ್ತಮ ಬಣ್ಣ ಮತ್ತು ರುಚಿಯನ್ನು ಹೊಂದಿದೆ.

www.karunaduexams.com

77. ಭದ್ರಾ ಮೇಲ್ದಂಡೆ ಮತ್ತು ಎತ್ತಿನ ಹೊಳೆ ಯೋಜನೆಗಳನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು ಯಾವ ಹೆಸರಿನಲ್ಲಿ ಹೊಸ ಜಲ ನಿಗಮ ಸ್ಥಾಪಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ?

ಅ) ಕೆ.ಸಿ.ರೆಡ್ಡಿ

ಆ) ವಿಶ್ವೇಶ್ವರಯ್ಯ

ಇ) ಸರ್ ಮಿರ್ಜಾ ಇಸ್ಮಾಯಿಲ್

ಈ) ಅಬ್ದುಲ್ ನಜೀರ್ ಸಾಬ್

ವಿಶ್ವೇಶ್ವರಯ್ಯ

ಭದ್ರಾ ಮೇಲ್ದಂಡೆ ಮತ್ತು ಎತ್ತಿನ ಹೊಳೆ ಯೋಜನೆಗಳನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಹೊಸ ಜಲ ನಿಗಮ ಸ್ಥಾಪಿಸಲು ತೀರ್ಮಾನಿಸಲಾಗಿದೆ. ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿಗಮದ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ. ಹೊಸ ನಿಗಮಕ್ಕೆ ವಿಶೇಷಾಧಿಕಾರಿಯಾಗಿ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಆರ್.ರುದ್ರಯ್ಯ ಅವರನ್ನು ಈಗಾಗಲೇ ನೇಮಿಸಲಾಗಿದ್ದು, ಅವರು ಪೂರ್ವಭಾವಿ ಕೆಲಸ ಆರಂಭಿಸಿದ್ದಾರೆ. ಹೊಸ ನಿಗಮದ ನಿರ್ದೇಶಕ ಮಂಡಳಿಗೆ 15 ಸದಸ್ಯರನ್ನು ನೇಮಿಸಲಾಗುವುದು. 12 ಸದಸ್ಯರನ್ನು ಒಳಗೊಂಡ ನಿರ್ದೇಶಕ ಮಂಡಳಿ ರಚಿಸಲು ಅವಕಾಶವಿದೆ

78. ರಾಜ್ಯ ಮಕ್ಕಳ ರಕ್ಷಣಾ ನೀತಿ-2016ಕ್ಕೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

I) ಮಕ್ಕಳ ನೀತಿಯನ್ನು ಜಾರಿ ಮಾಡಿದ ದೇಶದ ಮೊದಲ ರಾಜ್ಯ ಕರ್ನಾಟಕ

II) ರಾಜ್ಯ ಮಕ್ಕಳ ರಕ್ಷಣಾ ನೀತಿ-2016ನ್ನು ಕಾರ್ಮಿಕ ಇಲಾಖೆ ರೂಪಿಸಿದೆ

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಒಂದು ಮಾತ್ರ

ರಾಜ್ಯ ಮಕ್ಕಳ ರಕ್ಷಣಾ ನೀತಿ-2016ಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರೂಪಿಸಿದೆ. ದೇಶದಲ್ಲಿ ಮಕ್ಕಳ ನೀತಿಯನ್ನು ಜಾರಿ ಮಾಡಿದ ಮೊದಲ ರಾಜ್ಯ ಕರ್ನಾಟಕ. ಶಾಲಾ ಮಕ್ಕಳಿಗೆ ಪೋಸ್ಕೊ (ಮಕ್ಕಳ ವಿರುದ್ಧ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ) ಬಗ್ಗೆ ಜಾಗೃತಿ ಮೂಡಿಸಬೇಕು, ಶಾಲೆಯಲ್ಲಿ ಮಕ್ಕಳ ರಕ್ಷಣಾ ಸಮಿತಿ ರಚಿಸಬೇಕು ಎಂಬ ಅಂಶಗಳು ಸೇರಿದಂತೆ ಮಕ್ಕಳ ಆರೋಗ್ಯ ಹಾಗೂ ಹಾಗೂ ಶಾಲಾ ಬಸ್ಗಳ ಸುರಕ್ಷತೆ ಕುರಿತು ಶೈಕ್ಷಣಿಕ ಸಂಸ್ಥೆಗಳು ಅನುಸರಿಸಲೇಬೇಕಾದ ವಿವಿಧ ಮಾರ್ಗಸೂಚಿಗಳು ಈ ನೀತಿಯಲ್ಲಿವೆ.

www.karunaduexams.com

79. ಈ ಕೆಳಗಿನ ಯಾವ ಸಂಸ್ಥೆ ಬೆಂಗಳೂರಿನಲ್ಲಿ ಆಧಾರ್ ಆಧಾರಿತ ಇ-ಸಹಿ (ಇ-ಸಿಗ್ನೇಚರ್) ಸೇವೆಯನ್ನು ಆರಂಭಿಸಿತು?

ಅ) ಲೀಗಲ್ ಡೆಸ್ಕ್ ಡಾಟ್ ಕಾಮ್

ಆ) ಫೋರಂ ಸಿಗ್ನೇಚರ್

ಇ) ಎಸಿಬಿ

ಈ) ಇನ್ಫೋಸಿಸ್

ಲೀಗಲ್ ಡೆಸ್ಕ್ ಡಾಟ್ ಕಾಮ್ ಎಂಬ ಸ್ಟಾರ್ಟ್ ಅಪ್ ಬೆಂಗಳೂರಿನಲ್ಲಿ ಆಧಾರ್ ಆಧಾರಿತ ಇ-ಸಿಗ್ನೇಚರ್ ಸೇವೆಯನ್ನು ಆರಂಭಿಸಿದೆ. ಇದರಿಂದ ಬಾಡಿಗೆ ಪತ್ರದಿಂದ ಕರಾರು ಪತ್ರದವರೆಗೆ ಎಲ್ಲಾ ದಾಖಲೆಗಳು ತ್ವರಿತವಾಗಿ ಸಿಗಲಿವೆ.

80. ಈ ಕೆಳಗಿನ ಜಿಲ್ಲೆಗಳನ್ನು ಗಮನಿಸಿ

I) ಚಿಕ್ಕಮಗಳೂರು

II) ದಾವಣಗೆರೆ

III) ತುಮಕೂರು

IV) ಚಿತ್ರದುರ್ಗ

ಭದ್ರಾ ಮೇಲ್ದಂಡೆ ಯೋಜನೆಯು ಮೇಲಿನ ಯಾವ ಜಿಲ್ಲೆಗಳಿಗೆ ನೀರಾವರಿ ಸೌಕರ್ಯ ಕಲ್ಪಿಸುವ ಗುರಿ ಹೊಂದಿದೆ?

ಅ) I & II ಮಾತ್ರ

ಆ) I & III ಮಾತ್ರ

ಇ) I, II & III ಮಾತ್ರ

ಈ) I, II, III & IV

I, II, III & IV

ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನ ಮಾಡುವುದರಿಂದ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ 2,25,515 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ. ಈ ಜಿಲ್ಲೆಗಳಲ್ಲಿನ 367 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಲು, ವಾಣಿ ವಿಲಾಸ ಸಾಗರಕ್ಕೆ ಸುಮಾರು 2 ಟಿಎಂಸಿ ಅಡಿ ನೀರು ಪೂರೈಸಲು ಸಾಧ್ಯವಿದೆ. ಈ ಯೋಜನೆಗೆ ರೂ 12,340 ಕೋಟಿ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

81. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2016-17ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗೆ ಈ ಕೆಳಗಿನ ಯಾರನ್ನು ಆಯ್ಕೆ ಮಾಡಲಾಗಿದೆ?

ಅ) ಪಂ. ರವೀಂದ್ರ ಯಾವಗಲ್ ಮತ್ತು ಸುಬ್ರಹ್ಮಣ್ಯ ಭಟ್

ಆ) ಡಾ.ಕೆ. ವರದರಂಗನ್ ಮತ್ತು ನಾಗರತ್ನಮ್ಮ



www.karunaduexams.com

ಇ) ಪರಮೇಶ್ವರ ಹೆಗಡೆ ಮತ್ತು ಸೂರ್ಯನಾರಾಯಣ ಚಾರ್

ಈ) ಶೀಲಾ ಶ್ರೀಧರ್ ಮತ್ತು ರಾಮುಲ ಗಾದಗಿ

ಪಂ. ರವೀಂದ್ರ ಯಾವಗಲ್ ಮತ್ತು ಸುಬ್ರಹ್ಮಣ್ಯ ಭಟ್

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2016-17ನೇ ಸಾಲಿನ 'ಕರ್ನಾಟಕ ಕಲಾಶ್ರೀ' ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಗೌರವ ಪ್ರಶಸ್ತಿಗೆ ಖ್ಯಾತ ತಬಲಾ ವಾದಕ (ಹಿಂದುಸ್ತಾನಿ) ಧಾರವಾಡದ ಪಂ. ರವೀಂದ್ರ ಯಾವಗಲ್ ಮತ್ತು ಗಮಕ ಕಲಾವಿದ ಕಾಸರಗೋಡಿನ ಸುಬ್ರಹ್ಮಣ್ಯ ಭಟ್ ಆಯ್ಕೆಯಾಗಿದ್ದಾರೆ.

82. ರಾಜ್ಯ ಸರ್ಕಾರ ಇತ್ತೀಚೆಗೆ ನಾಡಪ್ರಭು ಕೆಂಪೇಗೌಡ ಪ್ರಾಧಿಕಾರ ರಚನೆ ಸ್ಥಾಪಿಸಲು ನಿರ್ಧರಿಸಿದ್ದು, ಈ ಕೆಳಗಿನ ಯಾರು ಇದರ ಅಧ್ಯಕ್ಷರಾಗಲ್ಲಿದ್ದಾರೆ?

ಅ) ರಾಜ್ಯದ ಮುಖ್ಯಮಂತ್ರಿ

ಆ) ಗೃಹ ಸಚಿವರು

ಇ) ರಾಜ್ಯಪಾಲರು

ಈ) ಸರ್ಕಾರದ ಪ್ರಧಾನ ಕಾರ್ಯದರ್ಶಿ

ರಾಜ್ಯದ ಮುಖ್ಯಮಂತ್ರಿನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಲು ಸರ್ಕಾರ ಒಪ್ಪಿಗೆ ನೀಡಿದೆ. ಮೊದಲ ಹಂತದಲ್ಲಿ ಪ್ರಾಧಿಕಾರ ಸ್ಥಾಪನೆ ಮಾಡಲು 5 ಕೋಟಿ ರೂ.ಗಳ ಅನುದಾನ ನೀಡಲಾಗುತ್ತದೆ. 15 ಸದಸ್ಯರನ್ನು ಒಳಗೊಂಡ ಪ್ರಾಧಿಕಾರಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಪ್ರಾದೇಶಿಕ ಆಯುಕ್ತರು ನೋಡಲ್ ಅಧಿಕಾರಿಯಾಗಿರುತ್ತಾರೆ. ನಾಲ್ಕು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ತಹಸೀಲ್ದಾರ್‌ಗಳು, ಮತ್ತು ಸ್ಪೆಷಲ್ ಕಮೀಷನರ್‌ಗಳು ಪ್ರಾಧಿಕಾರಕ್ಕೆ ಸದಸ್ಯರಾಗಿರುತ್ತಾರೆ.

83. ಇತ್ತೀಚೆಗೆ ನಿಧನರಾದ ನರ್ಮದಾ ಶಿಬೂರಾಯ ಅವರು ಯಾವ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದರು?

ಅ) ಭಾಗವತ

ಆ) ಕಲೆ

ಇ) ತುಳು ಸಿನಿಮಾ

ಈ) ಪತ್ರಕೋದ್ಯಮ

ಭಾಗವತ

ತೆಂಕುತಿಟ್ಟಿನ ಪ್ರಥಮ ಮಹಿಳಾ ಭಾಗವತರೆಂದು ಪ್ರಸಿದ್ಧರಾದ ಪ್ರಸಿದ್ಧ ನರ್ಮದಾ ಶಿಬರೂರಾಯ (75) ಅವರು ನಿಧನರಾದರು. ತೆಂಕು ತಿಟ್ಟಿನಲ್ಲಿ ಲೀಲಾವತಿ ಬೈಪಡಿತ್ತಾಯ ಅವರು ಭಾಗವತರಾಗಿ ಮೇಳಗಳಲ್ಲಿ ತಿರುಗಾಡಿ ಹೆಸರಾದವರು. ನರ್ಮದಾ ಅವರು ಅದಕ್ಕಿಂತಲೂ ಮೊದಲೇ ಭಾಗವತಿಕೆ ಕಲಿತಿದ್ದರು. ಆದರೆ ಅವರು ವೃತ್ತಿಪರ

www.karunaduexams.com

ಮೇಳಗಳಿಗೆ ಹೋಗಿಲ್ಲ, ಹವ್ಯಾಸಿಯಾಗಿ ಯಕ್ಷಗಾನ ಭಾಗವತಿಕೆ ಮಾಡುತ್ತಿದ್ದರು. ಹಲವು ಶಿಷ್ಯರಿಗೂ ಯಕ್ಷಗಾನದ ಭಾಗವತಿಕೆ ಹೇಳಿಕೊಟ್ಟಿದ್ದರು.

84. ಇತ್ತೀಚೆಗೆ ಸುದ್ದಿಯಲ್ಲಿದ್ದ "ಇನ್ವೆಸ್ಟ್ ಕರ್ನಾಟಕ ಫೋರಂ"ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ:

I) ರಾಜ್ಯದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶವನ್ನು ಈ ಸಂಸ್ಥೆ ಹೊಂದಿದೆ.

II) ಬೃಹತ್ ಮತ್ತು ಮದ್ಯಮ ಕೈಗಾರಿಕೆ ಸಚಿವರು ಈ ಸಂಸ್ಥೆಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

III) ಸರ್ಕಾರದ ಪ್ರಧಾನ ಕಾರ್ಯದರ್ಶಿ ಈ ಸಂಸ್ಥೆಯ ಸಿಇಓ ಆಗಲಿದ್ದಾರೆ.

ಕೆಳಗೆ ಕೊಟ್ಟಿರುವ ಕೋಡ್ ಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ?

ಅ) I & II ಮಾತ್ರ

ಆ) II & III ಮಾತ್ರ

ಇ) I & III ಮಾತ್ರ

ಈ) I, II & III ಮಾತ್ರ

I & II ಮಾತ್ರ

ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ದೃಷ್ಟಿಯಿಂದ ಕೈಗಾರಿಕೋದ್ಯಮಿಗಳನ್ನು ಒಳಗೊಂಡ 'ಇನ್ವೆಸ್ಟ್ ಕರ್ನಾಟಕ ಫೋರಂ' ಎಂಬ ನೋಂದಾಯಿತ ಕಂಪೆನಿಯನ್ನು ಸ್ಥಾಪಿಸಲಾಗುತ್ತಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಆರ್.ವಿ.ದೇಶಪಾಂಡೆತಿಳಿಸಿದ್ದಾರೆ. ಉದ್ದೇಶಿತ ಈ ಸಂಸ್ಥೆಯಲ್ಲಿ ಆರು ಮಂದಿ ಕೈಗಾರಿಕೋದ್ಯಮಿಗಳು ಒಳಗೊಂಡಂತೆ ೯ ಮಂದಿ ನಿರ್ದೇಶಕರು ಇರಲಿದ್ದಾರೆ. ಕೈಗಾರಿಕಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಕಂಪೆನಿಯ ಕಾರ್ಯದರ್ಶಿಯಾಗಿದ್ದು, ಕೈಗಾರಿಕಾ ಸಚಿವರು ಅಧ್ಯಕ್ಷರಾಗಿರಲಿದ್ದಾರೆ.

85. ಕನ್ನಡದ ಪ್ರಕಾಶ್ ನಂಜಪ್ಪ ಯಾವ ಕ್ರೀಡೆಯಲ್ಲಿ ಪ್ರಸಿದ್ದಿ ಹೊಂದಿದ್ದಾರೆ?

ಅ) ಬಾಕ್ಸಿಂಗ್

ಆ) ಚೆಸ್

ಇ) ಶೂಟಿಂಗ್

ಈ) ರನ್ನಿಂಗ್

ಶೂಟಿಂಗ್

ಕರ್ನಾಟಕದ ಪ್ರಕಾಶ್ ನಂಜಪ್ಪ ಅವರು ಪ್ರಸಿದ್ದ ಶೂಟರ್. 50 ಮೀ ಪುರುಷರ ಶೂಟಿಂಗ್ ಚಾಂಪಿಯನ್ ಪಿಪ್ ನಲ್ಲಿ ಇವರು ಒಲಂಪಿಕ್ಸ್ ನಲ್ಲಿ ಭಾಗವಹಿಸಿದ್ದರು.

www.karunaduexams.com

86. ಈ ಕೆಳಕಂಡ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಯಾವುವು?

I) ಯಗಚಿ ನದಿಯು ತುಂಗಾಭದ್ರ ನದಿಯ ಪ್ರಮುಖ ಉಪನದಿ

II) ಬೇಲೂರಿನ ಬಳಿ ಈ ನದಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ

ಈ ಕೆಳಗೆ ಕೊಟ್ಟಿರುವ ಕೋಡ್ ಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ:

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಎರಡು ಮಾತ್ರ

ಯಗಚಿ ನದಿಯು ಹೇಮಾವತಿ ನದಿಯ ಮುಖ್ಯ ಉಪನದಿ. ಇದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟಿ ಹಾಸನ ಜಿಲ್ಲೆಯ ಗೊರೂರಿನ ಬಳಿ ಹೇಮಾವತಿ ನದಿಯನ್ನು ಸೇರುತ್ತದೆ. ವಿಶ್ವವಿಖ್ಯಾತ ಬೇಲೂರು ಈ ನದಿಯ ದಂಡೆಯಲ್ಲಿದೆ. ಬೇಲೂರಿನ ಬಳಿ ಈ ನದಿಗೆ ಸುಮಾರು ೪ ಟಿ ಎಂ ಸಿ ಸಾಮರ್ಥ್ಯದ ಅಣೆಕಟ್ಟೆ ನಿರ್ಮಿಸಲಾಗಿದೆ

87. 2016 ನೇ ಸಾಲಿನ ಡಿ.ದೇವರಾಜ ಅರಸು ಪ್ರಶಸ್ತಿಯನ್ನು ಈ ಕೆಳಗಿನ ಯಾರಿಗೆ ನೀಡಲಾಗುವುದು?

ಅ) ರಘುಪತಿ

ಆ) ಎಂ.ಸಿ.ನಾಣಯ್ಯ

ಇ) ಬಿ.ಎ.ಮೊಹಿದ್ದೀನ್

ಈ) ಎಸ್.ಕೆ.ಕಾಂತ

ಬಿ.ಎ.ಮೊಹಿದ್ದೀನ್

ರಾಜ್ಯ ಸರ್ಕಾರ ಪ್ರತಿ ವರ್ಷ ನೀಡುವ ಡಿ.ದೇವರಾಜ ಅರಸು ಪ್ರಶಸ್ತಿಗೆ 2016ನೇ ಸಾಲಿನಲ್ಲಿ ಮಾಜಿ ಸಚಿವ ಬಿ.ಎ.ಮೊಹಿದ್ದೀನ್ ಅವರನ್ನು ಆಯ್ಕೆ ಮಾಡಲಾಗಿದೆ. ಅರಸು ಪ್ರಶಸ್ತಿಗೆ ಹೆಸರು ಶಿಫಾರಸು ಮಾಡಲು ನೇಮಿಸಲಾಗಿದ್ದ ಡಾ.ಕೃಷ್ಣಮೂರ್ತಿ ಹನೂರು ನೇತೃತ್ವದ ಸಮಿತಿ ಮಾಡಿದ ಶಿಫಾರಸಿನಂತೆ ಮೊಹಿದ್ದೀನ್ ಅವರಿಗೆ ಈ ಬಾರಿಯ ಅರಸು ಪ್ರಶಸ್ತಿಯನ್ನು ಆ.20ರಂದು ನಡೆಯುವ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಗೆ ಮಾಜಿ ಸಚಿವರಾದ ರಘುಪತಿ, ಎಂ.ಸಿ.ನಾಣಯ್ಯ, ಎಸ್.ಕೆ.ಕಾಂತಾ, ಎಸ್ .ವಿ.ಸಿದ್ನಾಳ್, ಜೆ.ಶ್ರೀನಿವಾಸನ್ ಹಾಗೂ ಭೀಮ್ಸಿ ಕಲಾದಗಿ ಅವರ ಹೆಸರು ಪ್ರಸ್ತಾಪವಾಗಿತ್ತು. ಈ ಪೈಕಿ ಸಮಿತಿಯು ಮೊಹಿದ್ದೀನ್ ಅವರ ಹೆಸರನ್ನು ಒಮ್ಮತದಿಂದ ಶಿಫಾರಸು ಮಾಡಿದೆ.ಮೂಲತಃ ಚಿಕ್ಕಮಗಳೂರು ಜಿಲ್ಲೆಯವರಾದ ಬಿ.ಎ.ಮೊಹಿದ್ದೀನ್ ಅವರೊಂದಿಗೆ ಗೋವಿಂದೇಗೌಡ ಅವರೊಂದಿಗೆ ಸೇರಿ ಭೂರಹಿತರಿಗೆ ಭೂಮಿ ಒದಗಿಸುವ ಕಾರ್ಯ ಕೈಗೊಂಡಿದ್ದರು. 1978ರಲ್ಲಿ ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದ್ದ ಅವರು, ಜೆ.ಎಚ್.ಪಟೇಲ್ ಅವರ ಸಚಿವ ಸಂಪುಟದಲ್ಲಿ ಉನ್ನತ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಬೆಂಗಳೂರಿನ ಸಂಜಯನಗರದಲ್ಲಿ ವಾಸವಾಗಿದ್ದಾರೆ.

www.karunaduexams.com

88. 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಾವ ಜಿಲ್ಲೆಯಲ್ಲಿ ಆಯೋಜಿಸಲಾಗುವುದು?

ಅ) ಬೆಳಗಾವಿ

ಆ) ಕೊಪ್ಪಳ

ಇ) ರಾಯಚೂರು

ಈ) ಮಂಡ್ಯ

ರಾಯಚೂರು

82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿಸೆಂಬರ್ 3, 4 ಮತ್ತು 5ರಂದು ರಾಯಚೂರಿನಲ್ಲಿ ನಡೆಸಲು ನಿರ್ಧರಿಸಿರುವುದಾಗಿ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರಾದ ಮನು ಬಳಿಗಾರ್ ತಿಳಿಸಿದ್ದಾರೆ.

89. ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ:

I) ಜೋಗಜಲಪಾತವನ್ನು ಸರ್ವಋತು ಜಲಪಾತವನ್ನಾಗಿ ಅಭಿವೃದ್ದಿಪಡಿಸಲು ಸಮ್ಮತಿಸಲಾಗಿದೆ

II) ಈ ಯೋಜನೆಯನ್ನು ಸ್ವತಃ ರಾಜ್ಯ ಸರ್ಕಾರವೇ ಅನುಷ್ಠಾನಗೊಳಿಸಲಿದೆ

III) ಜೋಗಜಲಪಾತ ದೇಶದ ಅತಿ ಎತ್ತರದ ಜಲಪಾತವಾಗಿದೆ

ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & III ಮಾತ್ರ

ಆ) I & II ಮಾತ್ರ

ಇ) I ಮಾತ್ರ

ಈ) I, II & II

I ಮಾತ್ರ

ಹೇಳಿಕೆ ಒಂದು ಸರಿಯಾಗಿದೆ ರಾಜ್ಯ ಸರ್ಕಾರ ಜೋಗಜಲಪಾತವನ್ನು ಸರ್ವಋತು ಜಲಪಾತವನ್ನಾಗಿ ಅಭಿವೃದ್ದಿಪಡಿಸಲು ಸಮ್ಮತಿ ಸೂಚಿಸಿದೆ. ಹೇಳಿಕೆ ಎರಡು ತಪ್ಪು ಏಕೆಂದರೆ ಕರ್ನಾಟಕದ ಮೂಲದ ಅನಿವಾಸಿ ಭಾರತೀಯ ಉದ್ಯಮಿ ಬಿ.ಆರ್. ಶೆಟ್ಟಿ ಅವರ ಸಂಸ್ಥೆ 450 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳಿಸಲಿದೆ. ಹೇಳಿಕೆ ಮೂರು ತಪ್ಪು ಏಕೆಂದರೆ 831 ಅಡಿಗಳ ಮೇಲಿಂದ ಧುಮ್ಮಿಕ್ಕುವ ಜೋಗ ಜಲಪಾತ ಭಾರತದ ಎರಡನೇ ಅತಿ ಎತ್ತರದ ಜಲಪಾತವಾಗಿದೆ. ಅತಿ ಹೆಚ್ಚು ಮಳೆ ಪಡೆಯುವ ಚಿರಾಪುಂಜಿಯಲ್ಲಿರುವ ನೋಹಕಾಲಿಕೈ ಜಲಪಾತ ದೇಶದ ಅತಿ ಎತ್ತರ ಜಲಪಾತವಾಗಿದೆ (1100 ಅಡಿ).

www.karunaduexams.com

90. ಯಾವ ನದಿಯಲ್ಲಿ ಇತ್ತೀಚೆಗೆ ರಾಜ್ಯ ಪ್ರವಾಸೋದ್ಯಮ ಇಲಾಖೆ ಜಲಸಾಹಸ ಕ್ರೀಡಾ ಕೇಂದ್ರವನ್ನು ಆರಂಭಿಸಿತು?

ಅ) ನೇತ್ರಾವತಿ

ಆ) ಕಾವೇರಿ

ಇ) ಕಾಳಿ

ಈ) ಭೀಮಾ

ಕಾಳಿ

ಉತ್ತರಕನ್ನಡ ಜಿಲ್ಲೆಯ ಕಾಳಿ ನದಿಯಲ್ಲಿ ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾಡಳಿತದಿಂದ ಕೋಡಿಭಾಗದ ಕಾಳಿ ಸಂಗಮದ ಬಳಿ ಜಲಸಾಹಸ ಕ್ರೀಡಾ ಕೇಂದ್ರವನ್ನು ಆರಂಭಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಆರ್. ವಿ. ದೇಶಪಾಂಡೆ ಹಸಿರು ಬಾವುಟ ಹಾರಿಸುವ ಮೂಲಕ ಈ ಕೇಂದ್ರಕ್ಕೆ ಚಾಲನೆ ನೀಡಿದರು.

91. ಕನ್ನಡ ಪುಸ್ತಕ ಪ್ರಾಧಿಕಾರದ ಈಗಿನ ಅಧ್ಯಕ್ಷರು ಯಾರು?

ಅ) ದೇವನೂರ ಮಹಾದೇವ

ಆ) ಬಂಜಗೆರೆ ಜಯಪ್ರಕಾಶ್

ಇ) ಅನುಪಮಾ ನಿರಂಜನ

ಈ) ತ್ರಿವೇಣಿ

ಬಂಜಗೆರೆ ಜಯಪ್ರಕಾಶ್

ಕನ್ನಡ ಪುಸ್ತಕ ಪ್ರಾಧಿಕಾರದ ಈಗಿನ ಅಧ್ಯಕ್ಷರು ಬಂಜಗೆರೆ ಜಯಪ್ರಕಾಶ್

92. ಅಸೋಚಾಮ್ (ASSOCHAM) ವರದಿ ಪ್ರಕಾರ ಕರ್ನಾಟಕ ದೇಶದಲ್ಲೇ ಐಟಿ ಬಂಡವಾಳ ಹೂಡಿಕೆಯಲ್ಲಿ ನಂ.1 ಸ್ಥಾನದಲ್ಲಿದೆ. 2015-16 ನೇ ಸಾಲಿನ ರಾಜ್ಯ ಎಷ್ಟು ಕೋಟಿ ರೂ ಹೂಡಿಕೆಯನ್ನು ಸ್ವೀಕರಿಸಿದೆ?

ಅ) ರೂ 43,500 ಕೋಟಿ

ಆ) ರೂ 53,396 ಕೋಟಿ

ಇ) ರೂ 46,890 ಕೋಟಿ

ಈ) ರೂ 74,300 ಕೋಟಿ

ರೂ 53,396 ಕೋಟಿ

ಅಸೋಚಾಮ್ ವರದಿ ಪ್ರಕಾರ 2015-16ನೇ ಸಾಲಿನಲ್ಲಿ ದೇಶದ ಮಾಹಿತಿ ತಂತ್ರಜ್ಞಾನ (ಐ.ಟಿ.) ಕ್ಷೇತ್ರದಲ್ಲಿ ಹೂಡಿಕೆಯಾದ ಒಟ್ಟಾರೆ ಬಂಡವಾಳದ ಪೈಕಿ ಶೇ.25ರಷ್ಟನ್ನು ಬಾಚಿಕೊಳ್ಳುವ ಮೂಲಕ ಕರ್ನಾಟಕ ಅತ್ಯುತ್ತಮ ಸಾಧನೆ ತೋರಿದೆ. ದೇಶದ ಐಟಿ ಕ್ಷೇತ್ರದಲ್ಲಿ ಕಳೆದ ವರ್ಷ 2.2 ಲಕ್ಷ ಕೋಟಿ ರೂ. ಹೂಡಿಕೆಯಾಗಿದ್ದು, ಆ ಪೈಕಿ

ಕರ್ನಾಟಕವೊಂದೇ 53,396 ಕೋಟಿ ರೂ. ಹೂಡಿಕೆಯನ್ನು ಸ್ವೀಕರಿಸಿದೆ ಎಂದು ಕೈಗಾರಿಕಾ ಸಂಸ್ಥೆ ಅಸೋಚಾಮ್ನ ಐ.ಟಿ. ಕ್ಷೇತ್ರಕ್ಕೆ ಸಂಬಂಧಿಸಿದ ವಿಶ್ಲೇಷಣಾ ವರದಿ ತಿಳಿಸಿದೆ.. 2005-06ನೇ ಸಾಲಿನಲ್ಲಿ ಕರ್ನಾಟಕದಲ್ಲಿ 14,337 ಕೋಟಿ ರೂ. ಹೂಡಿಕೆಯಾಗಿತ್ತು. ಆದರೆ ಇದು 2015-16ರಲ್ಲಿ 53,396 ಕೋಟಿ ರೂ.ಗೆ ಏರಿಕೆಯಾಗಿದೆ. ಕರ್ನಾಟಕ ವಾರ್ಷಿಕ ಶೇ.14ರ ಅಭಿವೃದ್ಧಿ ವೇಗದಲ್ಲಿ ಹೂಡಿಕೆ ಆಕರ್ಷಿಸಿದೆ ಎಂದು ಹೇಳಿದೆ. ಕರ್ನಾಟಕದಷ್ಟು ಹೂಡಿಕೆ ದರ ಹೊಂದಿರುವ ರಾಜ್ಯ ಬೇರೊಂದಿಲ್ಲ ಎಂಬುದು ಗಮನಾರ್ಹ. ಹೂಡಿಕೆಯಲ್ಲಿ ಕರ್ನಾಟಕದ ಅನಂತರ ಅತಿ ಹೆಚ್ಚಿನ ಪಾಲು ಪಡೆದ ರಾಜ್ಯ ಗುಜರಾತ್ ಆಗಿದೆ. 2005-06ನೇ ಸಾಲಿನಲ್ಲಿ 700 ಕೋಟಿ ರೂ.ನಷ್ಟು ಐಟಿ ಹೂಡಿಕೆ ಕಂಡಿದ್ದ ಆ ರಾಜ್ಯ, ಕಳೆದ ವರ್ಷ 35,300 ಕೋಟಿ ರೂ. ಆಕರ್ಷಿಸುವ ಮೂಲಕ ಶೇ.48ರಷ್ಟು ಪ್ರಗತಿ ಕಾಯ್ದುಕೊಂಡಿದೆ. ಇದೇ ಅವಧಿಯಲ್ಲಿ ದೇಶದಲ್ಲಿನ ಐಟಿ ಹೂಡಿಕೆ ಪ್ರಮಾಣ 2005-06ನೇ ಸಾಲಿನಲ್ಲಿದ್ದ 46200 ಕೋಟಿ ರೂ.ನಿಂದ ಕಳೆದ ವರ್ಷ 2.2 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

93. ಕನ್ನಡ ಪುಸ್ತಕ ಪ್ರಾಧಿಕಾರದ 2015ರ ಸಾಲಿನ ಡಾ. ಎಂ.ಎಂ.ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ'ಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಶಶಿಕಲಾ ಬೆಳಗಲಿ

ಆ) ಡಾ.ಬಿ.ಶೇಷಾದ್ರಿ

ಇ) ಡಾ.ಎಸ್.ಪಿ.ಯೋಗಣ್ಣ

ಈ) ಡಾ.ಅನುಪಮಾ ನಿರಂಜನ್

ಡಾ.ಬಿ.ಶೇಷಾದ್ರಿ

ಕನ್ನಡ ಪುಸ್ತಕ ಪ್ರಾಧಿಕಾರದ 2015ರ ಸಾಲಿನ ಪ್ರಶಸ್ತಿ ಪ್ರಕಟಿಸಲಾಗಿದ್ದು, 'ಡಾ. ಎಂ.ಎಂ.ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ'ಗೆ ಬಳ್ಳಾ ರಿಯ ಡಾ.ಬಿ.ಶೇಷಾದ್ರಿ ಮತ್ತು 'ಡಾ. ಜಿ.ಪಿ . ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ'ಗೆ ಶಶಿಕಲಾ ಬೆಳಗಲಿ ಆಯ್ಕೆಯಾಗಿದ್ದಾರೆ. 2015 ನೇ ಸಾಲಿನ ಅತ್ಯುತ್ತಮ ಪ್ರಕಾಶನ ಪ್ರಶಸ್ತಿಗೆ ಬೆಂಗಳೂರಿನ 'ಅನ್ವೇಷಣೆ ಪ್ರಕಾಶನ' ಆಯ್ಕೆಯಾಗಿದೆ. ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ. 'ಡಾ. ಅನುಪಮಾ ನಿರಂಜನ ವೈದ್ಯಕೀಯ ಮತ್ತು ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ ಮೈಸೂರಿನ ಡಾ.ಎಸ್.ಪಿ.ಯೋಗಣ್ಣ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 25 ಸಾವಿರ ಒಳಗೊಂಡಿದೆ.

94. ಕರ್ನಾಟಕ ರಾಜ್ಯದ ಭೌಗೋಳಿಕ ಪ್ರದೇಶದ ಶೇಕಡ ಎಷ್ಟು ಭಾಗವು ಅರಣ್ಯದಿಂದ ಆವೃತವಾಗಿದೆ?

ಅ) 22.61

ಆ) 19.82

ಇ) 21.40

www.karunaduexams.com

ಈ) 20.06

22.61

ವಾರ್ಷಿಕ ವರದಿ ಪ್ರಕಾರ ರಾಜ್ಯದ ಒಟ್ಟಾರೆ ಅರಣ್ಯ ಪ್ರದೇಶವು 43,356.47 ಚದರ ಕೀಮೀ ಇದೆ. ಹೀಗಾಗಿ ರಾಜ್ಯದ ಭೌಗೋಳಿಕ ಪ್ರದೇಶದ ಶೇ 22.61 ಭಾಗವು ಅರಣ್ಯದಿಂದ ಆವೃತವಾಗಿದೆ.

95. ಕರ್ನಾಟಕದಲ್ಲಿ ಇದುವರೆಗೂ ಎಷ್ಟು ಹಣಕಾಸು ಆಯೋಗಗಳನ್ನು ಸ್ಥಾಪಿಸಲಾಗಿದೆ?

ಅ) ಎರಡು

ಆ) ಮೂರು

ಇ) ನಾಲ್ಕು

ಈ) ಆರು

ನಾಲ್ಕು

ರಾಜ್ಯದಲ್ಲಿ ಇದುವರೆಗೂ ನಾಲ್ಕು ಹಣಕಾಸು ಆಯೋಗಗಳನ್ನು ರಚಿಸಲಾಗಿದೆ. ಸಿ.ಜಿ.ಚೆನ್ನಸ್ವಾಮಿ ರವರು ರಾಜ್ಯದ ನಾಲ್ಕನೇ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದಾರೆ. ರಾಜ್ಯ ಹಣಕಾಸು ಆಯೋಗವನ್ನು ರಾಜ್ಯಪಾಲರು ಸಂವಿಧಾನದ 73ನೇ ತಿದ್ದುಪಡಿ ಅನ್ವಯ ಅನುಚ್ಛೇದ 243 (ಐ) ಜಾರಿಗೆ ಬಂದ ಒಂದು ವರ್ಷದೊಳಗಾಗಿ ಮತ್ತು ಅಲ್ಲಿಂದ ಪ್ರತಿ ಐದು ವರ್ಷಗಳಿಗೊಮ್ಮೆ ಪಂಚಾಯತಿಗಳ ಹಣಕಾಸು ಸ್ಥಿತಿಗತಿ ಪರಾಮರ್ಶೆ ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸಬೇಕು.

96. ಕರ್ನಾಟಕ ಪ್ರಸಿದ್ಧ ಐತಿಹಾಸಿಕ ಸ್ಥಳವಾದ ಬೇಲೂರು ಯಾವ ನದಿಯ ದಡದ ಮೇಲಿದೆ?

ಅ) ಹೇಮಾವತಿ

ಆ) ತುಂಗಾ

ಇ) ಯಗಚಿ

ಈ) ಕುಮಾರಧಾರ

ಯಗಚಿ

ಐತಿಹಾಸಿಕ ಪ್ರಸಿದ್ಧವಾದ ಬೇಲೂರು ಯಗಚಿ ನದಿಯ ದಡದಲ್ಲಿದೆ. ಯಗಚಿ ನದಿ ಹೇಮಾವತಿ ನದಿಯ ಉಪನದಿ.

97. ಯಾವ ಜಿಲ್ಲೆಯಲ್ಲಿ ಇಂಟೆಗ್ರೇಟೆಡ್ ಮಾಡರ್ನ್ ಟೂಲ್ ಪಾರ್ಕ್ ಅನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಸಮ್ಮತಿಸಿದೆ?

ಅ) ಚಿತ್ರದುರ್ಗ

ಆ) ತುಮಕೂರು

www.karunaduexams.com

ಇ) ಬಳ್ಳಾರಿ

ಈ) ರಾಯಚೂರು

ತುಮಕೂರು

ತುಮಕೂರಿನ ಕೈಗಾರಿಕಾ ಪ್ರದೇಶದಲ್ಲಿ ಇಂಟೆಗ್ರೇಟೆಡ್ ಮಾಡರ್ನ್ ಟೂಲ್ ಪಾರ್ಕ್ ಸ್ಥಾಪನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. 421 ಕೋಟಿ ರೂ. ವೆಚ್ಚದಲ್ಲಿ ಪಾರ್ಕ್ ಸ್ಥಾಪನೆಯಾಗಲಿದ್ದು, 4 ಸಾವಿರ ಮಂದಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಸುಮಾರು 500 ಎಕರೆ ಪ್ರದೇಶ ಇದಕ್ಕೆ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

98. ರಾಜ್ಯದ ಮೊದಲ ಮಾವು ಅಭಿವೃದ್ಧಿ ಮತ್ತು ಸಂಸ್ಕರಣ ಘಟಕವನ್ನು ಇತ್ತೀಚೆಗೆ ಎಲ್ಲಿ ಉದ್ಘಾಟಿಸಲಾಯಿತು?

ಅ) ಕೋಲಾರ

ಆ) ಚಿಂತಾಮಣಿ

ಇ) ಚಿಕ್ಕಬಳ್ಳಾಪುರ

ಈ) ಶ್ರೀನಿವಾಸಪುರ

ಚಿಂತಾಮಣಿ

ರಾಜ್ಯದ ಮೊದಲ ಮಾವು ಅಭಿವೃದ್ಧಿ ಮತ್ತು ಸಂಸ್ಕರಣ ಘಟಕವನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಬಳಿ ಇರುವ ಮಾಡಿಕೆರೆ ಕ್ರಾಸ್ ನಲ್ಲಿ ಸ್ಥಾಪಿಸಲಾಗಿದ್ದು, ಸಾರಿಗೆ ಸಚಿವ ರಾಮಲಿಂಗರೆಡ್ಡಿ ಅವರು ಇದನ್ನು ಉದ್ಘಾಟಿಸಿದರು. ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ಸಹಕಾರ ಈ ಘಟಕವನ್ನು ರೂ 7 ಕೋಟಿ ವೆಚ್ಚದಲ್ಲಿ ನಿರ್ಮಿಸಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಾಜ್ಯದ ಶೇ 40 ರಷ್ಟು ಮಾವು ಬೆಳೆಯಲಾಗುತ್ತಿದ್ದು, ಈ ಭಾಗದ ರೈತರಿಗೆ ಮಾವು ಬೆಳೆಯ ಬಗ್ಗೆ ವಿಶೇಷ ತಂತ್ರಜ್ಞಾನವನ್ನು ಈ ಕೇಂದ್ರದಿಂದ ದೊರೆಯಲಿದೆ.

99. ಈ ಕೆಳಗಿನ ಯಾವ ನ್ಯೂಸ್ ಚಾನೆಲ್ ರಾಜ್ಯದಲ್ಲಿ "ಹಳ್ಳಿ ಚಲೋ" ಎನ್ನುವ ವಿಶೇಷ ಅಭಿಯಾನವನ್ನು ಆರಂಭಿಸಿದೆ?

ಅ) ಉದಯ ನ್ಯೂಸ್

ಆ) ಪಬ್ಲಿಕ್ ಟಿವಿ

ಇ) ಸುವರ್ಣ ನ್ಯೂಸ್

ಈ) ಕಸ್ತೂರಿ ನ್ಯೂಸ್

ಸುವರ್ಣ ನ್ಯೂಸ್

ಸುವರ್ಣನ್ಯೂಸ್ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ವಿವಿಧ ರೀತಿಯ ಸಮಸ್ಯೆಗಳ ಬಗ್ಗೆ ಜಾಗೃತ ವರದಿ ನೀಡಿ ಸ್ಥಳದಲ್ಲೇ ಪರಿಹಾರ ಒದಗಿಸುವ ಕಾರ್ಯ 'ಹಳ್ಳಿ ಚಲೋ ಅಭಿಯಾನ' ಆರಂಭಿಸಿದೆ. ಈ ಅಭಿಯಾನದಡಿ ಸುವರ್ಣನ್ಯೂಸ್ ಸುದ್ದಿ

www.karunaduexams.com

ವಾಹಿನಿಯ ವರದಿಗಾರರು ಸ್ಥಳದಲ್ಲಿಯೇ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಪರಿಹಾರ ಒದಗಿಸುವ ಕಾರ್ಯ ಮಾಡುತ್ತಿದ್ದಾರೆ.

100. ಯಾವ ನಗರದಲ್ಲಿ ಮೊದಲ ಬಾರಿಗೆ ಭಾರತೀಯ ಪನರೋಮಾ ಚಲನಚಿತ್ರೋತ್ಸವನ್ನು ಆಯೋಜಿಸಲಾಗಿದೆ?

ಅ) ಬೆಂಗಳೂರು

ಆ) ಚಿತ್ರದುರ್ಗ

ಇ) ಶಿವಮೊಗ್ಗ

ಈ) ಚಿಕ್ಕಮಗಳೂರು

ಶಿವಮೊಗ್ಗ

ಶಿವಮೊಗ್ಗದಲ್ಲಿ ಮೊದಲ ಬಾರಿಗೆ ಭಾರತೀಯ ಪನೋರಮಾ ಚಲನಚಿತ್ರೋತ್ಸವವನ್ನು ಆ. 25ರಿಂದ 27ರ ವರೆಗೆ ಕರ್ನಾಟಕ ಸಂಘದಲ್ಲಿ ಏರ್ಪಡಿಸಲಾಗಿದೆ.

101. ಮಲೆನಾಡು ಮಿತ್ರವೃಂದ ನೀಡುವ 2016-17ನೇ ಸಾಲಿನ "ಮಲೆನಾಡು ಮಿತ್ರ" ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ರಘುನಾಥ್ ಪೈ

ಆ) ಡಾ. ವಿರೇಂದ್ರ ಹೆಗ್ಡೆ

ಇ) ಕಾಗೋಡು ತಿಮ್ಮಪ್ಪ

ಈ) ಯಡಿಯೂರಪ್ಪ

ಕಾಗೋಡು ತಿಮ್ಮಪ್ಪ

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಅವರನ್ನು ಮಲೆನಾಡು ಮಿತ್ರವೃಂದ ನೀಡುವ 2016-17ನೇ ಸಾಲಿನ 'ಮಲೆನಾಡು ಮಿತ್ರ' ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. 'ಮಲೆನಾಡು ಸಾಧಕ' ಪ್ರಶಸ್ತಿಯನ್ನು ಕೃಷಿ ವಿಭಾಗದಲ್ಲಿ ಕೆ.ವಿಶ್ವನಾಥ್, ಶಿಕ್ಷಣ- ಎಚ್.ಎಸ್. ಮಂಜುನಾಥ್, ಸಾಹಿತ್ಯ/ಕಲೆ - ಕುಂಚೂರು ಹರೀಶ್, ಉದ್ಯಮ- ಲಕ್ಷ್ಮೀ ದೇವರಾಜ್‌ರಿಗೆ ನೀಡಲು ನಿರ್ಧರಿಸಲಾಗಿದೆ.

102. 2015-16ರ ಸಾಲಿನ ಐಟಿ-ಬಿಟಿ ಕ್ಷೇತ್ರದಲ್ಲಿ ದೇಶದ ಒಟ್ಟಾರೆ ರಫ್ತಿನಲ್ಲಿ ಕರ್ನಾಟಕ ರಾಜ್ಯದ ಶೇ____ರಷ್ಟು ಪಾಲನ್ನು ಹೊಂದಿದೆ?

ಅ) 33.6%

ಆ) 44.5%

ಇ) 36.6%

ಈ) 22.22%

ಐಟಿ-ಬಿಟಿ ಕ್ಷೇತ್ರದಲ್ಲಿ ರಾಜ್ಯ ದಶಕಗಳಿಂದ ಮೊದಲ ಸ್ಥಾನದಲ್ಲೇ ಮುನ್ನಡೆದಿದೆ. ದೇಶದ ಒಟ್ಟಾರೆ ರಫ್ತಿನಲ್ಲಿ 2015-16ರ ಸಾಲಿಗೆ ಶೇ 36.5(60,255 ಅಮೆರಿಕನ್ ಡಾಲರ್)ರಷ್ಟು ಪಾಲು ಹೊಂದಲಾಗಿದೆ.

103. ಇತ್ತೀಚೆಗೆ ಹದಿಮೂರು ಜನರ ಸಮಿತಿಯೊಂದು ಚಲನಚಿತ್ರ ಕರಡು ನೀತಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಕೆಳಗಿನ ಯಾರು ಸಮಿತಿಯ ಅಧ್ಯಕ್ಷರಾಗಿದ್ದಾರೆ?

ಅ) ರಾಕ್ ಲೈನ್ ವೆಂಕಟೇಶ್

ಆ) ರಾಜೇಂದ್ರಸಿಂಗ್ ಬಾಬು

ಇ) ಗಿರೀಶ್ ಕಾಸರವಳ್ಳಿ

ಈ) ಸುರೇಶ್ ಹೆಬ್ಳೀಕರ್

ರಾಜೇಂದ್ರಸಿಂಗ್ ಬಾಬು

ಡಾ.ರಾಜೇಂದ್ರಸಿಂಗ್ ಬಾಬು ನೇತೃತ್ವದ 13 ಜನರ ಸಮಿತಿ ತನ್ನ ಶಿಫಾರಸುಗಳನ್ನು ಚಲನಚಿತ್ರ ಕರಡು ನೀತಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಕನ್ನಡ ಚಿತ್ರರಂಗಕ್ಕೆ ಈವರೆಗೂ ತಮ್ಮದೇ ಆದ ನೀತಿ ಇರದ ಕಾರಣ ಕಳೆದ 8 ತಿಂಗಳ ಹಿಂದೆ ನಡೆದ ಸಭೆಯಲ್ಲಿ ಚರ್ಚೆಯಾದಾಗ ಮುಖ್ಯಮಂತ್ರಿಯವರು ಈ ಸಮಿತಿಯನ್ನು ರಚಿಸಿದ್ದರು. ಮೈಸೂರಿನಲ್ಲಿ ಫಿಲ್ಮ್ ಸಿಟಿ ನಿರ್ಮಾಣವಾಗುತ್ತಿರುವ ಜಾಗದ ಸಮೀಪ ಚಲನಚಿತ್ರ ರಂಗದವರ ವಸತಿಗಾಗಿ 100 ಎಕರೆ ಜಾಗ, ಪರಭಾಷಾ ಚಿತ್ರಗಳಿಗೆ 5ರೂ. ಹೆಚ್ಚುವರಿ ತೆರಿಗೆ, ಡಾ.ರಾಜ್ಕುಮಾರ್ ಜನ್ಮ ದಿನಾಚರಣೆಯಂದೇ ಚಿತ್ರರಂಗದ ವಾರ್ಷಿಕ ಪ್ರಶಸ್ತಿ ಪ್ರದಾನ ಸೇರಿದಂತೆ ಹಲವಾರು ಮಹತ್ವದ ಶಿಫಾರಸ್ಸುಗಳನ್ನು ಮಾಡಿದೆ.

104. ಕರ್ನಾಟಕದ ಇತಿಹಾಸ ಪೂರ್ವದ ವಿಸ್ತಾರವಾದ ಅಧ್ಯಯನ ಮಾಡಿದ ಹೆಗ್ಗಳಿಕೆ ಯಾರಿಗೆ ಸಲ್ಲುತ್ತದೆ?

ಅ) ವಿಲಿಯಂ ಜೋನ್ಸ್

ಆ) ರೋಬೇರ್ತ್ ಬ್ರೂಸ್-ಫೂಟೇ

ಇ) ರೆಫರಲ್ ಕಿಟ್ಟಲ್

ಈ) ಹೆನ್ರಿ ಸರಹುಡ್

ರೋಬೇರ್ತ್ ಬ್ರೂಸ್-ಫೂಟೇ

ಕರ್ನಾಟಕದ ಇತಿಹಾಸ ಪೂರ್ವದ ವಿಸ್ತಾರವಾದ ಅಧ್ಯಯನ ಮಾಡಿದ ಹೆಗ್ಗಳಿಕೆ ರೋಬೇರ್ತ್ ಬ್ರೂಸ್-ಫೂಟೇ ಅವರಿಗೆ ಸಲ್ಲುತ್ತದೆ.

105. ಕನ್ನಡದ ಮೊದಲ ಮಹಿಳಾ ಪತ್ರಿಕೆ _______?

ಅ) ಸುಬೋಧ ನಂದಿನಿ

www.karunaduexams.com

ಆ) ಕರ್ನಾಟಕ ನಂದಿನಿ

ಇ) ಜ್ಞಾನ ಸುಬೋಧಿನಿ

ಈ) ಸನ್ಮಾರ್ಗ ದರ್ಶಿನಿ

ಕರ್ನಾಟಕ ನಂದಿನಿ

ಕನ್ನಡದ ಮೊದಲ ಮಹಿಳಾ ಪತ್ರಿಕೆ ಕರ್ನಾಟಕ ನಂದಿನಿ. ಈ ಪತ್ರಿಕೆಯನ್ನು ನಂಜನಗೂಡು ತಿರುಮಲಾಂಬ ರವರು 1913 ರಲ್ಲಿ ಆರಂಭಿಸಿದರು. ನಂಜನಗೂಡು ತಿರುಮಲಾಂಬ ಅವರು ಸನ್ಮಾರ್ಗ ದರ್ಶಿನಿ ಪತ್ರಿಕೆ ಸಂಪಾದಕಿ ಸಹ ಆಗಿದ್ದಾರೆ.

106. ಸ್ವರಸಾಮ್ರಾಟ್ ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಪ್ರಸಕ್ತ ಸಾಲಿನ ರಾಷ್ಟ್ರೀಯ ಪುರಸ್ಕಾರವನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಧನಂಜಯ ಹೆಗಡೆ

ಆ) ರೋಹಿಣಿ ದೇಶಪಾಂಡೆ ಜೋಶಿ

ಇ) ಉಸ್ತಾದ್ ಗುಲಾಮ್ ಮುಸ್ತಫಾ ಖಾನ್

ಈ) ಚಂದ್ರಕಾಂತ ಬೆಲ್ಲದ

ಮುಂಬೈನ ಹಿಂದೂಸ್ತಾನಿ ಗಾಯಕ, ರಾಮಪುರ-ಸೆಹಸ್ವಾನ್ ಘರಾಣೆ ಖ್ಯಾತಿಯ ಉಸ್ತಾದ್ ಗುಲಾಮ್ ಮುಸ್ತಫಾ ಖಾನ್ ಅವರನ್ನು ಸ್ವರಸಾಮ್ರಾಟ್ ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಪ್ರಸಕ್ತ ಸಾಲಿನ ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ₹ 1ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಯುವ ಪ್ರಶಸ್ತಿಯನ್ನು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಧನಂಜಯ ಹೆಗಡೆ ಹಾಗೂ ಗೋವಾದ ರೋಹಿಣಿ ದೇಶಪಾಂಡೆ ಜೋಶಿ ಅವರಿಗೆ ಪ್ರದಾನ ಮಾಡಲಾಗುತ್ತಿದ್ದು, ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ.

107. ಇತ್ತೀಚೆಗೆ ಸುದ್ದಿ ಪತ್ರಿಕೆಗಳಲ್ಲಿ ಸುದ್ದಿಯಾಗಿದ್ದ ಉಮ್ಮತ್ತೂರು ಅರಣ್ಯಪ್ರದೇಶಕ್ಕೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

I) ಉಮ್ಮತ್ತೂರು ಅರಣ್ಯಪ್ರದೇಶ ಚಿತ್ರದುರ್ಗ ಜಿಲ್ಲೆಯಲ್ಲಿದೆ

II) ಈ ಅರಣ್ಯಪ್ರದೇಶವನ್ನು ಕೃಷ್ಣಮೃಗ ವನ್ಯಜೀವಿಧಾಮವನ್ನಾಗಿ ಘೋಷಿಸಲು ತೀರ್ಮಾನಿಸಲಾಗಿದೆ

III) ಇದು ರಾಜ್ಯದ ಏಕೈಕ ಕೃಷ್ಣಮೃಗ ವನ್ಯಜೀವಿಧಾಮವಾಗಲಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನು ಯಾವುವು?

ಅ) ಹೇಳಿಕೆ ಒಂದು ಮಾತ್ರ ಸರಿ

ಆ) ಹೇಳಿಕೆ ಎರಡು ಮಾತ್ರ ಸರಿ

www.karunaduexams.com

ಇ) ಹೇಳಿಕೆ ಒಂದು ಮತ್ತು ಎರಡು ಸರಿ

ಈ) ಮೇಲಿನ ಎಲ್ಲಾ ಹೇಳಿಕೆಗಳು ಸರಿಯಾಗಿವೆ

ಹೇಳಿಕೆ ಎರಡು ಮಾತ್ರ ಸರಿ

ಹೇಳಿಕೆ ಒಂದು ತಪ್ಪಾಗಿದೆ ಏಕೆಂದರೆ ಉಮ್ಮತ್ತೂರು ಅರಣ್ಯ ಚಾಮರಾಜನಗರ ಜಿಲ್ಲೆಯಲ್ಲಿದೆ. ಈ ಭಾಗವನ್ನು ಕೃಷ್ಣಮೃಗ ವನ್ಯಜೀವಿಧಾಮವಾಗಿ ಘೋಷಿಸಲು ರಾಜ್ಯ ವನ್ಯಜೀವಿ ಮಂಡಳಿ ಸಭೆಯು ಒಪ್ಪಿಗೆ ಸೂಚಿಸಿದೆ ಆದ್ದರಿಂದ ಹೇಳಿಕೆ ಎರಡು ಸರಿಯಾಗಿದೆ. ಹೇಳಿಕೆ ಮೂರು ತಪ್ಪು ಏಕೆಂದರೆ ಈ ನಿರ್ಧಾರದಿಂದಾಗಿ ರಾಜ್ಯದಲ್ಲಿ ಕೃಷ್ಣಮೃಗ ವನ್ಯಜೀವಿಧಾಮಗಳ ಸಂಖ್ಯೆ ಮೂರಕ್ಕೇರಲಿದೆ. ಸದ್ಯ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ಮತ್ತು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಮೈದನಹಳ್ಳಿಯಲ್ಲಿ ಕೃಷ್ಣಮೃಗ ವನ್ಯಜೀವಿಧಾಮಗಳಿವೆ. ಈಗ ಉಮ್ಮತ್ತೂರು ಅರಣ್ಯವು ಕರ್ನಾಟಕದ ಮೂರನೇ ಕೃಷ್ಣಮೃಗ ವನ್ಯಜೀವಿಧಾಮಕ್ಕೆ ಪಾತ್ರವಾಗಲಿದೆ. ರಾಜ್ಯ ವನ್ಯಜೀವಿ ಮಂಡಳಿಯ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಮ್ಮತ್ತೂರು ಅರಣ್ಯವನ್ನು ಕೃಷ್ಣಮೃಗಧಾಮವಾಗಿ ಘೋಷಿಸಲು ಒಪ್ಪಿಗೆ ನೀಡಿದ್ದಾರೆ. ಸಭೆಯ ನಡಾವಳಿಗಳಿಗೆ ಸಹಿ ಹಾಕಿದ ಬಳಿಕ ಅಧಿಕೃತ ಆದೇಶ ಹೊರ ಬೀಳಲಿದೆ.

108. ಇತ್ತೀಚೆಗೆ ಸುದ್ದಿಯಲ್ಲಿದ "ಸದರ್ನ್ ಬರ್ಡ್ ವಿಂಗ್" ಚಿಟ್ಟೆಗೆ ಸಂಬಂಧಿಸಿದಂತೆ ಯಾವ ಹೇಳಿಕೆಗಳು ಸರಿಯಾಗಿವೆ?

I) ಇದು ದೇಶದಲ್ಲಿ ಕಾಣಬಹುದಾದ ಚಿಟ್ಟೆಗಳ ಪೈಕಿ ಅತಿದೊಡ್ಡ ಚಿಟ್ಟೆ ಎನಿಸಿದೆ

II) ರಾಜ್ಯ ಸರ್ಕಾರ ಈ ಚಿಟ್ಟೆಯನ್ನು ನಾಡಚಿಟ್ಟೆಯನ್ನಾಗಿ ಘೋಷಿಸಿದೆ

III) ನಾಡ ಚಿಟ್ಟೆಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ ಕರ್ನಾಟಕ

ಈ ಕೆಳಗೆ ಕೊಟ್ಟಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) ಹೇಳಿಕೆ ಒಂದು & ಎರಡು ಸರಿ

ಆ) ಹೇಳಿಕೆ ಒಂದು & ಮೂರು ಸರಿ

ಇ) ಹೇಳಿಕೆ ಎರಡು & ಮೂರು ಸರಿ

ಈ) ಮೇಲಿನ ಎಲ್ಲಾ ಹೇಳಿಕೆಗಳು ಸರಿ

ಹೇಳಿಕೆ ಒಂದು & ಎರಡು ಸರಿ

ಸದರ್ನ್ ಬರ್ಡ್ ವಿಂಗ್ ಚಿಟ್ಟೆ ದೇಶದಲ್ಲಿ ಕಾಣಬಹುದಾದ ಚಿಟ್ಟೆಗಳ ಪ್ರಭೇದಗಳಲ್ಲಿ ಅತಿ ದೊಡ್ಡ ಚಿಟ್ಟೆ ಆಗಿದೆ. ಈ ಚಿಟ್ಟೆಯನ್ನು ರಾಜ್ಯ ಚಿಟ್ಟೆಯನ್ನಾಗಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಮಹಾರಾಷ್ಟ್ರದ ನಂತರ ಚಿಟ್ಟೆಯೊಂದನ್ನು ನಾಡ ಚಿಟ್ಟೆಯನ್ನಾಗಿ ಅಳವಡಿಸಿಕೊಳ್ಳಲಿರುವ ಎರಡನೇ ರಾಜ್ಯ ಕರ್ನಾಟಕ. *Troides* Minos ಇದು ಈ ಚಿಟ್ಟೆಯ ವೈಜ್ಞಾನಿಕ ಹೆಸರು.

109. ರಾಜ್ಯ ಸರ್ಕಾರದ ನವೋದ್ಯಮ ನೀತಿ (ಸ್ಟಾರ್ಟ್ ಆಫ್ ಪಾಲಿಸಿ)ಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ರಾಜ್ಯ ಸರ್ಕಾರ ಕರ್ನಾಟಕ ನವೋದ್ಯಮ ನೀತಿ 2015-2022 ಜಾರಿಗೆ ತಂದಿದೆ

www.karunaduexams.com

II) ಇದರಡಿ ತಂತ್ರಜ್ಞಾನ ಹಾಗೂ ಉತ್ಪಾದನೆ ಆಧಾರಿತ ನವೋದ್ಯಮಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ

III) ಈ ನೀತಿಯಡಿ 200 ಕೋಟಿ ರೂ. ಮೊತ್ತದ "ನವೋದ್ಯಮ ನಿಧಿ' ಸ್ಥಾಪಿಸಲಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಹೇಳಿಕೆ ಎರಡು ಮತ್ತು ಮೂರು ಮಾತ್ರ

ಈ) ಹೇಳಿಕೆ ಒಂದು ಮತ್ತು ಎರಡು ಮಾತ್ರ

ಹೇಳಿಕೆ ಎರಡು ಮತ್ತು ಮೂರು ಮಾತ್ರ

ಕರ್ನಾಟಕ ನವೋದ್ಯಮ ನೀತಿ 2015-2020 ರಾಜ್ಯ ಸರ್ಕಾರ ಜಾರಿಗೆ ತಂದಿದೆ. ಈ ನೂತನ "ನವೋದ್ಯಮ ನೀತಿ' (ಸ್ಟಾರ್ಟ್‌ಅಪ್ ಪಾಲಿಸಿ) ಮೂಲಕ 2020ರ ವೇಳೆಗೆ ತಂತ್ರಜ್ಞಾನ ಆಧರಿತ 20 ಸಾವಿರ ಹಾಗೂ ಉತ್ಪಾದನೆ ಆಧರಿತ 6 ಸಾವಿರ ನವೋದ್ಯಮಗಳನ್ನು ಸ್ಥಾಪಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಜಾಗತಿಕ ಮಟ್ಟದಲ್ಲಿ ಪೈಪೋಟಿ ಎದುರಿಸುವಂತೆ ನವೋದ್ಯಮಗಳಿಗೆ ಉತ್ತೇಜನ ನೀಡಲು ತಂದಿರುವ ಈ ನೀತಿಯಡಿ 200 ಕೋಟಿ ರೂ. ಮೊತ್ತದ "ನವೋದ್ಯಮ ನಿಧಿ' ಸ್ಥಾಪಿಸಲಾಗಿದೆ.

110. ಈ ಕೆಳಗಿನ ಯಾವ ಹೆಸರಿನಡಿ ಬೆಂಗಳೂರಿನಲ್ಲಿ ಅತಿದೊಡ್ಡ ಮಹಿಳಾ ಉದ್ಯಮಿಗಳ ಶೃಂಗಸಭೆ ನವೆಂಬರ್ ನಲ್ಲಿ ನಡೆಯಲಿದೆ?

ಅ) ಥಿಂಕ್ ಬಿಗ್-2016

ಆ) ವುವೆನ್ ಪವರ್-2016

ಈ) ಬಿಗ್ ಸ್ಟೆಪ್-2016

ಈ) ವಿ ಫಸ್ಟ್-2016

ಥಿಂಕ್ ಬಿಗ್-2016

ಬೆಂಗಳೂರಿನಲ್ಲಿ ಅತಿದೊಡ್ಡ ಮಹಿಳಾ ಉದ್ಯಮಿಗಳ ಶೃಂಗಸಭೆ 'ಥಿಂಕ್ ಬಿಗ್ 2016 (Think Big-2016)' ನವೆಂಬರ್ 14 ಮತ್ತು 15 ರಂದು ನಡೆಯಲಿದೆ. ಇಷ್ಟು ದೊಡ್ಡ ಪ್ರಮಾಣದ ಮಹಿಳಾ ಉದ್ಯಮಿಗಳ ಶೃಂಗಸಭೆ ನಡೆಯುತ್ತಿರುವುದು ಇದೇ ಮೊದಲು. ಈ ಶೃಂಗಸಭೆಯಲ್ಲಿ 45 ದೇಶಗಳ ಪ್ರತಿನಿಧಿಗಳು, ಉದ್ಯಮ ಕ್ಷೇತ್ರದ 300 ಮುಖ್ಯಸ್ಥರು ಸೇರಿದಂತೆ ಒಟ್ಟು 4,000 ಪ್ರತಿನಿಧಿಗಳು ಪಾಳ್ಗೊಳ್ಳಲಿದ್ದಾರೆ. ಉದ್ಯಮ ಕ್ಷೇತ್ರದ ಮಹಿಳೆಯರಿಗೆ ನೆರವಾಗಲು ವಿವಿಧ ಬ್ಯಾಂಕ್ಗಳ ಪ್ರತಿನಿಧಿಗಳೂ ಭಾಗವಹಿಸಲಿದ್ದಾರೆ.

www.karunaduexams.com

111. ರಾಜ್ಯ ಸರ್ಕಾರ ಇತ್ತೀಚೆಗೆ "ಕರ್ನಾಟಕ ವೈಮಾನಿಕ ನೀತಿ" ____ಗೆ ತಿದ್ದುಪಡಿ ತರಲು ನಿರ್ಧರಿಸಿದೆ?

ಅ) 2013-18

ಆ) 2013-20

ಇ) 2013-22

ಈ) 2015-20

2013-22

'ಕರ್ನಾಟಕ ವೈಮಾನಿಕ ನೀತಿ 2013-23'ಕ್ಕೆ ತಿದ್ದುಪಡಿ ಮಾಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ರಾಜ್ಯದಲ್ಲಿ 2013ರ ಫೆಬ್ರುವರಿ 13 ರಿಂದ 'ಕರ್ನಾಟಕ ವೈಮಾನಿಕ ನೀತಿ 2013-23' ಚಾಲನೆಯಲ್ಲಿದೆ. ಕರ್ನಾಟಕ ಕೈಗಾರಿಕಾ ನೀತಿ 2014-19ರಲ್ಲಿರುವ ಎಲ್ಲ ವಿನಾಯಿತಿಗಳು ಅಂಶಗಳು ವೈಮಾನಿಕ ನೀತಿ 2013-23ರಲ್ಲೂ ಇರುವುದರಿಂದ ವಿನಾಯಿತಿ ಮತ್ತು ಪ್ರೋತ್ಸಾಹ ನೀಡುವಾಗ ಗೊಂದಲ ಉಂಟಾಗಿದೆ. ಈ ಕಾರಣಕ್ಕೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ.

112. ಇತ್ತೀಚೆಗೆ ರಾಜ್ಯಕ್ಕೆ ಸಂಬಂಧಿಸಿದಂತೆ ಸುದ್ದಿಪತ್ರಿಕೆಗಳಲ್ಲಿ ಪ್ರಕಟಗೊಂಡ ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I) ಕೊಪ್ಪಳ ಜಿಲ್ಲೆಯ ನವಿಲೆ ಬಳಿ ಹೊಸ ಅಣೆಕಟ್ಟು ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ

II) ಈ ಅಣೆಕಟ್ಟನ್ನು ಆಂಧ್ರಪ್ರದೇಶದ ಆರ್ಥಿಕ ಸಹಕಾರದಲ್ಲಿ ನಿರ್ಮಿಸಲಾಗುವುದು

III) ಈ ಯೋಜನೆಯ ವೆಚ್ಚವನ್ನು ಆಂಧ್ರ ಶೇ.35 ಹಾಗೂ ರಾಜ್ಯ ಸರ್ಕಾರ ಶೇ.65 ಭರಿಸಲಿವೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು & ಎರಡು ಸರಿ

ಆ) ಹೇಳಿಕೆ ಎರಡು & ಮೂರು ಸರಿ

ಇ) ಹೇಳಿಕೆ ಒಂದು & ಮೂರು ಸರಿ

ಈ) ಮೇಲಿನ ಎಲ್ಲಾ ಹೇಳಿಕೆಗಳು ಸರಿ

ಮೇಲಿನ ಎಲ್ಲಾ ಹೇಳಿಕೆಗಳು ಸರಿ

ಹೊಸಪೇಟೆ ಬಳಿ ಇರುವ ತುಂಗಭದ್ರಾ ಜಲಾಶಯದಲ್ಲಿ 32 ಟಿಎಂಸಿ ಹೂಳು ತುಂಬಿರುವುದರಿಂದ ಹೂಳು ತೆಗೆಯುವುದು ತಾಂತ್ರಿಕವಾಗಿ ಸಾಧುವಲ್ಲ ಎಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಹೀಗಾಗಿ ಕೊಪ್ಪಳ ಜಿಲ್ಲೆಯ ನವಿಲೆ ಬಳಿ 35 ಟಿಎಂಸಿ ಸಾಮರ್ಥ್ಯದ ಮತ್ತೊಂದು ಜಲಾಶಯ ನಿರ್ಮಿಸಲಾಗುವುದು.ಆಂಧ್ರದ ಶೇ.35 ಹಾಗೂ ರಾಜ್ಯದ ಶೇ.65ರಷ್ಟುಅನುದಾನವನ್ನು ಜಂಟಿಯಾಗಿ ವಿನಿಯೋಗಿಸಲಾಗುವುದು. ಯೋಜನೆಗೆ ಸುಮಾರು 5 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜು ಮಾಡಲಾಗಿದೆ.

113. ರಾಜ್ಯದ ರೈತರಿಗೆ ಸಾಂತ್ವನ ಹೇಳಲೆಂದು "ರೈತ ಚೇತನ" ಹೆಸರಿನ ಸಹಾಯವಾಣಿಯನ್ನು ಆರಂಭಿಸಿರುವ ಕೃಷಿ ವಿಶ್ವವಿದ್ಯಾಲಯ ಯಾವುದು?

ಅ) ಬೆಂಗಳೂರು ಕೃಷಿ ವಿವಿ

ಆ) ಧಾರಾವಾಡ ಕೃಷಿ ವಿವಿ

ಇ) ರಾಯಚೂರು ಕೃಷಿ ವಿವಿ

ಈ) ಶಿವಮೊಗ್ಗ ಕೃಷಿ ವಿವಿ

ಧಾರಾವಾಡ ಕೃಷಿ ವಿವಿ

ಬೆಳೆಹಾನಿ ಮತ್ತಿತರ ಕಾರಣಗಳಿಂದ ಕಂಗೆಟ್ಟು ದಾರಿ ಕಾಣದೆ ಆತ್ಮಹತ್ಯೆಗೆ ಶರಣಾಗುತ್ತಿದ್ದ ರೈತರಿಗೆ ಸಾಂತ್ವನ ಹೇಳಲೆಂದು ಧಾರವಾಡ ಕೃಷಿ ವಿಶ್ವವಿದ್ಯಾಲಯ 2015ರ ಜುಲೈ 23ರಂದು "ರೈತ ಚೇತನ ಸಹಾಯವಾಣಿ' ಆರಂಭಸಿದೆ. ಆ ಮೂಲಕ ಕೃಷಿ ವಿಜ್ಞಾನಿಗಳು ಹಾಗೂ ತಜ್ಞರು ರೈತರೊಂದಿಗೆ ನೇರವಾಗಿ ಸಂವಾದ ನಡೆಸುವ ಅವಕಾಶವನ್ನೂ ಕಲ್ಪಿಸಿದೆ. ಸುಮಾರು 45 ಕೃಷಿ ವಿವಿ ಪ್ರಾಧ್ಯಾಪಕರು, ವಿಜ್ಞಾನಿಗಳು, ತಜ್ಞರು ಹಾಗೂ ಸಿಬ್ಬಂದಿ ಪಾಳಿ ಪ್ರಕಾರ ಕಾರ್ಯ ನಿರ್ವಹಿಸಿದ್ದಾರೆ. ಧಾರವಾಡದ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ ಈ ಸಾರ್ಥಕ ಕಾರ್ಯಕ್ಕೆ ಕೈ ಜೋಡಿಸಿದೆ. ಇದುವರೆಗೂ ಸುಮಾರು 7400ಕ್ಕೂ ಹೆಚ್ಚು ರೈತರಿಗೆ ಸಾಂತ್ವನ ಹೇಳಲಾಗಿದೆ.

114. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

I) ರಾಮಥಾಳ್ ಮರೋಳ ಏತನೀರಾವರಿ ಯೋಜನೆ ಏಷ್ಯಾದ ಅತಿದೊಡ್ಡ ನೀರಾವರಿ ಯೋಜನೆಯಾಗಿದೆ

II) ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ 59 ,000 ಎಕರೆ ಭೂಮಿಗೆ ನೀರುಣಿಸುವ ಯೋಜನೆ ಇದಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಯನ್ನು ಗುರುತಿಸಿ:

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಒಂದು ಮಾತ್ರ

ರಾಮಥಾಳ್ ಮರೋಳ ಏತನೀರಾವರಿ ಯೋಜನೆ ಏಷ್ಯಾದಲ್ಲಿಯೇ ಅತಿದೊಡ್ಡ ಹನಿನೀರಾವರಿ ಯೋಜನೆಯಾಗಿದೆ. ಈ ಯೋಜನೆಯ ಕಾಮಗಾರಿ ಪೂರ್ಣಗೊಂಡಿದ್ದು, ಇದೇ ನವೆಂಬರ್‌ನಲ್ಲಿ ಉದ್ಘಾಟನೆಯಾಗಲಿದೆ. ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 59 ,000 ಎಕರೆ ಭೂಮಿಗೆ ನೀರುಣಿಸುವ ಯೋಜನೆ ಇದಾಗಿದೆ. ಅಕ್ಟೋಬರ್ ತಿಂಗಳಿನಲ್ಲಿ ಪ್ರಯೋಗಾರ್ಥವಾಗಿ ನೀರು ಹರಿಸಲಾಗುವುದು.

www.karunaduexams.com

115. ರಾಜ್ಯದ ಛಾಯಾಗ್ರಾಹಕರೊಬ್ಬರು ಚಿತ್ರಿಸಿದ "'ಶಾರ್ಟ್ಟೋಡ್ ಸ್ನೇಕ್ ಈಗಲ್ ಫೀಡಿಂಗ್ ಸ್ನೇಕ್'" ಶೀರ್ಷಿಕೆಯ ಛಾಯಾಚಿತ್ರವು ಅಮೆರಿಕಾದ ಪ್ರತಿಷ್ಠಿತ ಪ್ರಶಸ್ತಿ ಆಯ್ಕೆಯಾಗಿದೆ. ಆ ಛಾಯಾಗ್ರಾಹಕರು ಯಾರು ಗುರುತಿಸಿ?

ಅ) ಎಸ್. ತಿಪ್ಪೇಸ್ವಾಮಿ

ಆ) ರುದ್ರೇಗೌಡ

ಇ) ಉದಯ್ ಕುಮಾರ್

ಈ) ಮಹೇಶ್ ರಾಜ್

ಎಸ್. ತಿಪ್ಪೇಸ್ವಾಮಿ

ಮೈಸೂರಿನ ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ ಚಿತ್ರಿಸಿದ 'ಶಾರ್ಟ್ ಟೋಡ್ ಸ್ನೇಕ್ ಈಗಲ್ ಫೀಡಿಂಗ್ ಸ್ನೇಕ್ (Short-toed snake-eagle feeding snake )' ಶೀರ್ಷಿಕೆಯ ಛಾಯಾಚಿತ್ರವನ್ನು ಅಮೆರಿಕದ ಫೋಟೋಗ್ರಫಿ ಸೊಸೈಟಿಯು ವರ್ಷದ ಶ್ರೇಷ್ಠ ಚಿತ್ರವೆಂದು ಘೋಷಿಸಿದೆ. ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ವನ್ಯಜೀವಿ ವಿಭಾಗಗಳಲ್ಲಿ ಪ್ರಶಸ್ತಿ ಪಡೆದ 70 ದೇಶಗಳ ಛಾಯಾಗ್ರಾಹಕರಿಂದ ಪ್ರತಿ ವರ್ಷ ಛಾಯಾಚಿತ್ರಗಳನ್ನು ತರಿಸಿಕೊಳ್ಳಲಾಗುತ್ತದೆ. ನಂತರ ತೀರ್ಪುಗಾರರು ಹೆಚ್ಚು ಅಂಕ ನೀಡುವ ವನ್ಯಜೀವಿ ಛಾಯಾಚಿತ್ರವನ್ನು ವರ್ಷದ ಶ್ರೇಷ್ಠ ವನ್ಯಜೀವಿ ಛಾಯಾಚಿತ್ರ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಈ ಬಾರಿಯ ಸ್ಪರ್ಧೆಯಲ್ಲಿ ತಿಪ್ಪೇಸ್ವಾಮಿ ಅವರ ಚಿತ್ರ ಆಯ್ಕೆಯಾಗಿದೆ. ಅಕ್ಟೋಬರ್ ತಿಂಗಳಲ್ಲಿ ಅಮೆರಿಕದ ಟೆಕ್ಸಾಸ್ನಲ್ಲಿ ನಡೆಯುವ ಸಮಾರಂಭದಲ್ಲಿ ಬಹುಮಾನ ವಿತರಿಸಲಾಗುತ್ತದೆ.

116. ರಾಜ್ಯ ಸರ್ಕಾರದ ಉದ್ದೇಶಿತ ಮೇಕೆದಾಟು ಅಣೆಕಟ್ಟು ಯೋಜನೆಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ಇದು 50 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಅಣೆಕಟ್ಟು ಯೋಜನೆಯಾಗಿದೆ

II) ಕುಡಿಯುವ ನೀರಿನ ಪೂರೈಕೆ ಮಾತ್ರ ಈ ಯೋಜನೆಯ ಉದ್ದೇಶವಾಗಿದೆ

III) ಕರ್ನಾಟಕ ಸರ್ಕಾರ, ಬೆಂಗಳೂರು ಜಲಮಂಡಳಿ, ಬಿಬಿಎಂಪಿ ಇದಕ್ಕೆ ಆರ್ಥಿಕ ನೆರವು ನೀಡುತ್ತಿವೆ

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಹೇಳಿಕೆ ಮೂರು ಮಾತ್ರ

ಈ) ಎಲ್ಲಾ ಹೇಳಿಕೆಗಳು ಸರಿ

ಹೇಳಿಕೆ ಮೂರು ಮಾತ್ರ

ಮೇಕೆದಾಟು ಯೋಜನೆಯಡಿ 67 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಒಂದೇ ಅಣೆಕಟ್ಟು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಬೆಂಗಳೂರು ನಗರಕ್ಕೆ ಕುಡಿಯಲು ಹಾಗೂ 300 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಉದ್ದೇಶಕ್ಕೆ ಈ ಜಲಾಶಯ ನಿರ್ಮಿಸಲಾಗುವುದು. ನೀರಿನ ಕೊರತೆ ಎದುರಾದಲ್ಲಿ ತಮಿಳುನಾಡಿಗೆ ವಾರ್ಷಿಕವಾಗಿ ಬಿಡುಗಡೆ

www.karunaduexams.com

ಮಾಡಬೇಕಾದ 192 ಟಿಎಂಸಿ ನೀರು ಹರಿಸಲು ಇದರಿಂದ ಅನುಕೂಲವಾಗಲಿದೆ. ಕರ್ನಾಟಕ ಸರ್ಕಾರ, ಬೆಂಗಳೂರು ಜಲಮಂಡಳಿ, ಬಿಬಿಎಂಪಿ ಆರ್ಥಿಕ ನೆರವು ನೀಡಲಿವೆ.

117. ಈ ಕೆಳಗಿನ ಯಾವ ಜಿಲ್ಲೆಯಲ್ಲಿ "ಶೌರ್ಯ ಅಕಾಡೆಮಿ"ಯನ್ನು ಸ್ಥಾಪಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ?

ಅ) ಧಾರಾವಾಡ

ಆ) ಚಿತ್ರದುರ್ಗ

ಇ) ಬೆಳಗಾವಿ

ಈ) ದಾವಣಗೆರೆ

ಬೆಳಗಾವಿ

ಸಂಗೊಳ್ಳಿ ರಾಯಣ್ಣನ ಹುಟ್ಟೂರಾದ ಸಂಗೊಳ್ಳಿಯಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಮಾದರಿಯಲ್ಲಿ ಶೌರ್ಯ ಅಕಾಡೆಮಿ ಹಾಗೂ ಸೈನಿಕ ಶಾಲೆ ನಿರ್ಮಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಅಲ್ಲದೇ, ಮಹಾಭಾರತದ ಇತಿಹಾಸ ಸಾರುವ ಹರ್ಯಾಣದ ಬಳಿ ಇರುವ 'ಕುರುಕ್ಷೇತ್ರ' ನಗರದ ಮಾದರಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಿಗೆ ನೇಣುಗಂಬಕ್ಕೆ ಏರಿಸಿದ ಬೆಳಗಾವಿ ಜಿಲ್ಲೆ ನಂದಗಡವನ್ನು ಅಭಿವೃದ್ಧಿಪಡಿಸಲು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ. ಶೌರ್ಯ ಅಕಾಡೆಮಿ ಮತ್ತು ಸೈನಿಕ ಶಾಲೆ ನಿರ್ಮಾಣಕ್ಕೆ ಅಗತ್ಯವಿರುವ 100 ಎಕರೆ ಜಮೀನು ಸ್ವಾಧೀನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

118. ______ ಮೆವ್ಯಾ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುವ ರಾಜ್ಯದ ಮೊದಲ ಘಟಕವನ್ನು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಬಿಟಿಪಿಎಸ್)ದಲ್ಲಿ ಇತ್ತೀಚೆಗೆ ಆರಂಭಸಿಲಾಗಿದೆ?

ಅ) 700 ಮೆವ್ಯಾ

ಆ) 800 ಮೆವ್ಯಾ

ಇ) 500 ಮೆವ್ಯಾ

ಈ) 400 ಮೆವ್ಯಾ

700 ಮೆವ್ಯಾ

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಬಿಟಿಪಿಎಸ್)ದಲ್ಲಿ 700 ಮೆಗಾವ್ಯಾಟ್ ಸಾಮರ್ಥ್ಯದ ಮೂರನೇ ಘಟಕ ಉತ್ಪಾದನೆ ಆರಂಭಿಸಿದೆ. ಪ್ರತಿ ದಿನ 700 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ರಾಜ್ಯದ ಮೊದಲ ಘಟಕ ಇದಾಗಿದೆ. ಬಿಟಿಪಿಎಸ್ ಪ್ರಸ್ತುತ ಪ್ರತಿನಿತ್ಯ 40 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಈಗಾಗಲೇ ಬಿಟಿಪಿಎಸ್ನಲ್ಲಿ ತಲಾ 500 ಮೆವ್ಯಾ ವಿದ್ಯುತ್ ಉತ್ಪಾದಿಸುವ ಎರಡು ಘಟಕಗಳು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದ್ದು, 700 ಮೆವ್ಯಾ ಸಾಮರ್ಥ್ಯದ ಮೂರನೇ ಘಟಕದ ಕಾರ್ಯಾರಂಭದಿಂದ ಪ್ರಸ್ತುತ 1700 ಮೆವ್ಯಾ ವಿದ್ಯುತ್ ಉತ್ಪಾದನೆಯಾಗುತ್ತಿದೆ.

www.karunaduexams.com

119. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಬೆಣ್ಣೆಹಳ್ಳ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ದುಂಡಸಿಯ ಬಳಿ ಜನ್ಮತಾಳುತ್ತದೆ

II) ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಮೆಣಸಗಿ ಬಳಿ ಬೆಣ್ಣೆಹಳ್ಳ ಮಲಪ್ರಭಾ ನದಿ ಸೇರುತ್ತದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಯನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಉತ್ತರಿಸಿ:

ಅ) ಹೇಳಿಕೆ I ಮಾತ್ರ

ಆ) ಹೇಳಿಕೆ II ಮಾತ್ರ

ಇ) ಎರಡು ಹೇಳಿಕೆ ತಪ್ಪು

ಈ) ಎರಡು ಹೇಳಿಕೆ ಸರಿ

ಎರಡು ಹೇಳಿಕೆ ಸರಿ

ಬೆಣ್ಣೆಹಳ್ಳ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ದುಂಡಸಿಯ ಬಳಿ ಜನ್ಮತಾಳುತ್ತದೆ. ಧಾರವಾಡ, ಗದಗ ಜಿಲ್ಲೆಗಳಲ್ಲಿ ಬೃಹದಾಕಾರವಾಗಿ ಒಟ್ಟು 138 ಕಿ.ಮೀ ಉದ್ದಕ್ಕೆ ಹರಿದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಮೆಣಸಗಿ ಬಳಿ ಮಲಪ್ರಭಾ ನದಿ ಸೇರುತ್ತದೆ. ಬೆನದಿಯಂತೆಯೇ ಇರುವ ಈ ಹಳ್ಳಕ್ಕೆ ಶಿಗ್ಗಾಂವಿ, ಕುಂದಗೋಳ, ಹುಬ್ಬಳ್ಳಿ, ಗದಗ, ನವಲಗುಂದ, ನರಗುಂದ ಮತ್ತು ರೋಣ ತಾಲ್ಲೂಕುಗಳಲ್ಲಿ ಹರಿಯುವ ಒಟ್ಟು 14 ಇತರ ಹಳ್ಳಗಳು ಸೇರುತ್ತವೆ.

120. ಹಾರ ಕೂಡ ಮಠದ ವತಿಯಿಂದ ಸಂಗೀತ ಸಾಧಕರಿಗೆ ಕೊಡುವ 'ಶ್ರೀಚನ್ನರೇಣುಕ ಬಸವ ಪ್ರಶಸ್ತಿ'ಗೆ ಯಾರನ್ನು ಆಯ್ಕೆ ಮಾಡಲಾಗಿದೆ?

ಅ) ಹಂಸಲೇಖ

ಆ) ಸಂಗೀತಾ ಕಟ್ಟಿ

ಇ) ರವಿ ಮೂಗೂರು

ಈ) ವಿ ಮನೋಹರ್

ಸಂಗೀತಾ ಕಟ್ಟಿ

ಬಸವಕಲ್ಯಾಣ ತಾಲ್ಲೂಕಿನ ಹಾರ ಕೂಡ ಮಠದ ವತಿಯಿಂದ ಸಂಗೀತ ಸಾಧಕರಿಗೆ ಕೊಡುವ 'ಶ್ರೀಚನ್ನರೇಣುಕ ಬಸವ ಪ್ರಶಸ್ತಿ'ಗೆ ಗಾಯಕಿ ಸಂಗೀತಾ ಕಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ರೂ 1 ಲಕ್ಷ ನಗದು, ಒಂದು ತೊಲ ಚಿನ್ನ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಹಾರಕೂಡ ಮಠದಲ್ಲಿ ಅಕ್ಟೋಬರ್ 10 ರಂದು ಆಯೋಜಿಸಿರುವ 30ನೇ ಪ್ರಚಾರೋಪನ್ಯಾಸ ಮಾಲೆ ಮತ್ತು ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

121. ಇತ್ತೀಚೆಗೆ ಬಿಡುಗಡೆಗೊಂಡ ಮೂರನೇ ಹಂತದ ಸ್ಮಾರ್ಟ್ ಸಿಟಿ ಪಟ್ಟಿಯಲ್ಲಿ ರಾಜ್ಯದ ಯಾವ ನಗರ ಸ್ಥಾನ ಪಡೆದಿಲ್ಲ?

ಅ) ಕೋಲಾರ

ಆ) ಮಂಗಳೂರು

ಇ) ಹುಬ್ಬಳ್ಳಿ-ಧಾರಾವಾಡ

ಈ) ಶಿವಮೊಗ್ಗ

ಕೋಲಾರ

ಮೂರನೇ ಹಂತದ ಸ್ಮಾರ್ಟ್ ಸಿಟಿ ಪಟ್ಟಿಯಲ್ಲಿ ಕರ್ನಾಟಕದ ಮಂಗಳೂರು, ಹುಬ್ಬಳ್ಳಿ- ಧಾರವಾಡ, ಶಿವಮೊಗ್ಗ ಮತ್ತು ತುಮಕೂರು ಸ್ಥಾನ ಪಡೆದಿವೆ. ಇವುಗಳಲ್ಲಿ ವಿದ್ಯುತ್, ನೀರು, ನೈರ್ಮಲ್ಯ ಮತ್ತು ಘನತ್ಯಾಜ್ಯ ವಿಲೇವಾರಿ, ಪರಿಣಾಮಕಾರಿ ಸಂಚಾರ ವ್ಯವಸ್ಥೆ ಮತ್ತು ಸಾರ್ವಜನಿಕ ಸಾರಿಗೆ, ಮಾಹಿತಿ ತಂತ್ರಜ್ಞಾನ ಸಂಪರ್ಕ ಮತ್ತು ಇ- ಆಡಳಿತ ಮತ್ತಿತರರ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು.

122. ಹೈದ್ರಾಬಾದ್-ಕರ್ನಾಟಕ ವಿಮೋಚನೆ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಸೆಪ್ಟೆಂಬರ್ 10

ಆ) ಅಕ್ಟೋಬರ್ 17

ಇ) ನವೆಂಬರ್ 11

ಈ) ಸೆಪ್ಟೆಂಬರ್ 17

ಸೆಪ್ಟೆಂಬರ್ 17

ಹೈದ್ರಾಬಾದ್-ಕರ್ನಾಟಕ ವಿಮೋಚನೆ ದಿನವನ್ನು ಪ್ರತಿ ವರ್ಷ ಸೆಪ್ಟೆಂಬರ್ 17 ರಂದು ಆಚರಿಸಲಾಗುತ್ತದೆ. ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ದೊರಕಿದ್ದರೂ ಹೈದ್ರಾಬಾದ್ ಕರ್ನಾಟಕಕ್ಕೆ ಮಾತ್ರ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಹೈದ್ರಾಬಾದ್ ನಿಜಾಮರ ವಶದಲ್ಲಿದ್ದ ಹೈದ್ರಾಬಾದ್ ಕರ್ನಾಟಕ, ಭಾರತ ಸ್ವತಂತ್ರಗೊಂಡ ಒಂದು ವರ್ಷ ಒಂದು ತಿಂಗಳು ಎರಡು ದಿನದ ನಂತರ ಸ್ವಾತಂತ್ರ್ಯ ಪಡೆಯಿತು. ಹೀಗಾಗಿ ಈ ದಿನವನ್ನು ಹೈದ್ರಾಬಾದ್ ಕರ್ನಾಟಕ ವಿಮೋಚನೆ ದಿನವಾಗಿ ಪ್ರತಿ ವರ್ಷ ಆಚರಿಸಲಾಗುತ್ತದೆ. ಇಲ್ಲಿಗೆ ಸ್ವಾತಂತ್ರ್ಯ ದೊರಕಿಸಲು ವಿಶೇಷವಾಗಿ ಹೋರಾಡಿದ ರಮಾನಂದ ತೀರ್ಥ, ಸರ್ದಾರ ವಲ್ಲಭಭಾಯಿ ಪಟೇಲ ಮೊದಲಾದವರನ್ನು ಈ ದಿನದಂದು ಸ್ಮರಿಸಲಾಗುತ್ತದೆ.

123. ಈ ಕೆಳಗಿನ ಯಾವ ಜಲಪಾತಗಳು ಅಘನಾಶಿನಿ ನದಿಗೆ ಸಂಬಂಧಿಸಿವೆ?

I) ಉಂಚಳ್ಳಿ

II) ಶಿವಗಂಗೆ

III) ಇಳಿಮನೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ:

ಅ) I & II

ಆ) I & III

ಇ) II & III

ಈ) I, II & III

I, II & III

ಉತ್ತರಕನ್ನಡ ಜಿಲ್ಲೆಯ ಸಿರಸಿ ಬಳಿ ಹುಟ್ಟಿ ಹರಿಯುವ ಎರಡು ಹೊಳೆಗಳು ಸಿದ್ದಾಪುರ ತಾಲ್ಲೂಕಿನ ಮಟ್ಟೇಹಳ್ಳಿ ಎಂಬಲ್ಲಿ ಸಂಗಮಗೊಂಡು ಅಘನಾಶಿನಿ ಎಂಬ ಹೆಸರಿನಡಿ ಹರಿಯುತ್ತದೆ. ಉಂಚಳ್ಳಿ, ಶಿವಗಂಗೆ ಮತ್ತು ಇಳಿಮನೆ ಜಲಪಾತ ಈ ನದಿಯಿಂದ ಉಂಟಾಗಿರುವ ಜಲಪಾತಗಳಾಗಿವೆ.

124. ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ _______ಎಂದು ಮರು ನಾಮಕರಣ ಮಾಡಲು ಸಚಿವ ಸಂಪುಟ ಸಭೆ ಇತ್ತೀಚೆಗೆ ಒಪ್ಪಿಗೆ ನೀಡಿದೆ?

ಅ) ಕಿತ್ತೂರುರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ

ಆ) ಅಕ್ಕಮಹಾದೇವಿ ವಿಶ್ವವಿದ್ಯಾಲಯ

ಇ) ಅಬ್ಬಕ್ಕದೇವಿ ವಿಶ್ವವಿದ್ಯಾಲಯ

ಈ) ಸರೋಜದೇವಿ ವಿಶ್ವವಿದ್ಯಾಲಯ

ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ವಿಶ್ವವಿದ್ಯಾಲಯ ಎಂದು ಮರು ನಾಮಕರಣ ಮಾಡಲು ಸಚಿವ ಸಂಪುಟ ಸಭೆ ಇತ್ತೀಚೆಗೆ ಒಪ್ಪಿಗೆ ನೀಡಿದೆ.

125. ರಾಜ್ಯದಲ್ಲಿ ಇತ್ತೀಚೆಗೆ ಸ್ಥಾಪಿಸಲಾದ "ಭೂಕಳಿಕೆ ನಿಷೇಧ ವಿಶೇಷ ನ್ಯಾಯಾಲದ" ಅಧ್ಯಕ್ಷರು ಯಾರು?

ಅ) ನ್ಯಾ. ಶಿವಣ್ಣ

ಆ) ನ್ಯಾ. ಎಚ್.ಎನ್.ನಾರಾಯಣ

ಇ) ನ್ಯಾ. ನಾಗಮೋಹನ್ ದಾಸ್

ಈ) ನ್ಯಾ. ಎಚ್.ಆರ್.ರೆಡ್ಡಿ

ನ್ಯಾ. ಎಚ್.ಎನ್.ನಾರಾಯಣ

ಅಕ್ರಮ ಭೂ ಒತ್ತುವರಿ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ನಡೆಸಿ, ಭೂಗಳ್ಳರಿಗೆ ಶಿಕ್ಷೆ ವಿಧಿಸಲು ಸ್ಥಾಪಿಸಲಾಗಿರುವ 'ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ' ದ ಅಧ್ಯಕ್ಷರಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾರಾಯಣ ಅವರನ್ನು ನೇಮಕಮಾಡಲಾಗಿದೆ. ಆರ್.ಎಚ್. ರೆಡ್ಡಿ ಹಾಗೂ ಬಿ. ಬಾಲಕೃಷ್ಣ ಸದಸ್ಯರಾಗಿದ್ದಾರೆ.

www.karunaduexams.com

126. ರಾಜ್ಯದಲ್ಲಿ ಶೇ.70 ಮತ್ತು ಅದಕ್ಕಿಂತ ಹೆಚ್ಚಿನ ಭೌಗೋಳಿಕ ಪ್ರದೇಶಗಳನ್ನು ಅರಣ್ಯಗಳು ಒಳಗೊಂಡಿರುವ ಜಿಲ್ಲೆಗಳು____?

ಅ) ಉತ್ತರ ಕನ್ನಡ ಮತ್ತು ಉಡುಪಿ

ಆ) ಉಡುಪಿ ಮತ್ತು ಕೊಡಗು

ಇ) ಉತ್ತರ ಕನ್ನಡ ಮತ್ತು ಕೊಡಗು

ಈ) ಕೊಡಗು ಮತ್ತು ದಕ್ಷಿಣ ಕನ್ನಡ

ಉತ್ತರ ಕನ್ನಡ ಮತ್ತು ಕೊಡಗು

ಉತ್ತರ ಕನ್ನಡ ಮತ್ತು ಕೊಡಗು ರಾಜ್ಯದಲ್ಲಿ ಶೇ.70 ಮತ್ತು ಅದಕ್ಕಿಂತ ಹೆಚ್ಚಿನ ಭೌಗೋಳಿಕ ಪ್ರದೇಶಗಳನ್ನು ಅರಣ್ಯಗಳು ಒಳಗೊಂಡಿರುವ ಜಿಲ್ಲೆಗಳಾಗಿವೆ. ಈ ಜಿಲ್ಲೆಗಳು ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯಪ್ರದೇಶವನ್ನು ಹೊಂದಿರುವ ಜಿಲ್ಲೆಗಳ ಪೈಕಿ ಕ್ರಮವಾಗಿ ಮೊದಲ ಎರಡು ಸ್ಥಾನದಲ್ಲಿವೆ.

127. ಬೂಸಾನ್ ಚಲನಚಿತ್ರೋತ್ಸವ (Bussan Film Festival)ಕ್ಕೆ ಆಯ್ಕೆಯಾದ ಕನ್ನಡ ಮೊಟ್ಟ ಮೊದಲ ಚಿತ್ರ ಯಾವುದು?

ಅ) ಲಾಸ್ಟ್ ಬಸ್

ಆ) ಹರಿಕಥಾ ಪ್ರಸಂಗ

ಇ) ಕೆಂಪಮ್ಮನ ಕೋರ್ಟ್ ಕೇಸ್

ಈ) ತಿಥಿ

ಹರಿಕಥಾ ಪ್ರಸಂಗ

ಅನನ್ಯ ಕಾಸರವಳ್ಳಿ ನಿರ್ದೇಶನದ ಮೊಟ್ಟಮೊದಲ ಚಿತ್ರ 'ಹರಿಕಥಾ ಪ್ರಸಂಗ', ಬೂಸಾನ್ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಈ ಚಿತ್ರೋತ್ಸವಕ್ಕೆ ಆಯ್ಕೆಯಾದ ಮೊಟ್ಟಮೊದಲ ಕನ್ನಡ ಚಿತ್ರ ಎಂಬ ಹಿರಿಮೆಗೆ ಈ ಚಿತ್ರ ಪಾತ್ರವಾಗಿದೆ. ಗಿರೀಶ್ ಕಾಸರವಳ್ಳಿ ಹಾಗೂ ಗೋಪಾಲಕೃಷ್ಣ ಪೈ ಚಿತ್ರಕಥೆ ನಿರ್ಮಿಸಿದ್ದು, ಗೋಪಾಲಕೃಷ್ಣ ಪೈ ಅವರ ಸಣ್ಣ ಕಥೆಯನ್ನಾಧರಿಸಿ ಈ ಚಿತ್ರ ನಿರ್ಮಾಣವಾಗಿದೆ. ಹರಿ ಎಂಬ ಯಕ್ಷಗಾನ ಕಲಾವಿದ, ಸ್ತ್ರೀಪಾತ್ರ ನಿರ್ವಹಿಸಿ, ಅತ್ಯಂತ ಜನಪ್ರಿಯತೆ ಗಳಿಸುವುದು ಇಲ್ಲಿನ ಕಥಾವಸ್ತು. ಆದರೆ ಕ್ರಮೇಣ, ವೇದಿಕೆಯಲ್ಲಿ ನಾನು ಸ್ತ್ರೀಪಾತ್ರ ನಿರ್ವಹಿಸಿ, ವೇದಿಕೆ ಹೊರಗೆ ಪುರುಷ ಪಾತ್ರ ನಿರ್ವಹಿಸುತ್ತಿದ್ದೇನೆಯೇ ಎಂಬ ಸಂದೇಹ ಅವರಲ್ಲಿ ಮೂಡುತ್ತದೆ. ಇದು ಅವರಲ್ಲಿ ಲಿಂಗಸಂಬಂಧಿ ಐಡೆಂಟಿಟಿ ಸಂದಿಗ್ಧತೆಗೆ ಕಾರಣವಾಗುತ್ತದೆ. ಇದು ಅವರ ಆತ್ಮಾವಲೋಕನ ಹಾಗೂ ವಿಶ್ವದ ಸಂಶೋಧನೆಗೆ ಕಾರಣವಾಗುತ್ತದೆ. ಬೂಸಾನ್ ಚಲನಚಿತ್ರೋತ್ಸವ ಕ್ಯಾನೆ ಆಫ್ ದಿ ಈಸ್ಟ್ ಎಂತಲೇ ಪ್ರಸಿದ್ಧಿ ಹೊಂದಿದೆ.

128. ಇತ್ತೀಚೆಗೆ ನಿಧನರಾದ ಡಾ. ಅಶೋಕ್ ಪೈ ರವರು ಪ್ರಸಿದ್ಧ____?

ಅ) ಮನೋವೈದ್ಯ

ಆ) ಕಲಾವಿದ

ಇ) ಸಾಹಿತಿ

ಈ) ಉದ್ಯಮಿ

ಮನೋವೈದ್ಯ

ಖ್ಯಾತ ಮನೋವೈದ್ಯ ಡಾ.ಅಶೋಕ್ ಪೈ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪೈ ಅವರು ಶಿವಮೊಗ್ಗದಲ್ಲಿ ಮಾನಸ ನರ್ಸಿಂಗ್ ಹೋಮ್ ಆಸ್ಪತ್ರೆ ನಡೆಸುತ್ತಿದ್ದರು. ವೈದ್ಯರಲ್ಲದೇ ಸಿನಿಮಾ ನಿರ್ಮಾಪಕರಾಗಿದ್ದ ಅವರು ಕಾಡಿನ ಬೆಂಕಿ, ಉಷಾಕಿರಣ, ಆಘಾತ ಮೊದಲಾದ ಸಿನಿಮಾಗಳನ್ನು ನಿರ್ಮಿಸಿದ್ದರು. ಈ ಎಲ್ಲಾ ಸಿನಿಮಾಗಳು ಪ್ರಶಸ್ತಿಯನ್ನು ಪಡೆದುಕೊಂಡಿವೆ. ಪೈ ಅವರು ಕರ್ನಾಟಕ ಮಾನಸಿಕ ಆರೋಗ್ಯ ಕಾರ್ಯಪಡೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಪುಸ್ತಕಗಳನ್ನು ಬರೆದಿದ್ದ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಗೌರವ ಸಂದಿದೆ.

129. ಅಕ್ಟೋಬರ್ 2, 2016 ರಂದು ಈ ಕೆಳಗಿನ ಯಾವ ಜಿಲ್ಲೆಗಳನ್ನು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಗಳೆಂದು ಘೋಷಿಸಲಾಗಿದೆ?

I) ಬೆಂಗಳೂರು

II) ಬೆಂಗಳೂರು ಗ್ರಾಮಾಂತರ

III) ಕೊಡಗು

IV) ದಕ್ಷಿಣ ಕನ್ನಡ

ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಉತ್ತರಿಸಿ:

ಅ) I, II & III

ಆ) I, III & IV

ಇ) I, II & IV

ಈ) I, II, III & IV

I, II, III & IV

ರಾಜ್ಯದ ಐದು ಜಿಲ್ಲೆಗಳು, 20 ತಾಲ್ಲೂಕ ಪಂಚಾಯತಿಗಳು ಮತ್ತು 1000 ಸಾವಿರ ಗ್ರಾಮ ಪಂಚಾಯತಿಗಳನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದೆ. ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಂತರ, ಕೊಡಗು, ಉಡುಪಿ ಮತ್ತು ದಕ್ಷಿಣ ಕನ್ನಡ ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಿಸಲಾದ ಜಿಲ್ಲೆಗಳಾಗಿವೆ.

130. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ನೀಡುವ ವಯೋಶ್ರೇಷ್ಠ ಪ್ರಶಸ್ತಿ ಪಡೆದ ಕರ್ನಾಟಕದ ಶತಾಯುಷಿ ಯಾರು?

ಅ) ಡಾ. ಹೊ.ಶ್ರೀನಿವಾಸಯ್ಯ

ಆ) ಎಚ್ ಎಂ ರೇಣುಕ ಮಾತೆ

ಇ) ಕೆ. ನಂಜುಂಡಯ್ಯ

ಈ) ಕೃಷ್ಣ ಮಾಥುರ್

ಡಾ. ಹೊ.ಶ್ರೀನಿವಾಸಯ್ಯ

ಶತಾಯುಷಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ ರವರಿಗೆ ವಯೋಶ್ರೇಷ್ಠ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ನೀಡುವ ಪ್ರಶಸ್ತಿಯನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ನವದೆಹಲಿಯಲ್ಲಿ ಪ್ರದಾನ ಮಾಡಿದರು.

131. ಇವರಲ್ಲಿ ಯಾರು ಕರ್ನಾಟಕ ರಾಜ್ಯದ ಅಡ್ವೊಕೇಟ್ ಜನರಲ್ ಕಚೇರಿಗೆ ಸಂಬಂಧಿಸಿಲ್ಲ?

ಅ) ಮಧುಸೂಧನ್ ಆರ್ ನಾಯಕ್

ಆ) ಎ ಜಿ ಶಿವಣ್ಣ

ಇ) ಎ ಎಸ್ ಪೊನ್ನಣ್ಣ

ಈ) ಆತ್ಮಾರಾವ್ ನಾಡಕರ್ಣಿ

ಆತ್ಮಾರಾವ್ ನಾಡಕರ್ಣಿ

ಮಧುಸೂಧನ್ ಆರ್ ನಾಯಕ್ ರವರು ರಾಜ್ಯದ ಈಗಿನ ಅಡ್ವೊಕೇಟ್ ಜನರಲ್. ಎ ಜಿ ಶಿವಣ್ಣ ಮತ್ತು ಎ ಎಸ್ ಪೊನ್ನಣ್ಣ ಅವರು ರಾಜ್ಯದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿದ್ದಾರೆ. ಆತ್ಮಾರಾವ್ ನಾಡಕರ್ಣಿ ಗೋವಾ ರಾಜ್ಯದ ಅಡ್ವೊಕೇಟ್ ಜನರಲ್.

132. ಪ್ರಸ್ತುಕ ಸಾಲಿನ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಈ ಕೆಳಗಿನ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಪಂಡಿತ್ ವೆಂಕಟೇಶ್ ಕುಮಾರ್

ಆ) ಪಂಡಿತ್ ಸೋಮನಾಥ ಮರಡೂರ

ಇ) ಪಂಡಿತ್ ಚಂದ್ರಶೇಖರ್ ಗುರೂಜಿ

ಈ) ಪಂಡಿತ್ ನಾರಯಣ್ ಸೊಮಾಜಿ

ಪಂಡಿತ್ ಸೋಮನಾಥ ಮರಡೂರ

ಧಾರಾವಾಡದ ಪಂಡಿತ್ ಸೋಮನಾಥ್ ಮರಡೂರ ಅವರನ್ನು ಪ್ರಸ್ತುಕ ಸಾಲಿನ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ಮೈಸೂರು ದಸರಾ ಸಂದರ್ಭದಲ್ಲಿ ನೀಡಲಾಗುವುದೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ತಿಳಿಸಿದ್ದಾರೆ. ಪಂಡಿತ್ ವೆಂಕಟೇಶ ಕುಮಾರ್ ನೇತೃತ್ವದ ಸಮಿತಿಯು ಪಂಡಿತ್ ಮರಡೂರ ಅವರ ಹೆಸರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡಿತ್ತು. ಪ್ರಶಸ್ತಿಯು ರೂ 3 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

133. ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿ _____?

ಅ) ಉಪೇಂದ್ರ ತ್ರಿಪಾಠಿ

ಆ) ಸುಭಾಷ್ ಚಂದ್ರ ಕುಂಟಿಯಾ

ಇ) ಕೆ ಎಸ್ ರತ್ನಪ್ರಭ

ಈ) ವಿಜಯ ಭಾಸ್ಕರ್

ಸುಭಾಷ್ ಚಂದ್ರ ಕುಂಟಿಯಾ

ಹಿರಿಯ ಐಎಎಸ್ ಅಧಿಕಾರಿ ಸುಭಾಷ್ ಚಂದ್ರ ಕುಂಟಿಯಾ ಅವರು ರಾಜ್ಯದ ನೂತನ ಮುಖ್ಯಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಕುಂಟಿಯಾ ಅವರು ನವೆಂಬರ್ 2017ರಲ್ಲಿ ನಿವೃತ್ತಿಯಾಗಲಿದ್ದು, ಒಟ್ಟು 13 ತಿಂಗಳ ಅವಧಿಗೆ ರಾಜ್ಯದ ಮುಖ್ಯಕಾರ್ಯದರ್ಶಿ ಆಗಿ ಕಾರ್ಯನಿರ್ವಹಿಸಲಿದ್ದಾರೆ. ಹಾಲಿ ಮುಖ್ಯಕಾರ್ಯದರ್ಶಿ ಅರವಿಂದ್ ಜಾಧವ್ ಅವರು ಸೆಪ್ಟೆಂಬರ್ 30ರಂದು ನಿವೃತ್ತಿ ಹೊಂದಲಿದ್ದಾರೆ.

134. ಕರ್ನಾಟಕದಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವೇತನವನ್ನು ಪರಿಷ್ಕರಿಸಲು ರಚಿಸಿದ್ದ ಸಮಿತಿಯ ಅಧ್ಯಕ್ಷರು ಯಾರು?

ಅ) ಕಮಲ್ ಪಂಥ್

ಆ) ರಾಘವೇಂದ್ರ ಔರಾದಕರ

ಇ) ಶಂಕರ್ ಬಿದರಿ

ಈ) ಕೆಂಪಯ್ಯ

ರಾಘವೇಂದ್ರ ಔರಾದಕರ

ರಾಜ್ಯದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವೇತನವನ್ನು ಪರಿಷ್ಕರಿಸಲು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ರಾಘವೇಂದ್ರ ಔರಾದಕರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿಲಾಗಿತ್ತು. ಸಮಿತಿಯು ರಾಜ್ಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವೇತನವನ್ನು ಶೇ 30 ರಿಂದ 35ರಷ್ಟು ಹೆಚ್ಚಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಮಿತಿಯ ಶಿಫಾರಸು ಆಧರಿಸಿ ವೇತನ ಪರಿಷ್ಕರಿಸಿದರೆ ಅಧಿಕಾರಿ ಮತ್ತು ಸಿಬ್ಬಂದಿಗೆ ರೂ 6,500 ರಿಂದ ರೂ 8,500 ರವರೆಗೆ ಹೆಚ್ಚಳವಾಗಲಿದೆ.

135. ಇತ್ತೀಚೆಗೆ ನಿಧನರಾದ ಡಾ.ವಾಮನದತ್ತಾತ್ರೇಯ ಬೇಂದ್ರೆ ರವರ ಮೊದಲ ಕವನ ಸಂಕಲನ ಯಾವುದು?

ಅ) ಅನಂತಧಾರೆ

ಆ) ಸ್ಪಂದನ

ಇ) ತೊದಲು

ಈ) ಮುಗಿಲ ಮಲ್ಲಿಗೆ

ತೊದಲು

www.karunaduexams.com

ವರಕವಿ ದ. ರಾ. ಬೇಂದ್ರೆ ಅವರ ಪುತ್ರ ಡಾ. ವಾಮನದತ್ತಾತ್ರೇಯ ಬೇಂದ್ರೆ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು. ವಾಮನದತ್ತಾತ್ರೇಯ ಬೇಂದ್ರೆ ಅವರು ಅತ್ಯುತ್ತಮ ಪ್ರಾಧ್ಯಾಪಕರೂ ಮತ್ತು ಸಾಹಿತಿಗಳಾಗಿದ್ದರು. ತೊದಲು" ಇದು ಇವರ ಮೊದಲ ಕವನ ಸಂಕಲನ, ನಂತರ ಅನಂತಧಾರೆ, ಸ್ಪಂದನ ಮೊದಲಾದವುಗಳನ್ನು ರಚಿಸಿದರು.

136. ಈ ಕೆಳಗಿನ ಯಾರನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ಮಹಾತ್ಮಾಗಾಂಧಿ ಸೇವಾ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ?

ಅ) ಚನ್ನಮ್ಮ ಹಳ್ಳಿಕೇರಿ

ಆ) ಸಾಲುಮರದ ತಿಮ್ಮಕ್ಕ

ಇ) ಶನಿ ಮಹದೇವಪ್ಪ

ಈ) ದೇವನೂರ ಮಹಾದೇವಾ

ಚನ್ನಮ್ಮ ಹಳ್ಳಿಕೇರಿ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ಮಹಾತ್ಮಾಗಾಂಧಿ ಸೇವಾ ಪ್ರಶಸ್ತಿಗೆ ಚನ್ನಮ್ಮ ಹಳ್ಳಿಕೇರಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿ  5 ಲಕ್ಷ ಮೊತ್ತವನ್ನು ಒಳಗೊಂಡಿದೆ. ಅ. 2 ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹಾವೇರಿ ಜಿಲ್ಲೆ ಹೊಸರಿತ್ತಿಯಲ್ಲಿ 1931ರಲ್ಲಿ ಜನಿಸಿದ ಚನ್ನಮ್ಮ ಅವರು, ಮಹಾತ್ಮಗಾಂಧಿಯವರ ಆದರ್ಶವನ್ನು ಅನುಸರಿಸುತ್ತಾ ಬಂದಿದ್ದಾರೆ. ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿದ್ದ ಹೊಸರಿತ್ತಿಯಲ್ಲಿ ತಮ್ಮ ತಾತ ಗುದ್ಲಪ್ಪ ಹಳ್ಳಿಕೇರಿ ಸ್ಥಾಪಿಸಿದ್ದ ಗಾಂಧಿ ಆಶ್ರಮದೊಂದಿಗೆ ಒಡನಾಟ ಇಟ್ಟುಕೊಂಡು ಬೆಳೆದವರು.

137. 2016ನೇ ಸಾಲಿನ ಪ್ರತಿಷ್ಠಿತ ಕುವೆಂಪು ರಾಷ್ಟ್ರೀಯ ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ದೇವನೂರು ಮಹಾದೇವ

ಆ) ಚಂದ್ರಶೇಖರ ಕಂಬಾರ

ಇ) ಜಿ ಎಸ್ ಶಿವರುದ್ರಪ್ಪ

ಈ) ಎಸ್ ಎಲ್ ಭೈರಪ್ಪ

ದೇವನೂರು ಮಹಾದೇವ

ಹಿರಿಯ ಸಾಹಿತಿ ದೇವನೂರು ಮಹಾದೇವ ಅವರನ್ನು 2016ನೇ ಸಾಲಿನ ಪ್ರತಿಷ್ಠಿತ ಕುವೆಂಪು ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕುವೆಂಪು ಪ್ರತಿಷ್ಠಾನ ನೀಡುವ ಈ ಪ್ರಶಸ್ತಿಯನ್ನು ಕನ್ನಡನಾಡಿನ ಖ್ಯಾತ ಕವಿ ಕುವೆಂಪು ಅವರ

ಜನ್ಮದಿನವಾದ ಅಂಗವಾಗಿ ಡಿ.1ರಂದು ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೋ.ಹಂಪ ನಾಗರಾಜಯ್ಯ ತಿಳಿಸಿದ್ದಾರೆ.

138. ಈ ಕೆಳಗಿನ ಯಾವ ಸಮಿತಿ ರಾಜ್ಯದಲ್ಲಿ ಅಡಿಕೆ ಬೆಳೆಗೆ ಪ್ರತ್ಯೇಕ ಮಂಡಳಿ ರಚಿಸುವಂತೆ ರಾಜ್ಯ ಸರ್ಕಾರಕ್ಕೆ ಇತ್ತೀಚೆಗೆ ಶಿಫಾರಸ್ಸು ಮಾಡಿದೆ?

ಅ) ಡಾ. ಡಿ.ಎಲ್.ಮಹೇಶ್ವರ್ ಸಮಿತಿ

ಆ) ಡಾ. ನಾರಾಯಣಸ್ವಾಮಿ ಸಮಿತಿ

ಇ) ಡಾ. ಮಹಂತೇಶ್ ಪಾಟೀಲ್ ಸಮಿತಿ

ಈ) ಡಾ. ಚಂದ್ರಪ್ಪ ಸಮಿತಿ

ಡಾ. ಡಿ.ಎಲ್.ಮಹೇಶ್ವರ್ ಸಮಿತಿ

ರಾಜ್ಯದ ಪ್ರಮುಖ ಬೆಳೆಯಾದ ಅಡಕೆ ಬೆಳೆಗೆ ಪ್ರತ್ಯೇಕ ಮಂಡಳಿ ರಚಿಸುವಂತೆ ರಾಜ್ಯ ಸರ್ಕಾರಕ್ಕೆ ಡಾ. ಡಿ.ಎಲ್.ಮಹೇಶ್ವರ್ ಸಮಿತಿ ಶಿಫಾರಸ್ಸು ಮಾಡಿದೆ. ರಾಜ್ಯದಲ್ಲಿ ಅಡಿಕೆ ಮತ್ತು ಈರುಳ್ಳಿ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಬಾಗಲಕೋಟೆಯಲ್ಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ| ಡಿ.ಎಲ್.ಮಹೇಶ್ವರ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದ್ಯ ಈ ತಜ್ಞರ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಶಿಫಾರಸು ಮಾಡಿದ್ದು ಅಡಿಕೆ ಬೆಳೆಗೆ ಪ್ರತ್ಯೇಕ ಮಂಡಳಿ ರಚಿಸುವಂತೆ ಸಲಹೆ ನೀಡಿದೆ.

139. ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಟೂರ್ನಿಯ ಐದನೇ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದ ತಂಡ ಯಾವುದು?

ಅ) ಹುಬ್ಬಳ್ಳಿ ಟೈಗರ್ಸ್

ಆ) ನಮ್ಮ ಶಿವಮೊಗ್ಗ

ಇ) ಮೈಸೂರು ವಾರಿಯರ್ಸ್

ಈ) ರಾಕ್ ಸ್ಟಾರ್ಸ್

ಹುಬ್ಬಳ್ಳಿ ಟೈಗರ್ಸ್

ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಟೂರ್ನಿಯ ಐದನೇ ಆವೃತ್ತಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡ ಬಳ್ಳಾರಿ ಟಸ್ಕರ್ಸ್ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಹುಬ್ಬಳ್ಳಿ ಟೈಗರ್ಸ್ ಗೆ ಇದು ಚೊಚ್ಚಲ ಪ್ರಶಸ್ತಿಯಾಗಿದೆ.

140. ಆತ್ಮಹತ್ಯೆ ಒಳಗಾದ ರೈತರ ಅವಲಂಬಿತ ಕುಟುಂಬ ಸದಸ್ಯರುಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸುವ ಸಲುವಾಗಿ ರಾಜ್ಯ ಸರ್ಕಾರ ಪ್ರಾರಂಭಿಸಿರುವ ಯೋಜನೆ ಯಾವುದು?

ಅ) ಇಂದಿರಾ ಸುರಕ್ಷಾ ಯೋಜನೆ

ಆ) ಮುಖ್ಯಮಂತ್ರಿ ಸಾಂತ್ವನ-ಹರೀಶ್ ಯೋಜನೆ

www.karunaduexams.com

ಇ) ಜ್ಯೋತಿ ಸಂಜೀವಿನಿ ಯೋಜನೆ

ಈ) ರಾಜೀವ್ ಆರೋಗ್ಯ ಭಾಗ್ಯ

ಇಂದಿರಾ ಸುರಕ್ಷಾ ಯೋಜನೆ

ರಾಜ್ಯ ಸರ್ಕಾರವು ಆತ್ಮಹತ್ಯೆಗೆ ಒಳಗಾದ ರೈತರ ಅವಲಂಬಿತ ಕುಟುಂಬ ಸದಸ್ಯರುಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸುವ ಮಹತ್ವದ ಉದ್ದೇಶದೊಂದಿಗೆ ಇಂದಿರಾ ಸುರಕ್ಷಾ ಯೋಜನೆಯನ್ನು ಪ್ರಾರಂಭಿಸಿದೆ.

141. ಹೈದ್ರಾಬಾದ್-ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಪ್ರಮಾಣ ಹೆಚ್ಚಿಸುವ ಸಲುವಾಗಿ ರಾಜ್ಯ ಸರ್ಕಾರ ನೇಮಿಸಿರುವ ಸಮಿತಿಯ ಅಧ್ಯಕ್ಷರು ಯಾರು?

ಅ) ಪ್ರೊ. ಎಂ.ಎಸ್. ಸುಭಾಷ್

ಆ) ಪ್ರೊ. ನಂಜುಂಡೇಗೌಡ

ಇ) ಡಾ. ಚಂದ್ರಕಾಂತ್ ಬೆಲ್ಲದ

ಈ) ಪ್ರೊ. ಉದಯಕುಮಾರ್ ಉಪ್ಪರಗಿ

ಪ್ರೊ. ಎಂ.ಎಸ್. ಸುಭಾಷ್

ಹೈದ್ರಾಬಾದ್ ಕರ್ನಾಟಕದ 6 ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪ್ರಮಾಣ ಹೆಚ್ಚಿಸಲು ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಎಸ್. ಸುಭಾಷ್ ಅವರ ನೇತೃತ್ವದಲ್ಲಿ ಕುಲಪತಿಗಳ ಸಮಿತಿ ರಚಿಸಲಾಗಿದೆ. ಪಿಯು ನಂತರ ಪದವಿ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳ ಪ್ರಮಾಣ ದೇಶದಲ್ಲಿ ಶೇ 19ರಷ್ಟು ಇದ್ದರೆ, ರಾಜ್ಯದಲ್ಲಿ ಶೇ 26 ಇದೆ. ಆದರೆ, ಹೈದರಾಬಾದ್-ಕರ್ನಾಟಕದಲ್ಲಿ ರಾಷ್ಟ್ರದ ಸರಾಸರಿಗಿಂತಲೂ ಕಡಿಮೆ ಇದೆ. ಅಂದರೆ, ಕಲಬುರ್ಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವವರ ಪ್ರಮಾಣ ಒಟ್ಟಾರೆ ಶೇ 10ರಷ್ಟು ಮಾತ್ರ ಇದೆ. ಈ ಪ್ರಮಾಣ ಹೆಚ್ಚಿಸಲು ಇಲ್ಲಿನ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ, ಉಪನ್ಯಾಸಕರಿಗೆ ತರಬೇತಿ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಒದಗಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಸಮಿತಿ ಶಿಫಾರಸು ಮಾಡಲಿದೆ.

142. ಸೌರಶಕ್ತಿ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ರಾಜ್ಯದ ಪ್ರಥಮ ತಾಲೂಕು ಪಂಚಾಯತ್ ಯಾವುದು?

ಅ) ಕೊಪ್ಪಳ ತಾಲೂಕ್ ಪಂಚಾಯತ್

ಆ) ಗದಗ ತಾಲೂಕ್ ಪಂಚಾಯತ್

ಇ) ಚಿಕ್ಕಬಳ್ಳಾಪುರ ತಾಲೂಕ್ ಪಂಚಾಯತ್

ಈ) ಹಾವೇರಿ ತಾಲೂಕ್ ಪಂಚಾಯತ್

ಗದಗ ತಾಲೂಕ್ ಪಂಚಾಯತ್

ಗದಗ ತಾಲೂಕು ಪಂಚಾಯತ್ ಕಚೇರಿ ಸೋಲಾರ್ ಘಟಕ ಅಳವಡಿಸಿಕೊಳ್ಳುವ ಮೂಲಕ ವಿದ್ಯುತ್ ಉತ್ಪಾದನೆ ಮತ್ತು ಬಳಕೆಯಲ್ಲಿ ಸ್ವಾವಲಂಬನೆ ಕಂಡುಕೊಂಡಿದೆ. ಅಲ್ಲದೆ, ಸೌರಶಕ್ತಿ ಹೊಂದಿರುವ ರಾಜ್ಯದ ಪ್ರಥಮ ತಾಲೂಕು

www.karunaduexams.com

ಪಂಚಾಯತ್ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. 6 ಹವಾನಿಯಂತ್ರಿತ ಕೊಠಡಿಗಳು ಸೇರಿದಂತೆ ಇಡೀ ಕಚೇರಿ ಸೌರವಿದ್ಯುತ್ನಿಂದಲೇ ಕಾರ್ಯ ನಿರ್ವಹಿಸುತ್ತಿದೆ. 2016ರ ಜೂನ್ ತಿಂಗಳಲ್ಲೇ ಸೌರ ಘಟಕ ಕಾಮಗಾರಿ ಪೂರ್ಣಗೊಂಡಿದ್ದು, ಸಿಬ್ಬಂದಿಗೆ ತರಬೇತಿ, ಪರೀಕ್ಷಾರ್ಥ ಪ್ರಕ್ರಿಯೆಗಳು ಮುಗಿದಿದೆ. ಆಗಸ್ಟ್ನಿಂದ ಸಂಪೂರ್ಣ ಸೌರ ವಿದ್ಯುತ್ ಬಳಸಲಾಗುತ್ತಿದೆ.

143. ಈ ಕೆಳಗಿನ ಜಿಲ್ಲೆಗಳಲ್ಲಿ ಕ್ರೋಮಿಯಂ ಅದಿರು ದೊರೆಯುವ ಜಿಲ್ಲೆಗಳು ಯಾವುವು?

I) ಮೈಸೂರು

II) ಹಾಸನ

III) ಚಿತ್ರದುರ್ಗ

IV) ದಾವಣಗೆರೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & III

ಆ) I & II

ಇ) III & IV

ಈ) I, II, III & IV

I & II

144. ಇತ್ತೀಚೆಗೆ ನಿಧನರಾದ “ಆರ್ಯ ಆಚಾರ್ಯ” ರವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸಾಹಿತ್ಯ

ಆ) ಚಿತ್ರಕಲೆ

ಇ) ಸಂಗೀತ

ಈ) ರಾಜಕೀಯ

ಸಾಹಿತ್ಯ

ಸಾಹಿತಿ, ರಂಗಕರ್ಮಿ, ಕಲಾವಿದ ಹಾಗೂ ಚಿತ್ರ ನಿರ್ದೇಶಕ ಆರ್ಯ ಆಚಾರ್ಯ ನಿಧನರಾದರು. ಕಳೆದ 43 ವರ್ಷಗಳಿಂದ ಧಾರವಾಡದಲ್ಲಿ ನೆಲೆಸಿದ್ದ ಅವರು, ಕರ್ನಾಟಕ ವಿವಿ ಯಿಂದ ಎಂ.ಎ. ಪದವಿ ಪಡೆದಿದ್ದರು. ಶಿರೂರ ಮಠದ ಪೀಠಾಧಿಪತಿಯಾಗಿದ್ದ ಅವರು, 1973ರಲ್ಲಿ ಪೀಠ ತ್ಯಾಗ ಮಾಡಿ, ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಮುಖ್ಯಸ್ಥ ನಂದನ್ ನಿಲೇಕಣಿ ಅವರ ಅಕ್ಕ ವಿದ್ಯಾ ಅವರನ್ನು ಮದುವೆಯಾಗಿದ್ದರು. ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ, ಜಿ.ಎಸ್.ಶೆಣೈ ಸ್ಮಾರಕ ಪ್ರಶಸ್ತಿ, ಕುವೆಂಪು ಭಾಷಾ ಭಾರತಿ ಅಕಾಡೆಮಿ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

www.karunaduexams.com

145. ರಾಜ್ಯದಲ್ಲಿ ರೈಲು ಸಾಂದ್ರತೆಯು 1000 ಕಿ.ಮೀ ಗೆ ____ ಕಿ.ಮೀ ಇದೆ?

ಅ) 20.20 ಕಿ.ಮೀ

ಆ) 16.20 ಕಿ.ಮೀ

ಇ) 19.34 ಕಿ.ಮೀ

ಈ) 21.22 ಕಿ.ಮೀ

16.20 ಕಿ.ಮೀ

146. ದುಬೈನಲ್ಲಿ ನಡೆದ "ದ್ವಿತೀಯ ಮಧ್ಯಪ್ರಾಚ್ಯ ಕನ್ನಡ ಸಮ್ಮೇಳನ"ದ ಅಧ್ಯಕ್ಷತೆಯನ್ನು ವಹಿಸಿದ್ದವರು _____?

ಅ) ಡಾ.ಗೊ.ರು. ಚೆನ್ನಬಸಪ್ಪ

ಆ) ಚನ್ನವೀರ ಕಣವಿ

ಇ) ಚಂದ್ರಶೇಖರ ಕಂಬಾರ

ಈ) ಎಸ್ ಎಲ್ ಭೈರಪ್ಪ

ಡಾ.ಗೊ.ರು. ಚೆನ್ನಬಸಪ್ಪ

ಡಾ.ಗೊ.ರು.ಚೆನ್ನಬಸಪ್ಪ ರವರು "ದ್ವಿತೀಯ ಮಧ್ಯಪ್ರಾಚ್ಯ ಕನ್ನಡ ಸಮ್ಮೇಳನ"ದ ಅಧ್ಯಕ್ಷತೆಯನ್ನ ವಹಿಸಿದ್ದರು.

147. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಹೆಸರಿನಲ್ಲಿ ಸ್ಥಾಪಿಸಲಾಗಿರುವ "ವಿಶಿಷ್ಟ ಪ್ರಾಧ್ಯಪಕ ಪೀಠ"ದ ಪ್ರಥಮ ಮುಖ್ಯಸ್ಥರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಡಾ. ಚಂದ್ರಶೇಖರ ಪಾಟೀಲ

ಆ) ಪ್ರೋ. ವಸಂತ್ ಹೊನ್ನಾವರ

ಇ) ಕ್ರಿಸ್ ಗೋಪಾಲಕೃಷ್ಣನ್

ಈ) ಪ್ರೋ ಅನುರಾಗ್ ಕುಮಾರ್

ಪ್ರೋ. ವಸಂತ್ ಹೊನ್ನಾವರ

ಪೆನ್ಸಿಲ್ವೇನಿಯಾ ಮುಖ್ಯಸ್ಥರಾದ ಪ್ರೋ. ವಸಂತ್ ಹೊನ್ನಾವರ ಅವರನ್ನು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಹೆಸರಿನಲ್ಲಿ ಸ್ಥಾಪಿಸಲಾಗಿರುವ "ವಿಶಿಷ್ಟ ಪ್ರಾಧ್ಯಪಕ ಪೀಠ"ದ ಪ್ರಥಮ ಮುಖ್ಯಸ್ಥರಾಗಿ ನೇಮಕಮಾಡಲಾಗಿದೆ. ವಸಂತ್ ಅವರು ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಪ್ರಯೋಗಾಲಯದ ನಿರ್ದೇಶಕರಾಗಿದ್ದಾರೆ. ಬಯೋ ಇನ್‌ಫರ್ಮೆಟಿಕ್ಸ್, ಜಿನೋಮಿಕ್ಸ್ ಮತ್ತು ನರವಿಜ್ಞಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ.

www.karunaduexams.com

148. ರಾಷ್ಟ್ರೀಯ ಯಕ್ಷಗಾನ ತರಭೇತಿ ಕೇಂದ್ರ ಯಾವ ಜಿಲ್ಲೆಯಲಿದೆ?

ಅ) ದಕ್ಷಿಣ ಕನ್ನಡ

ಆ) ಉಡುಪಿ

ಇ) ಉತ್ತರ ಕನ್ನಡ

ಈ) ಶಿವಮೊಗ್ಗ

ಉಡುಪಿ

ರಾಷ್ಟ್ರೀಯ ಯಕ್ಷಗಾನ ತರಭೇತಿ ಕೇಂದ್ರ ಮಣಿಪಾಲ, ಉಡುಪಿಯಲ್ಲಿದೆ. ಭಾರತ ಸರ್ಕಾರದ ಸಂಸ್ಕೃತ ಇಲಾಖೆಯ ಗುರು ಕಾರ್ಯಕ್ರಮದಡಿ ಈ ತರಭೇತಿ ಕೇಂದ್ರವನ್ನು 1971 ರಲ್ಲಿ ಸ್ಥಾಪಿಸಲಾಯಿತು. ಡಾ.ಕೆ ಶಿವರಾಮ ಕಾರಂತ ಮತ್ತು ಪ್ರೋ. ಕೆ. ಎಸ್. ಹರಿದಾಸ್ ಭಟ್ ಅವರ ಶ್ರಮದ ಫಲವಾಗಿ ಈ ಕೇಂದ್ರ ಸ್ಥಾಪನೆಗೊಂಡಿತು. ಪ್ರಸ್ತುತ ಪ್ರೋ ಹೆಚ್ ಕೃಷ್ಣ ಭಟ್ ಈ ತರಭೇತಿ ಕೇಂದ್ರದ ನಿರ್ದೇಶಕರಾಗಿದ್ದಾರೆ.

149. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಷ್ಣು ಸೇನಾ ಸಮಿತಿಯ ಸಹಯೋಗದಲ್ಲಿ ಪ್ರತಿ ವರ್ಷ ನೀಡುವ ಡಾ. ವಿಷ್ಣುವರ್ಧನ್ ಪ್ರಶಸ್ತಿಯನ್ನು ಪ್ರಸ್ತುಕ ಸಾಲಿನಲ್ಲಿ ಯಾರಿಗೆ ನೀಡಲಾಗಿದೆ?

ಅ) ಸರೋಜಿನಿ ದೇವಿ

ಆ) ಲೀಲಾವತಿ

ಇ) ಸುಮಲತಾ

ಈ) ದೊರೈ ಭಗವಾನ್

ಲೀಲಾವತಿ

ಕನ್ನಡದ ಹಿರಿಯ ನಟಿ ಲೀಲಾವತಿ ಅವರಿಗೆ ಡಾ.ವಿಷ್ಣುವರ್ಧನ್ ಅವರ ಪ್ರಶಸ್ತಿ ನೀಡಲಾಗುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಷ್ಣು ಸೇನಾ ಸಮಿತಿಯ ಸಹಯೋಗದಲ್ಲಿ ಪ್ರತಿ ವರ್ಷ ನೀಡುವ ಅಭಿನವ ಬಾರ್ಗವ ಡಾ. ವಿಷ್ಣುವರ್ಧನ್ ಪ್ರಶಸ್ತಿಯನ್ನ ಈ ಬಾರಿ ಲೀಲಾವತಿ ಅವರಿಗೆ ನೀಡಲು ನಿರ್ಧರಿಸಿದೆ. ನಿನ್ನೆ (ಅಕ್ಟೋಬರ್.13) ನಡೆದ ಕನ್ನಡ ಸಾಹಿತ್ಯ ಪರಿಷತ್ತು ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಣಯವನ್ನ ಕೈಗೊಳ್ಳಲಾಗಿದೆ. ಕಳೆದ ಮೂರು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ ಡಾ. ವಿಷ್ಣುವರ್ಧನ್ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನ ನೀಡುತ್ತಿದ್ದು, ಮೊದಲ ವರ್ಷ ಎಸ್.ಪಿ ಬಾಲಸುಬ್ರಮಣ್ಯಂರವರಿಗೆ ಹಾಗೂ ಎರಡನೇ ವರ್ಷ ರೆಬಲ್ ಸ್ಟಾರ್ ಡಾ.ಅಂಬರೀಶ್ ರವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈಗ ಮೂರನೆ ವರ್ಷದ ಪ್ರಶಸ್ತಿಗೆ ಲೀಲಾವತಿಯವರನ್ನ ಆಯ್ಕೆ ಮಾಡಲಾಗಿದೆ.

150. ಶ್ರೀರಂಗಪಟ್ಟಣದ ಚಂದನವನ ಆಶ್ರಮ ನೀಡುವ “ಕಾವೇರಿ” ಪ್ರಶಸ್ತಿಯನ್ನು ಪಡೆದುಕೊಂಡವರು ____?

ಅ) ಹಂಸಲೇಖ



www.karunaduexams.com

ಆ) ಕಿರಣ್ ಕುಮಾರ್

ಇ) ಅಂಬರೀಷ್

ಈ) ಹೆಚ್ ಡಿ ಕುಮಾರಸ್ವಾಮಿ

ಕಿರಣ್ ಕುಮಾರ್

ಖ್ಯಾತ ವಿಜ್ಞಾನಿ ಹಾಗೂ ಇಸ್ರೋ ಅಧ್ಯಕ್ಷ ಕಿರಣ್ ಕುಮಾರ್ ಅವರಿಗೆ ರಾಷ್ಟ್ರಮಟ್ಟದ ಕಾವೇರಿ ಪ್ರಶಸ್ತಿ ಲಭಿಸಿದೆ. ಇಲ್ಲಿಯ ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದಲ್ಲಿ ನವರಾತ್ರಿಯ ಅಂಗವಾಗಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿವ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಚಿತ್ರ ಸಾಹಿತಿ, ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ಕಲಾಯೋಗಿ ಪ್ರಶಸ್ತಿ ನೀಡಲಾಗಿದೆ.

151. 2016-17ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಈ ಕೆಳಗಿನ ಯಾರಿಗೆ ನೀಡಲಾಗಿದೆ?

ಅ) ಸಿ. ವೀರಣ್ಣ

ಆ) ಕೆ. ಎಚ್. ಮುನಿಯಪ್ಪ

ಇ) ವಿ ಮುನಿಯಪ್ಪ

ಈ) ಸೋಮಣ್ಣ

ಸಿ. ವೀರಣ್ಣ

2016-17ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಮಾಜಿ ಉಪ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವ ಸಿ. ವೀರಣ್ಣ ಅವರು ಆಯ್ಕೆಯಾಗಿದ್ದಾರೆ. ಪರಿಶಿಷ್ಟ ಪಂಗಡಗಳ ಜನರ ಏಳ್ಗೆಗಾಗಿ ಗಣನೀಯ ಸೇವೆ ಸಲ್ಲಿಸಿರುವ ಕಾರಣ ಈ ಪ್ರಶಸ್ತಿಗೆ 2016-17ನೇ ಸಾಲಿಗೆ ಸಿ. ವೀರಣ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ₹ 5 ಲಕ್ಷ ನಗದು ಒಳಗೊಂಡಿದೆ. 2016-17ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಅರ್ಹ ವ್ಯಕ್ತಿಗಳ ಆಯ್ಕೆ ಸಂಬಂಧ ಕಲಬುರ್ಗಿಯ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ನಿರಂಜನ್ ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು.

152. ಈ ಕೆಳಗಿನ ಯಾರಿಗೆ 2015ನೇ ಸಾಲಿನ ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗಾಗಿ ನೀಡುವ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ?

ಅ) ಡಿ ಎನ್ ರುದ್ರಸ್ವಾಮಿ ಮತ್ತು ಬೋಶಪ್ಪ ವಿಠ್ಠಪ್ಪ ಗುಳಬಾಳ

ಆ) ಜಾನ್ ಕ್ರಿಸ್ಟೋಫರ್ ನಿರ್ಮಲ್ ಕುಮಾರ್ ಮತ್ತು ಶಿವಾನಂದ ಆರ್

ಇ) ಉಮೇಶ್ ಆರ್ ಕವಡೆ ಮತ್ತು ಕಂಚನ್ ಮುನ್ನರಕರ್

ಈ) ಡಿ ಎನ್ ರುದ್ರಸ್ವಾಮಿ ಮತ್ತು ಶಿವಾನಂದ ಆರ್

www.karunaduexams.com

ಜಾನ್ ಕ್ರಿಸ್ಟೋಫರ್ ನಿರ್ಮಲ್ ಕುಮಾರ್ ಮತ್ತು ಶಿವಾನಂದ ಆರ್ ಬೆಂಗಳೂರಿನ ಈಜು ತರಬೇತುದಾರ ಜಾನ್ ಕ್ರಿಸ್ಟೋಫರ್ ನಿರ್ಮಲ್ ಕುಮಾರ್ ಮತ್ತು ದಾವಣಗೆರೆಯ ಕುಸ್ತಿ ತರಬೇತುದಾರ ಶಿವಾನಂದ ಆರ್ ಅವರು ಜೀವಮಾನದ ಸಾಧನೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದು 1.50 ಲಕ್ಷ ರು. ನಗದು ಹೊಂದಿದೆ.

153. ಇತ್ತೀಚೆಗೆ ಮಂಗಳೂರಿನ ಪೆರ್ಮುದೆಯಲ್ಲಿ ನಿರ್ಮಿಸಲಾಗಿರುವ ಅಂತರ್ಗತ ತೈಲ ಸಂಗ್ರಹಾಗಾರದಲ್ಲಿ ಯಾವ ದೇಶದಿಂದ 2.6 ಲಕ್ಷ ಟನ್ ಕಚ್ಚಾ ತೈಲವನ್ನು ಆಮದು ಮಾಡಿ ಶೇಖರಣೆ ಮಾಡಲಾಯಿತು?

ಅ) ಇರಾನ್

ಆ) ಇರಾಕ್

ಇ) ಯುಎಇ

ಈ) ನೈಜೀರಿಯಾ

ಇರಾನ್

ಮಂಗಳೂರಿನ ಪೆರ್ಮುದೆಯಲ್ಲಿ ನಿರ್ಮಿಸಲಾಗಿರುವ ಭೂಗತ ತೈಲ ಸಂಗ್ರಹಾಗಾರದಲ್ಲಿ ಕಚ್ಚಾತೈಲ ಸಂಗ್ರಹಣೆಯನ್ನು ಆರಂಭಿಸಲಾಯಿತು. ಇರಾನ್ನಿಂದ ಬಂದ 2.6 ಲಕ್ಷ ಟನ್ ಕಚ್ಚಾ ತೈಲವನ್ನು ಈ ಸಂಗ್ರಹಾಗಾರದಲ್ಲಿ ಶೇಖರಣೆ ಮಾಡಲಾಯಿತು. ಇದೇ ಮೊದಲ ಬಾರಿಗೆ ಮಂಗಳೂರಿನ ತೈಲ ಸಂಗ್ರಹಾಗಾರದಲ್ಲಿ ಈ ಕಚ್ಚಾತೈಲ ಸಂಗ್ರಹ ಮಾಡಲಾಗುತ್ತಿದೆ. ಕಂಪೆನಿಯ ವಿಶಾಖಪಟ್ಟಣ, ಮಂಗಳೂರು ಹಾಗೂ ಉಡುಪಿ ಜಿಲ್ಲೆಯ ಪಾದೂರುಗಳಲ್ಲಿ ಭೂಗತ ತೈಲ ಸಂಗ್ರಹಾಗಾರಗಳನ್ನು ನಿರ್ಮಿಸುತ್ತಿದೆ. ಈಗಾಗಲೇ ವಿಶಾಖಪಟ್ಟಣಂ ಹಾಗೂ ಮಂಗಳೂರಿನ ಸಂಗ್ರಹಾಗಾರಗಳ ನಿರ್ಮಾಣ ಪೂರ್ಣಗೊಂಡಿದೆ.

154. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2015-16 ಪ್ರಕಾರ ರಾಜ್ಯದ ಒಟ್ಟಾರೆ ಲಿಂಗಾನುಪಾರ 2015-16ರಲ್ಲಿ ಎಷ್ಟಿದೆ?

ಅ) 970

ಆ) 979

ಇ) 982

ಈ) 973

979

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2015-16 ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಲಿಂಗಾನುಪಾತ ತೀವ್ರವಾಗಿ ಕುಸಿದಿದೆ ಎಂಬ ಅಂಶ ಬಹಿರಂಗಗೊಂಡಿದೆ. ಸಮೀಕ್ಷೆಯ ಅಂಕಿ ಅಂಶಗಳ ಪ್ರಕಾರ 2005-06 ರಲ್ಲಿ ಹುಟ್ಟಿನ ಸಮಯದಲ್ಲಿ ಶಿಶು ಲಿಂಗಾನುಪಾತ 922 ಇದ್ದು, 2015-16ರಲ್ಲಿ 910ಕ್ಕೆ ಕುಸಿದಿದೆ. ಅದೇ ರೀತಿ ಒಟ್ಟಾರೆ ಲಿಂಗಾನುಪಾತ 1,028 ರಿಂದ 979ಕ್ಕೆ ಇಳಿದಿದೆ.

www.karunaduexams.com

155. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ:

I) ರಾಜ್ಯ ಸರ್ಕಾರವು ರಾಜ್ಯದ ಕ್ರೀಡಾ ಸಾಧಕರಿಗೆ ಏಕಲವ್ಯ ಪ್ರಶಸ್ತಿಯನ್ನು 1992ರಿಂದ ನೀಡುತ್ತಿದೆ

II) ಏಕಲವ್ಯ ಪ್ರಶಸ್ತಿಯು ರೂ 3 ಲಕ್ಷ ನಗದು ಮತ್ತು ಏಕಲವ್ಯನ ಕಂಚಿನ ಮೂರ್ತಿ ಒಳಗೊಂಡಿದೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ:

ಅ) ಹೇಳಿಕೆ I ಮಾತ್ರ ಸರಿ

ಆ) ಹೇಳಿಕೆ II ಮಾತ್ರ ಸರಿ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ I ಮಾತ್ರ ಸರಿ

ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯನ್ನು 1992ರಿಂದ ರಾಜ್ಯದ ಕ್ರೀಡಾಸಾಧಕರಿಗೆ ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿ 2 ಲಕ್ಷ ರು. ನಗದು ಹಾಗೂ ಏಕಲವ್ಯನ ಕಂಚಿನ ಮೂರ್ತಿಯನ್ನು ಒಳಗೊಂಡಿದೆ.

156. ಮೂರನೇ ಮೈಸೂರು ಯುದ್ಧವು ಈ ಕೆಳಗಿನ ಯಾವ ಒಪ್ಪಂದದೊಂದಿಗೆ ಮುಕ್ತಾಯಗೊಂಡಿತು?

ಅ) ಮಂಗಳೂರು ಶಾಂತಿ ಒಪ್ಪಂದ

ಆ) ಶ್ರೀರಂಗಪಟ್ಟಣ ಒಪ್ಪಂದ

ಇ) ಮದ್ರಾಸ್ ಒಪ್ಪಂದ

ಈ) ಮೈಸೂರು ಒಪ್ಪಂದ

ಶ್ರೀರಂಗಪಟ್ಟಣ ಒಪ್ಪಂದ

ಮೂರನೇ ಮೈಸೂರು ಯುದ್ಧವು 1790 ರಲ್ಲಿ ಆರಂಭಗೊಂಡಿತು. ಯುದ್ಧ ಆರಂಭವಾಗಿ ಎರಡು ವರ್ಷಗಳ ನಂತರ ಶ್ರೀರಂಗಪಟ್ಟಣ ಒಪ್ಪಂದದಂತೆ 1792ರಲ್ಲಿ ಮುಕ್ತಾಯಗೊಂಡಿತು.

157. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಇನ್ಫೋಸಿಸ್ ಪ್ರತಿಷ್ಠಾನವು ಬಂಡೀಪುರ ಉದ್ಯಾನವನದಲ್ಲಿ ಜೀಬ್ರಾ ಎನ್ ಕ್ಲೋಸರ್ ಸ್ಥಾಪಿಸಿದೆ

II) ಈ ಜೀಬ್ರಾಗಳನ್ನು ಇಸ್ರೇಲ್ ನಿಂದ ಪ್ರಾಣಿ ವಿನಿಮಯ ಯೋಜನೆಯಡಿ ತರಲಾಗಿದೆ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ ಯಾವುವು?

ಅ) ಹೇಳಿಕೆ ಒಂದು ಮಾತ್ರ ಸರಿ

ಆ) ಹೇಳಿಕೆ ಎರಡು ಮಾತ್ರ ಸರಿ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

www.karunaduexams.com

ಹೇಳಿಕೆ ಎರಡು ಮಾತ್ರ ಸರಿ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ವತಿಯಿಂದ ರೂ 63 ಲಕ್ಷ ವೆಚ್ಚದಲ್ಲಿ ಜೀಬ್ರಾ ಎನ್ ಕ್ಲೋಸರ್ ಅನ್ನು ಇತ್ತೀಚೆಗೆ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರು ಉದ್ಘಾಟಿಸಿದರು. ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸ್ಥಾಪಿಸಿರುವ ಜೀಬ್ರಾ ಆವರಣದಲ್ಲಿ ಎರಡು ಗಂಡು ಹಾಗೂ ಎರಡು ಹೆಣ್ಣು ಜೀಬ್ರಾಗಳಿವೆ. ಇವುಗಳನ್ನು ಇಸ್ರೇಲ್‌ನ ಟೆಲ್‌ಅವಿವ್ ರಾಮತ್‌ಜನ್ ಸಫಾರಿಯಿಂದ ಪ್ರಾಣಿ ವಿನಿಮಯ ಯೋಜನೆಯಡಿ ಬನ್ನೇರುಘಟ್ಟಕ್ಕೆ ತರಲಾಗಿದೆ. ನೂತನ ಅತಿಥಿಗಳಾದ ಜೀಬ್ರಾಗಳಿಗೆ ಸುಧಾ.ಎನ್.ಮೂರ್ತಿ ಅವರು ಭರತ್, ಪೃಥ್ವಿ, ಕಾವೇರಿ ಹಾಗೂ ಹೇಮಾವತಿ ಎಂದು ನಾಮಕರಣ ಮಾಡಿದ್ದು ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿವೆ.

158. ಕರ್ನಾಟಕ ಇತಿಹಾಸ ಅಕಾಡೆಮಿ ನೀಡುವ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಡಾ.ಎಚ್.ಜಯಮ್ಮ

ಆ) ಡಾ.ದೇವರ ಕೊಂಡಾರಡ್ಡಿ

ಇ) ಡಾ.ಸಿಂದಗಿ ರಾಜಶೇಖರ

ಈ) ಡಾ.ಎಸ್.ವಿ.ಪಾಡಿಗಾರ್

ಕರ್ನಾಟಕ ಇತಿಹಾಸ ಅಕಾಡೆಮಿಯ ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಗೆ ಡಾ.ಸಿಂದಗಿ ರಾಜಶೇಖರ ಅವರನ್ನು ಆಯ್ಕೆ ಮಾಡಲಾಗಿದೆ. ಬೆಂಗಳೂರಿನ ಬೈಸಾನಿ ರುಕ್ಮಿಣಮ್ಮ ರತ್ನಂಶೆಟ್ಟಿ ನೆನಪಿನಲ್ಲಿ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಯನ್ನು ನೀಡಲಾಗುತ್ತಿದೆ. 'ಪ್ರಶಸ್ತಿಯು ರೂ 1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಇದೇ 22ರಿಂದ ಮೂರು ದಿನಗಳ ಕಾಲ ಇಲ್ಲಿ ನಡೆಯುವ ಕರ್ನಾಟಕ ಇತಿಹಾಸ ಅಕಾಡೆಮಿಯ 30ನೇ ವಾರ್ಷಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಅಕಾಡೆಮಿ ಅಧ್ಯಕ್ಷ ಡಾ.ದೇವರ ಕೊಂಡಾರಡ್ಡಿ ತಿಳಿಸಿದ್ದಾರೆ.

159. 2015ನೇ ಸಾಲಿನ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ಆಯ್ಕೆಯಾದ "ಚೌಕಬಾರ" ಕಿರುಚಿತ್ರದ ನಿರ್ದೇಶಕರು ಯಾರು?

ಅ) ರಘು ಶಿವಮೊಗ್ಗ

ಆ) ಉದಯ ಮರಕಿಣಿ

ಇ) ಬಿ ಎಂ ಗಿರಿರಾಜ್

ಈ) ಬರಗೂರು ರಾಮಚಂದ್ರಪ್ಪ

ರಘು ಶಿವಮೊಗ್ಗ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ 2015ನೇ ಸಾಲಿನ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ರಘು ಶಿವಮೊಗ್ಗ ನಿರ್ದೇಶಿಸಿರುವ 'ಚೌಕಾಬಾರ' ಕಿರುಚಿತ್ರವು ಆಯ್ಕೆಯಾಗಿದೆ. ಪ್ರಶಸ್ತಿ ರೂ 50 ಸಾವಿರ ಬಹುಮಾನವಿದೆ.

www.karunaduexams.com

160. ಉತ್ತಮ ಗುಣಮಟ್ಟದ ಕಾಮಗಾರಿ ನಿರ್ವಹಣೆಗಾಗಿ ಯಾವ ಜಲಾಶಯಕ್ಕೆ ವಿಶ್ವಬ್ಯಾಂಕ್ "ಎಕ್ಸಲೆನ್ಸ್ ಅವಾರ್ಡ್" ಪ್ರಶಸ್ತಿ ಲಭಿಸಿದೆ?

ಅ) ಆಲಮಟ್ಟಿ ಜಲಾಶಯ

ಆ) ಕೃಷ್ಣರಾಜ ಸಾಗರ ಜಲಾಶಯ

ಇ) ತುಂಗಭದ್ರ ಜಲಾಶಯ

ಈ) ಕಬಿನಿ ಜಲಾಶಯ

ಕಳೆದ ವರ್ಷ ಮೇನಲ್ಲಿ ಕೈಗೊಂಡ ಆಲಮಟ್ಟಿ ಜಲಾಶಯ ಪುನಶ್ಚೇತನ ಕಾರ್ಯವನ್ನು ಪ್ರಶಂಸಿಸಿರುವ ವಿಶ್ವಬ್ಯಾಂಕ್, ಉತ್ತಮ ಗುಣಮಟ್ಟದ ಕಾಮಗಾರಿ ನಿರ್ವಹಣೆಗಾಗಿ ಪ್ರಶಸ್ತಿ (ಎಕ್ಸಲೆನ್ಸ್ ಅವಾರ್ಡ್) ನೀಡಿದೆ. ವಿಶ್ವಬ್ಯಾಂಕ್ ನೆರವಿನಿಂದ ರೂ 72 ಕೋಟಿ ವೆಚ್ಚದಲ್ಲಿ ಜಲಾಶಯದ ಪುನಶ್ಚೇತನ ಕಾರ್ಯ ನಡೆದಿತ್ತು. ವಿಶ್ವಬ್ಯಾಂಕಿನ ಅಣೆಕಟ್ಟೆ ತಜ್ಞರಾದ ಈ.ಡಿ. ಫ್ಲಿಂಟ್, ಅಂತರರಾಷ್ಟ್ರೀಯ ಕಟ್ಟಡ ನಿರ್ಮಾಣ ಹಾಗೂ ಗುಣ ನಿಯಂತ್ರಣ ತಜ್ಞ ಮಾರ್ಕೋ ಕ್ಯಾಪಿಬಿ ಇಲ್ಲಿಗೆ ಭೇಟಿ ನೀಡಿ, ಕಾಮಗಾರಿಯನ್ನು ಪರಿಶೀಲಿಸಿದ್ದರು. 'ಜಲಾಶಯದ ಪುನಶ್ಚೇತನಕ್ಕೆ ಬಳಸಿಕೊಂಡ ನೂತನ ಎಂಜಿನಿಯರಿಂಗ್ ತಂತ್ರಜ್ಞಾನ, ಅಚ್ಚುಕಟ್ಟಾದ ಕಾಮಗಾರಿ, ಎಂಜಿನಿಯರ್‌ಗಳ ಸೇವೆ ಮೊದಲಾದವನ್ನು ಪರಿಗಣಿಸಿ, ಈ ಪ್ರಶಸ್ತಿಯನ್ನು ನೀಡಲಾಗಿದೆ.ದೇಶದ 10 ರಾಜ್ಯಗಳ ಸುಮಾರು 250ಕ್ಕೂ ಅಧಿಕ ಜಲಾಶಯಗಳ ಪುನಶ್ಚೇತನ ಯೋಜನೆ ಅಡಿ ನವೀಕರಣ ಕಾರ್ಯ ನಡೆದಿತ್ತು. ದೇಶದಲ್ಲಿ ಆಲಮಟ್ಟಿ ಜಲಾಶಯಕ್ಕೆ ಮಾತ್ರ ಈ ಪ್ರಶಸ್ತಿ ಲಭಿಸಿದೆ'

161. ರಾಜ್ಯದಲ್ಲಿರುವ ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿಗಳ ಸಂಖ್ಯೆ ಕ್ರಮವಾಗಿ ಎಷ್ಟಿದೆ?

ಅ) 4, 29

ಆ) 5, 30

ಇ) 5, 29

ಈ) 6, 31

5, 29

ಕರ್ನಾಟಕ ರಾಜ್ಯವು 9526.03 ಚದರ ಕಿ.ಮೀ ಅನ್ನು ಆವರಿಸಿರುವ 5 ರಾಷ್ಟ್ರೀಯ ಉದ್ಯಾನವನಗಳನ್ನು ಮತ್ತು 29 ವನ್ಯಜೀವಿ ಅಭಯಾರಣ್ಯಗಳನ್ನು ಹೊಂದಿದೆ.

162. ರಾಜ್ಯದಲ್ಲಿ "ರಾಷ್ಟ್ರೀಯ ವಾಯುಗುಣಮಟ್ಟ ಪರಿವೇಷ್ಟಕ ಕಾರ್ಯಕ್ರಮದಡಿ (NAMP)" ಈ ಕೆಳಕಂಡ ಯಾವ ಅಂಶಗಳನ್ನು ಮಾಪನ ಮಾಡುಲಾಗುತ್ತಿದೆ?

I) ಉಸಿರಾಡುವಾಗ ಸೇವಿಸುವಂತಹ ತೇಲಾಡುವ ಕಣಗಳು

II) ಗಂಧಕದ ಡೈ ಆಕ್ಸೈಡ್

www.karunaduexams.com

III) ಸಾರಜನಕದ ಡೈ ಆಕ್ಸೈಡ್

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II

ಆ) II & III

ಇ) I & III

ಈ) I, II & III

I, II & III

ರಾಷ್ಟ್ರೀಯ ವಾಯುಗುಣಮಟ್ಟ ಪರಿವೇಷ್ಟಕ ಕಾರ್ಯಕ್ರಮದಡಿ ಮೂರು ಅಂಶಗಳಾದ ಉಸಿರಾಡುವಾಗ ಸೇವಿಸುವಂತಹ ತೇಲಾಡುವ ಕಣಗಳು, ಗಂಧಕದ ಡೈ ಆಕ್ಸೈಡ್ ಮತ್ತು ಸಾರಜನಕದ ಡೈ ಆಕ್ಸೈಡ್ ಮಾಪಕ ಮಾಡಲಾಗುತ್ತಿದೆ.

163. ಇತ್ತೀಚೆಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಸಾರವರ್ಧಿತ ಅಕ್ಕಿ ಬಳಕೆ ಮಾಡಲು ರಾಜ್ಯ ಸರ್ಕಾರ ಯಾವ ಪ್ರತಿಷ್ಠಾನ ಜೊತೆ ಒಪ್ಪಂದ ಮಾಡಿಕೊಂಡಿದೆ?

ಅ) ಇನ್ಫೋಸಿಸ್ ಪ್ರತಿಷ್ಠಾನ

ಆ) ಅಕ್ಷಯ ಪಾತ್ರ ಪ್ರತಿಷ್ಠಾನ

ಇ) ವಿಪ್ರೋ ಪ್ರತಿಷ್ಠಾನ

ಈ) ಶ್ರೀಧರ್ಮಸ್ಥಳ ಪ್ರತಿಷ್ಠಾನ

ಅಕ್ಷಯ ಪಾತ್ರ ಪ್ರತಿಷ್ಠಾನ

ಅಪೌಷ್ಠಿಕತೆ ನಿವಾರಿಸಲು ರಾಜ್ಯ ಸರ್ಕಾರ ಮುಂದಡಿ ಇಟ್ಟಿದ್ದು, ಬೆಂಗಳೂರು ಗ್ರಾಮಾಂತರ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಇನ್ನು ಮುಂದೆ ಸಾರವರ್ಧಿತ ಅಕ್ಕಿ ಬಳಕೆ ಮಾಡಲು ನಿರ್ಧರಿಸಿದೆ.ಈ ಸಂಬಂಧ ಶಿಕ್ಷಣ ಇಲಾಖೆ ಮತ್ತು ಅಕ್ಷಯ ಪಾತ್ರ ಪ್ರತಿಷ್ಠಾನದ ಮಧ್ಯೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಬಿಸಿಯೂಟದಲ್ಲಿ ಬಳಸುವ 99 ಕೆ.ಜಿ. ಅಕ್ಕಿ ಜೊತೆ 1 ಕೆ.ಜಿ. ಸಾರವರ್ಧಿತ ಅಕ್ಕಿ ಮಿಶ್ರಣ ಮಾಡಲಾಗುವುದು. ಒಂದು ವರ್ಷದ ನಂತರ ಮಕ್ಕಳ ದೈಹಿಕ ಬೆಳವಣಿಗೆ, ತೂಕ ಹಾಗೂ ಎತ್ತರ ಮಾಪನ ಮಾಡಲಾಗುವುದು. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು.

164. 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಬರಗೂರು ರಾಮಚಂದ್ರಪ್ಪ

ಆ) ನಾಗತೀಹಳ್ಳಿ ಚಂದ್ರಶೇಖರ್

ಇ) ಚಂದ್ರಶೇಖರ ಕಂಬಾರ

ಈ) ದೇವನೂರ ಮಹಾದೇವ

ಬರಗೂರು ರಾಮಚಂದ್ರಪ್ಪ

ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರನ್ನು ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಮಾಡಲಾಗಿದೆ.

165. ಇತ್ತೀಚೆಗೆ ರಾಜ್ಯ ಸರ್ಕಾರ ಯಾವ ಜಿಲ್ಲೆಯಲ್ಲಿರುವ ಗೌಡಲು ಮತ್ತು ಹಲಸಲು ಬುಡಕಟ್ಟು ಜನಾಂಗದ ಕುಟುಂಬಗಳಿಗೆ ಪೌಷ್ಠಿಕ ಆಹಾರ ಯೋಜನೆ ಜಾರಿಗೆ ತರಲು ನಿರ್ಧರಿಸಿದೆ?

ಅ) ಚಿಕ್ಕಮಗಳೂರು

ಆ) ಹಾಸನ

ಇ) ಕೊಡಗು

ಈ) ಚಿತ್ರದುರ್ಗ

ಚಿಕ್ಕಮಗಳೂರು

ಚಿಕ್ಕಮಗಳೂರು ಜಿಲ್ಲೆಯ ಗೌಡಲು ಮತ್ತು ಹಲಸಲು ಬುಡಕಟ್ಟು ಜನಾಂಗದ ಕುಟುಂಬಗಳಿಗೆ ಪೌಷ್ಠಿಕ ಆಹಾರ ಯೋಜನೆ ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಯೋಜನೆಯಡಿ ತಲಾ 15 ಕೆಜಿ ಅಕ್ಕಿ, 5 ಕೆಜಿ ತೊಗರಿಬೇಳೆ, 5 ಕೆಜಿ ಹೆಸರುಬೇಳೆ, 4 ಕೆಜಿ ಸಕ್ಕರೆ, 2 ಲೀಟರ್ ಅಡುಗೆ ಎಣ್ಣೆ, 45 ಮೊಟ್ಟೆ ಮತ್ತು 500 ಗ್ರಾಂ ತುಪ್ಪ ನೀಡಲಾಗುವುದು.

166. ಕಾರಂಜ ಜಲಾಶಯ ಯಾವ ಜಿಲ್ಲೆಯಲಿದೆ?

ಅ) ಕಲ್ಬುರ್ಗಿ

ಆ) ಬೀದರ್

ಇ) ಬಿಜಾಪುರ

ಈ) ರಾಯಚೂರು

ಬೀದರ್

167. ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಕರೆಯಲಾಗುವ “ಕಪ್ಪತಗುಡ್ಡ” ಯಾವ ಜಿಲ್ಲೆಯಲ್ಲಿದೆ?

ಅ) ಬಿಜಾಪುರ

ಆ) ರಾಯಚೂರು

ಇ) ಗದಗ

ಈ) ಧಾರಾವಾಡ

ಗದಗ

ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಕರೆಯಲಾಗುವ ಕಪ್ಪತಗುಡ್ಡ ಗದಗ ಜಿಲ್ಲೆಯಲಿದೆ. ಇತ್ತೀಚೆಗೆ ಕಪ್ಪತಗುಡ್ಡಕ್ಕೆ ನೀಡಿದ್ದ 'ಸಂರಕ್ಷಿತ ಪ್ರದೇಶ' ಸ್ಥಾನಮಾನವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿರುವುದರಿಂದ ಇದು ಸುದ್ದಿಯಲಿದೆ. ರಾಜ್ಯ ಸರ್ಕಾರ 2015ರ ಡಿಸೆಂಬರ್ 19ರಂದು ಕಪ್ಪತಗುಡ್ಡವನ್ನು 'ಸಂರಕ್ಷಿತ ಅರಣ್ಯ ಪ್ರದೇಶ' ಎಂದು ಘೋಷಿಸಿತ್ತು.

168. ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ನೀಡುವ ಪಾರ್ತಿಸುಬ್ಬ ಪ್ರಶಸ್ತಿಗೆ ಪ್ರಸ್ತುಕ ಸಾಲಿನಲ್ಲಿ ಯಾರಿಗೆ ನೀಡಲಾಗುತ್ತಿದೆ?

ಅ) ಗೋಪಾಲಕೃಷ್ಣ ಕುರೂಪ್

ಆ) ಡಾ ಎಂ ಪ್ರಭಾಕರ ಜೋಶಿ

ಇ) ಹೇರಂಜಾಲು ಸುಬ್ಬಣ್ಣ ಗಾಣಿಗ

ಈ) ಸುಬ್ರಾಯ ವೆಂಕಟರಮಣ ಭಟ್ಟ

ಡಾ ಎಂ ಪ್ರಭಾಕರ ಜೋಶಿ

ಯಕ್ಷಗಾನದ ಹಿರಿಯ ವಿದ್ವಾಂಸ, ಅರ್ಥಧಾರಿ ಡಾ.ಎಂ. ಪ್ರಭಾಕರ ಜೋಶಿರವರನ್ನು ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ನೀಡುವ ಪಾರ್ತಿಸುಬ್ಬ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. 'ಪ್ರಶಸ್ತಿ ₹1 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ'. 'ಉಪನ್ಯಾಸಕರಾಗಿ ಪ್ರಾಂಶುಪಾಲ ರಾಗಿ ನಿವೃತ್ತರಾಗಿರುವ ಜೋಶಿ ಅವರು ಯಕ್ಷಗಾನದ ಕೆಲವೇ ವಿಮರ್ಶಕರಲ್ಲಿ ಒಬ್ಬರು. ನಾಲ್ಕು ದಶಕಗಳಿಗೂ ಮೀರಿ ಅಗ್ರಪಂಕ್ತಿಯ ಅರ್ಥದಾರಿಯಾಗಿದ್ದಾರೆ. ಹಲವು ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ'.

169. 2015ನೇ ಸಾಲಿನ ಟಿ. ಚೌಡಯ್ಯ ಪ್ರಶಸ್ತಿಗೆ ಆಯ್ಕೆಯಾಗಿರುವ ಸುರೇಶ್ ತಲ್ವಾಲಕರ್ ಪ್ರಸಿದ್ಧ ___ ಕಲಾವಿದ?

ಅ) ತಬಲಾ

ಆ) ಸರೋದ್

ಇ) ಪಿಟೀಲು

ಈ) ಕೊಳಲು

ತಬಲಾ

www.karunaduexams.com

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ 2015ನೇ ಸಾಲಿನ ಟಿ. ಚೌಡಯ್ಯ ಪ್ರಶಸ್ತಿಗೆ ಮುಂಬೈನ ಹಿರಿಯ ತಬಲಾ ಕಲಾವಿದ ಸುರೇಶ್ ತಲ್ವಾಲಕರ್ ರವರನ್ನು ಆಯ್ಕೆಮಾಡಲಾಗಿದೆ. ಚೌಡಯ್ಯ ಪ್ರಶಸ್ತಿ ₹ 5 ಲಕ್ಷ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಸಂತ ಶಿಶುನಾಳ ಷರೀಫ ಪ್ರಶಸ್ತಿಗೆ ಸುಗಮ ಸಂಗೀತ ಗಾಯಕಿ ರತ್ನಮಾಲಾ ಪ್ರಕಾಶ್ ಅವರು ಭಾಜನರಾಗಿದ್ದಾರೆ. ಶಿಶುನಾಳ ಷರೀಫ ಪ್ರಶಸ್ತಿ ₹ 3 ಲಕ್ಷ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

170. ಕರ್ನಾಟಕ ಪರೋಪಕಾರಿ ಹಾಗೂ ವೈದ್ಯಕೀಯ ವೃತ್ತಿಪರರು (ತುರ್ತುಸ್ಥಿತಿಯಲ್ಲಿ ರಕ್ಷಣೆ ಮತ್ತು ನಿಯಂತ್ರಣ) ಮಸೂದೆ–2016 ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

ಅ) ಇದರಡಿ ಅಪಘಾತದಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ಕೊಡಿಸಲು ಮುಂದಾಗುವ ಪರೋಪಕಾರಿಗೆ ₹1,500 ನಗದು ಪುರಸ್ಕಾರ ನೀಡಲಾಗುವುದು

ಆ) ಸುಪ್ರೀಂಕೋರ್ಟ್‌ನ ನಿರ್ದೇಶನದ ಅನುಸಾರ ಇಂತಹ ಕಾಯ್ದೆಯನ್ನು ದೇಶದಲ್ಲಿಯೆ ಮೊದಲ ಬಾರಿಗೆ ಕರ್ನಾಟಕ ಜಾರಿಗೊಳಿಸುತ್ತಿದೆ

ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪ

ಎರಡು ಹೇಳಿಕೆ ಸರಿ

ರಾಜ್ಯ ಸಚಿವ ಸಂಪುಟ 'ಕರ್ನಾಟಕ ಪರೋಪಕಾರಿ ಹಾಗೂ ವೈದ್ಯಕೀಯ ವೃತ್ತಿಪರರು (ತುರ್ತುಸ್ಥಿತಿಯಲ್ಲಿ ರಕ್ಷಣೆ ಮತ್ತು ನಿಯಂತ್ರಣ) ಮಸೂದೆ–2016' ಕ್ಕೆ ಅನುಮೋದನೆ ನೀಡಿದೆ. ಅಪಘಾತದಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ಕೊಡಿಸಲು ಮುಂದಾಗುವ ಪರೋಪಕಾರಿಗೆ ₹1,500 ನಗದು ಪುರಸ್ಕಾರ ನೀಡಲು ಹಾಗೂ ಪೊಲೀಸರಿಂದಾಗುವ ಕಿರುಕುಳ ತಪ್ಪಿಸುವುದು ಈ ಮಸೂದೆಯ ಉದ್ದೇಶ. .ಸುಪ್ರೀಂಕೋರ್ಟ್‌ನ ನಿರ್ದೇಶನದ ಅನುಸಾರ ಇಂತಹ ಕಾಯ್ದೆಯನ್ನು ದೇಶದಲ್ಲಿಯೆ ಮೊದಲ ಬಾರಿಗೆ ಕರ್ನಾಟಕ ಜಾರಿಗೊಳಿಸುತ್ತಿದೆ. ಇದೇ ತಿಂಗಳು ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಾಗುವುದು.

171. 'ಟಿಪ್ಪು ಸುಲ್ತಾನ್–ಎ ಕ್ರುಸೇಡರ್ ಫಾರ್ ಚೇಂಜ್' ಪುಸ್ತಕದ ಲೇಖಕರು _______?

ಅ) ನೀಲಾ ಮಂಜುನಾಥ್

ಆ) ಎಸ್ ವೈ ಬೆಟ್ಟೇಗೌಡ

ಇ) ಪ್ರೊ. ಬಿ ಷೇಕ್ ಅಲಿ

ಈ) ಸಲ್ಮಾನ್ ಸುಲ್ತಾನ್

ಪ್ರೊ. ಬಿ ಷೇಕ್ ಅಲಿ

ಪ್ರಸಿದ್ಧ ಇತಿಹಾಸಕಾರ ಹಾಗೂ ವಿಶ್ರಾಂತ ಕುಲಪತಿ ಪ್ರೊ.ಬಿ.ಷೇಕ್ ಅಲಿ "ಟಿಪ್ಪು ಸುಲ್ತಾನ್–ಎ ಕ್ರುಸೇಡರ್ ಫಾರ್ ಚೇಂಜ್' ಪುಸ್ತಕದ ಲೇಖಕರು. 424 ಪುಟಗಳ ಈ ಕೃತಿಯಲ್ಲಿ ಟಿಪ್ಪು ಸಾಧನೆಯನ್ನು ಬಣ್ಣಿಸಲಾಗಿದೆ. ಅಭಿವೃದ್ಧಿ, ಜನರ ಕಲ್ಯಾಣ, ಹಿಂದೂ ದೇಗುಲಗಳ ಬಗ್ಗೆ ಆತನಿಗಿದ್ದ ಕಾಳಜಿ, ತನ್ನ ಮಂತ್ರಿ ಮಂಡಲದಲ್ಲಿ ಹಿಂದೂಗಳಿಗೆ ಆದ್ಯತೆ ನೀಡಿದ್ದ ವಿವರಗಳಿವೆ.

172. ಇತ್ತೀಚೆಗೆ ಈ ಕೆಳಗಿನ ಯಾವ ದೇವಾಲಯಕ್ಕೆ ಐಎಸ್ಒ 9001:2008 ಪ್ರಮಾಣ ಪತ್ರ ನೀಡಲಾಗಿದೆ?

ಅ) ಧರ್ಮಸ್ಥಳ ಮಂಜುನಾಥ

ಆ) ಕುಕ್ಕೆ ಸುಬ್ರಮಣ್ಯ

ಇ) ಗೋಕರ್ಣ ಮಹಾಬಲೇಶ್ವರ

ಈ) ಹೊರನಾಡು ಅನ್ನಪೂರ್ಣೇಶ್ವರಿ

ಗೋಕರ್ಣ ಮಹಾಬಲೇಶ್ವರ

ಗೋಕರ್ಣದ ಐತಿಹಾಸಿಕ ಮಹಾಬಲೇಶ್ವರ ದೇವಾಲಯಕ್ಕೆ ಐಎಸ್ ಒ 9001:2008 ಪ್ರಮಾಣ ಪತ್ರ ದೊರೆತಿದೆ. ಜರ್ಮನಿಯ ಗುಣಮಟ್ಟ ನಿರ್ವಹಣಾ ವ್ಯವಸ್ಥೆ ಪ್ರಮಾಣೀಕರಣ ಕಂಪನಿಯು ಗೋಕರ್ಣಕ್ಕೆ ಭೇಟಿ ನೀಡಿ, ಸ್ವಚ್ಚತೆ, ಪ್ರಸಾದ ಹಂಚಿಕೆ, ರಕ್ಷಣಾ ಹಾಗೂ ಭದ್ರತೆಗೆ ಸಂಬಂಧಪಟ್ಟಂತೆ ಪರಿಶೀಲನೆ ನಡೆಸಿ, ದೇವಾಲಯಕ್ಕೆ ಐಎಸ್ ಒ ಪ್ರಮಾಣ ಪತ್ರ ನೀಡಿತ್ತು.

173. ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷೆ ಯಾರು?

ಅ) ಮಂಜುಳಾ ಶಂಕರ್

ಆ) ನಳಿನ ಗೋವಿಂದಸ್ವಾಮಿ

ಇ) ಭಾರತಿ ಶಂಕರ್

ಈ) ಮಧು ಕುಮಾರಿ

ಭಾರತಿ ಶಂಕರ್

ಭಾರತಿ ಶಂಕರ್ ಅವರು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷೆ

www.karunaduexams.com

174. ಇತ್ತೀಚೆಗೆ ಡಾ.ಕೆ. ಕಸ್ತೂರಿರಂಗನ್ ನೇತೃತ್ವದ 'ಕರ್ನಾಟಕ ಜ್ಞಾನ ಆಯೋಗ ಎಷ್ಟನೇ ತರಗತಿ ವರೆಗೆ ಕನ್ನಡ ಅಥವಾ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಶಿಫಾರಸ್ಸು ಮಾಡಿದೆ?

ಅ) 1 ರಿಂದ 4

ಆ) 1 ರಿಂದ 5

ಇ) 1 ರಿಂದ 7

ಈ) 4 ರಿಂದ 10

1 ರಿಂದ 4

1ರಿಂದ 4ನೇ ತರಗತಿವರೆಗೆ ಮಾತೃಭಾಷೆ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಬೇಕು. ಈ ಹಂತದಲ್ಲಿ ಇಂಗ್ಲಿಷ್ ಅನ್ನು ದ್ವಿತೀಯ ಭಾಷೆಯಾಗಿ ಕಲಿಸಬೇಕು ಎಂದು ಡಾ.ಕೆ. ಕಸ್ತೂರಿರಂಗನ್ ನೇತೃತ್ವದ 'ಕರ್ನಾಟಕ ಜ್ಞಾನ ಆಯೋಗ'ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಕರ್ನಾಟಕ ಜ್ಞಾನ ಆಯೋಗ ಸಿದ್ದಪಡಿಸಿರುವ ಶಿಕ್ಷಣ ನೀತಿ ಕರಡನ್ನು ಕಸ್ತೂರಿರಂಗನ್ ಅವರು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ತನ್ವೀರ್ ಸೇಠ್ ಅವರಿಗೆ ಸಲ್ಲಿಸಿದರು. ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೇ ಇರಬೇಕು. 5ನೇ ತರಗತಿಯಿಂದ ಶಿಕ್ಷಣ ಮಾಧ್ಯಮದ ಆಯ್ಕೆ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೆ ಇರಬೇಕು. ಅಲ್ಲದೆ, ಮಕ್ಕಳ ಆಯ್ಕೆಗೆ ಅನುಗುಣವಾಗಿ ಇನ್ನೆರಡು ಭಾಷೆಗಳನ್ನು ಹೆಚ್ಚುವರಿಯಾಗಿ ಕಲಿಯಲು ಅವಕಾಶ ಕೊಡಬೇಕು ಎಂದು ಶಿಫಾರಸು ಮಾಡಲಾಗಿದೆ.

175. ರೈತರ ಬೆಳೆಯನ್ನು ಹಾಳುಮಾಡುವ ಈ ಕೆಳಗಿನ ಯಾವ ಪ್ರಾಣಿಯನ್ನು ಬೇಟೆಯಾಡಲು ರಾಜ್ಯ ಸರ್ಕಾರ ಇತ್ತೀಚೆಗೆ ಅನುಮತಿ ನೀಡಿದೆ?

ಅ) ಕಾಡು ಹಂದಿ

ಆ) ಮೊಲ

ಇ) ನರಿ

ಈ) ಜಿಂಕೆ

ಕಾಡುಹಂದಿ

ಬೆಳೆಗಳನ್ನು ಹಾಳುಮಾಡುವ ಕಾಡುಹಂದಿಗಳನ್ನು ಬೇಟೆಯಾಡಲು ರೈತರಿಗೆ ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿ ಆದೇಶ ಹೊರಡಿಸಿದ್ದು, ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕಾಡುಹಂದಿಗೆ ಬೇಟೆಗೆ ಅರಣ್ಯ ಇಲಾಖೆ ಸಮ್ಮತಿ ಸೂಚಿಸಿದೆ. ಗಳನ್ನು ಹಾಳುಮಾಡುವ ಪ್ರಾಣಿಗಳನ್ನು,

www.karunaduexams.com

ಮುಖ್ಯವಾಗಿ ಕಾಡುಹಂದಿಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972, ಕಲಂ 62 ರ ಪ್ರಕಾರ ಕೆಲವೊಂದು ಪ್ರದೇಶಗಳಲ್ಲಿ ಬೇಟೆಯಾಡಬಹುದಾಗಿದೆ.

176. ಇದು ಕರ್ನಾಟಕದ ಅತ್ಯಂತ ಉತ್ತರ ಭಾಗದ ನೀರಾವರಿ ಯೋಜನೆ ______?

ಅ) ಮಲಪ್ರಭಾ ಯೋಜನೆ

ಆ) ಘಟಪ್ರಭಾ ಯೋಜನೆ

ಇ) ಕಾರಂಜ ಯೋಜನೆ

ಈ) ಬೆಣ್ಣೆತೊರೆ ಯೋಜನೆ

ಕಾರಂಜ ಯೋಜನೆ

177. ಕರ್ನಾಟಕ ಮಹಿಳಾ ಒಕ್ಕೂಟ ಮತ್ತು ಉತ್ಪಾದಕರ ಪಾರ್ಕ್ (Karnataka Ladies Association and Manufacturers' Park (KLAMP)) ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಬೆಂಗಳೂರು

ಆ) ಕಲಬುರ್ಗಿ

ಇ) ಚಿತ್ರದುರ್ಗ

ಈ) ಬೆಳಗಾವಿ

ಕಲಬುರ್ಗಿ

ಕಲಬುರ್ಗಿ ಜಿಲ್ಲೆಯ ಕೆಸರಟಗಿ ಕೈಗಾರಿಕ ಅಭಿವೃದ್ಧಿ ಪ್ರದೇಶದಲ್ಲಿ ಕರ್ನಾಟಕ ಮಹಿಳಾ ಒಕ್ಕೂಟ ಮತ್ತು ಉತ್ಪಾದಕರ ಪಾರ್ಕ್ ಸ್ಥಾಪನೆಯಾಗಲಿದೆ. ಥಿಂಗ್ ಬಿಗ್ 2016 ಮಹಿಳಾ ಉದ್ಯಮಿಗಳ ಸಮಾವೇಶದಲ್ಲಿ ಈ ಪಾರ್ಕ್ ನ ವೆಬ್ ಸೈಟ್ ಗೆ ಚಾಲನೆ ನೀಡಲಾಯಿತು. ಸದ್ಯ ಒಂದು ಎಕರೆ ಜಾಗದಲ್ಲಿ ಈ ಪಾರ್ಕ್ ನಿರ್ಮಾಣಗೊಳ್ಳಲಿದ್ದು, ಮುಂದಿನ ದಿನಗಳಲ್ಲಿ 50 ಎಕರೆಗೆ ವಿಸ್ತರಿಸಲಾಗುವುದು. ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಈ ಪಾರ್ಕ್ ಅನ್ನು ಸ್ಥಾಪಿಸಲಾಗುತ್ತಿದ್ದು, ತರಭೇತಿ ಕೇಂದ್ರ, ಉತ್ಪಾದನಾ ಕೇಂದ್ರ, ಪರೀಕ್ಷಾ ಪ್ರಯೋಗಾಲಯ, ಸೆಮಿನಾರ್ ಹಾಲ್ ಮತ್ತು ಇನ್ಕ್ಯೂಬೇಷನ್ ಸೆಂಟರ್ ಅನ್ನು ಒಳಗೊಂಡಿರಲಿದೆ.

178. ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

www.karunaduexams.com

ಅ) ಈ ಯೋಜನೆಯಡಿ ತುಂಗಭದ್ರಾ ನದಿಯಿಂದ ಗದಗ, ಕೊಪ್ಪಳ, ಬಳ್ಳಾರಿ ಜಿಲ್ಲೆಯ 40 ಸಾವಿರ ಎಕರೆ ಕೃಷಿ ಜಮೀನು ನೀರಾವರಿ ಒದಗಿಸಲಾಗುವುದು.

ಆ) ಈ ಏತ ನೀರಾವರಿ ಯೋಜನೆಗೆ 1991-1992 ರಲ್ಲಿ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಇ) ಮುಂಡರಗಿ ತಾಲೂಕಿನ ಹಮ್ಮಿಗಿ ಬಳಿ ತುಂಗಭದ್ರಾ ನದಿಗೆ ಬ್ಯಾರೇಜು ನಿರ್ಮಿಸಿ ಎಡ ಹಾಗೂ ಬಲ ಬದಿಗಳ ಏತ ನೀರಾವರಿ ಸೌಲಭ್ಯ ಒದಗಿಸುವುದೇ ಇದರ ಮೂಲ ಉದ್ದೇಶ.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮತ್ತು ಮೂರು ಮಾತ್ರ

ಆ) ಹೇಳಿಕೆ ಒಂದು ಮಾತ್ರ

ಇ) ಹೇಳಿಕೆ ಎರಡು ಮಾತ್ರ

ಈ) ಮೇಲಿನ ಎಲ್ಲವು

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಮ್ಮಿಗಿ ಗ್ರಾಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಂಗಟಾಲೂರು ಏತನೀರಾವರಿ ಯೋಜನೆಯ ಎಡಭಾಗದ ಮೊದಲ ಹಂತದ ನೀರೆತ್ತುವ ಘಟಕವನ್ನು ಇತ್ತೀಚೆಗೆ ಉದ್ಘಾಟಿಸಿದರು. ಈ ಯೋಜನೆಯಡಿ ತುಂಗಭದ್ರಾ ನದಿಯಿಂದ ಗದಗ, ಕೊಪ್ಪಳ, ಬಳ್ಳಾರಿ ಜಿಲ್ಲೆಯ 40 ಸಾವಿರ ಎಕರೆ ಕೃಷಿ ಜಮೀನು ನೀರಾವರಿಗೆ 7.64 ಟಿ.ಎಂ.ಸಿ. ನೀರು ಬಳಕೆ ಮಾಡಲಾಗುವುದು. ಸುಮಾರು 63.62 ಕೋಟಿ ರೂ. ವೆಚ್ಚದ ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ 1991-1992 ರಲ್ಲಿ ರಾಜ್ಯ ಸರ್ಕಾರ ನೀಡಿತ್ತು. ತದನಂತರ 2000 ನೇ ವರ್ಷದಲ್ಲಿ ಅಂದು ಜಲಸಂಪನ್ಮೂಲ ಖಾತೆ ಸಚಿವರಾಗಿದ್ದ ಎಚ್.ಕೆ.ಪಾಟೀಲರು ಈ ಯೋಜನೆಯ ವ್ಯಾಪ್ತಿ ಹೆಚ್ಚಿಸಿ ಹೆಚ್ಚುವರಿಯಾಗಿ 10.91 ಟಿ.ಎಂ.ಸಿ. ತದನಂತರ 2000 ನೇ ವರ್ಷದಲ್ಲಿ ಅಂದು ಜಲಸಂಪನ್ಮೂಲ ಖಾತೆ ಸಚಿವರಾಗಿದ್ದ ಎಚ್.ಕೆ.ಪಾಟೀಲರು ಈ ಯೋಜನೆಯ ವ್ಯಾಪ್ತಿ ಹೆಚ್ಚಿಸಿ ಹೆಚ್ಚುವರಿಯಾಗಿ 10.91 ಟಿ.ಎಂ.ಸಿ. ನೀರು ಹಂಚಿಕೆ ಮಾಡಿಸಿ ಪರಿಷ್ಕೃತ 595 ಕೋಟಿ ರೂ. ವೆಚ್ಚಕ್ಕೆ ಅನುಮೋದನೆ ದೊರಕಿಸಿದ್ದರು. ಮುಂಡರಗಿ ತಾಲೂಕಿನ ಹಮ್ಮಿಗಿ ಬಳಿ ತುಂಗಭದ್ರಾ ನದಿಗೆ ಬ್ಯಾರೇಜು ನಿರ್ಮಿಸಿ ಎಡ ಹಾಗೂ ಬಲ ಬದಿಗಳ ಏತ ನೀರಾವರಿ ಸೌಲಭ್ಯ ಒದಗಿಸುವುದೇ ಇದರ ಮೂಲ ಉದ್ದೇಶವಾಗಿದೆ.

179. ಕೇಂದ್ರ ನಗರಾಭಿವೃದ್ಧಿ ಸಚಿವಾಲಯದ ಅತ್ಯುತ್ತಮ ನಗರ ಬಸ್ ಸೇವೆ ಪ್ರಶಸ್ತಿ ಈ ಕೆಳಗಿನ ಯಾವುದಕ್ಕೆ ಲಭಿಸಿದೆ?

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಆ) ಹುಬ್ಬಳ್ಳಿ-ಧಾರಾವಾಡ ನಗರ ಬಸ್ ಸೇವೆ



www.karunaduexams.com

ಇ) ಶಿವಮೊಗ್ಗ ನಗರ ಬಸ್ ಸೇವೆ

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ಹುಬ್ಬಳ್ಳಿ-ಧಾರಾವಾಡ ನಗರ ಬಸ್ ಸೇವೆ

ಕೇಂದ್ರ ನಗರಾಭಿವೃದ್ದಿ ಸಚಿವಾಲಯದ ಅತ್ಯುತ್ತಮ ನಗರ ಬಸ್ ಸೇವೆ ಪ್ರಶಸ್ತಿಗೆ ಹುಬ್ಬಳ್ಳಿ-ಧಾರಾವಾಡ ನಗರ ಬಸ್ ಸೇವೆ ಭಾಜನವಾಗಿದೆ. ದೇಶದ ಅತ್ಯುತ್ತಮ ನಗರ ಬಸ್ ಸೇವೆ ವಿಭಾಗದಲ್ಲಿ ಈ ಪ್ರಶಸ್ತಿ ಲಭಿಸಿದೆ. ಸಾರ್ವಜನಿಕ ಸಾರಿಗೆ ಉತ್ತೇಜನ, ರಸ್ತೆ ಸುರಕ್ಷತೆ ಮತ್ತು ಮೋಟಾರ್ ರಹಿತ ಸಾರಿಗೆ ಕೈಗೊಳ್ಳಲಾದ ಕ್ರಮಗಳನ್ನು ಆಧರಿಸಿ ಪ್ರಶಸ್ತಿಯನ್ನು ನೀಡಲಾಗಿದೆ.

180. ಬೆಂಗಳೂರಿನಲ್ಲಿ ವಿಶ್ವ ದರ್ಜೆಯ ವಿಜ್ಞಾನ ಗ್ಯಾಲರಿ ಸ್ಥಾಪನೆ ಮಾಡಲು ರಾಜ್ಯ ಸರ್ಕಾರ ಯಾವ ದೇಶದ ಅಂತರರಾಷ್ಟ್ರೀಯ ವಿಜ್ಞಾನ ಗ್ಯಾಲರಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ?

ಅ) ಅಮೆರಿಕ

ಆ) ಐರ್ಲ್ಯಾಂಡ್

ಇ) ಸ್ವೀಡನ್

ಈ) ಕೆನಡಾ

ಐರ್ಲ್ಯಾಂಡ್

ಬೆಂಗಳೂರಿನಲ್ಲಿ ವಿಶ್ವ ದರ್ಜೆಯ ವಿಜ್ಞಾನ ಗ್ಯಾಲರಿ ಸ್ಥಾಪನೆ ಮಾಡಲು ರಾಜ್ಯ ಸರ್ಕಾರ ಐರ್ಲೆಂಡ್ ದೇಶದ ಡಬ್ಲಿನ್‌ನ ಅಂತರರಾಷ್ಟ್ರೀಯ ವಿಜ್ಞಾನ ಗ್ಯಾಲರಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್.ಸೀತಾರಾಂ, ರವರು ಈ ವಿಷಯ ತಿಳಿಸಿದ್ದು, ಡಬ್ಲಿನ್ ಅಂತರರಾಷ್ಟ್ರೀಯ ವಿಜ್ಞಾನ ಗ್ಯಾಲರಿಯು ವಿಶ್ವದಾದ್ಯಂತ ವಿಶ್ವದರ್ಜೆಯ ವಿಜ್ಞಾನ ಗ್ಯಾಲರಿಗಳ ಜಾಲವನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದು, ಈಗಾಗಲೇ ಡಬ್ಲಿನ್, ಲಂಡನ್ ಹಾಗೂ ಮೆಲ್ಬರ್ನ್‌ನಲ್ಲಿ ಇಂತಹ ಗ್ಯಾಲರಿಗಳು ನಿರ್ಮಾಣವಾಗಿವೆ. ಬೆಂಗಳೂರಿನಲ್ಲಿ ನಾಲ್ಕನೇ ಗ್ಯಾಲರಿ ಸ್ಥಾಪನೆಯಾಗಲಿದೆ. ಅಂತರರಾಷ್ಟ್ರೀಯ ವಿಜ್ಞಾನ ಗ್ಯಾಲರಿ ನಿರ್ಮಾಣಕ್ಕೆ ಈಗಾಗಲೇ ಹೆಬ್ಬಾಳದ ಭಾರತೀಯ ಪಶುಸಂಗೋಪನಾ ಸಂಸ್ಥೆಯ ಆವಣದಲ್ಲಿ 1 ಎಕರೆ 26 ಗುಂಟೆ ಜಾಗವನ್ನು ನೀಡಲಾಗಿದೆ.

181. "ಥಿಂಕ್ ಬಿಗ್ 2016" ಏಷ್ಯಾದ ಅತಿ ದೊಡ್ಡ ಮಹಿಳಾ ಉದ್ಯಮಿಗಳ ಸಮಾವೇಶ ಯಾವ ನಗರದಲ್ಲಿ ಆಯೋಜನೆಗೊಂಡಿದೆ?

ಅ) ಬೆಂಗಳೂರು

ಆ) ಮೈಸೂರು

ಇ) ತುಮಕೂರು

ಈ) ಚಿಕ್ಕಬಳ್ಳಾಪುರ

ಬೆಂಗಳೂರು

ಬೆಂಗಳೂರಿನ ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ 'ಥಿಂಕ್ ಬಿಗ್ 2016' ಮಹಿಳಾ ಉದ್ಯಮಿಗಳ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ಸಮಾವೇಶವನ್ನು ಕರ್ನಾಟಕ ಸರಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬೃಹತ್ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ, ಕರ್ನಾಟಕ ಸರಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ. ರತ್ನಪ್ರಭಾ ಉದ್ಘಾಟಿಸಿದರು.

182. ಕರ್ನಾಟಕ ರಾಜ್ಯ ಮಹಿಳಾ ಉದ್ಯಮಶೀಲತಾ ಚಟುವಟಿಕೆಗಳಲ್ಲಿ ರಾಷ್ಟ್ರದಲ್ಲಿ ಎಷ್ಟನೇ ಸ್ಥಾನದಲ್ಲಿದೆ?

ಅ) ಒಂದು

ಆ) ಎರಡು

ಇ) ಮೂರು

ಈ) ನಾಲ್ಕು

ಮೂರು

ಕರ್ನಾಟಕ ರಾಜ್ಯ ಮಹಿಳಾ ಉದ್ಯಮಶೀಲತಾ ಚಟುವಟಿಕೆಗಳಲ್ಲಿ ರಾಷ್ಟ್ರದ 3ನೇ ಸ್ಥಾನದಲ್ಲಿದೆ. ರಾಜ್ಯವು ಸುಮಾರು 1 ಲಕ್ಷಕ್ಕಿಂತ ಹೆಚ್ಚು ಮಹಿಳೆಯರ ಉದ್ಯಮಕ್ಕೆ ನೆಲೆ ನೀಡಿದೆ.

183. ಅತ್ಯುತ್ತಮ ಸುದ್ದಿ-ಚಿತ್ರ ವಿನ್ಯಾಸಕ್ಕಾಗಿ ವಿಶ್ವದರ್ಜೆಯ ಎನ್‌ಎಸ್ಡಿ ಮನ್ನಣೆ ಪಡೆದ ಕನ್ನಡದ ಏಕೈಕ ಹಾಗೂ ದೇಶದ ಎರಡನೆ ಪ್ರಾಂತೀಯ ಪತ್ರಿಕೆಗ ಎಂಬ ಹಿರಿಮೆಗೆ ಯಾವ ಪತ್ರಿಕೆ ಪಾತ್ರವಾಗಿದೆ?

ಅ) ಉದಯವಾಣಿ

ಆ) ಪ್ರಜಾವಾಣಿ

ಇ) ಕನ್ನಡ ಪ್ರಭ

ಈ) ವಾರ್ತಾ ಭಾರತಿ

ಕನ್ನಡ ಪ್ರಭ

ಕನ್ನಡಪ್ರಭ' ಪತ್ರಿಕೆಯು ಅತ್ಯುತ್ತಮ ಸುದ್ದಿ-ಚಿತ್ರ ವಿನ್ಯಾಸಕ್ಕಾಗಿ ವಿಶ್ವದರ್ಜೆಯ ಎನ್‌ಎಸ್ಡಿ ಮನ್ನಣೆಗೆ ಪಾತ್ರವಾಗಿದ್ದು, ಈ ಸಾಧನೆಗೈದ ಕನ್ನಡದ ಏಕೈಕ ಹಾಗೂ ದೇಶದ ಎರಡನೆ

www.karunaduexams.com

ಪ್ರಾಂತೀಯ ಪತ್ರಿಕೆ ಎಂಬ ಹಿರಿಮೆಗೆ ಪತ್ರಿಕೆ ಪಾತ್ರವಾಗಿದೆ. ಇತ್ತೀಚೆಗೆ ಬ್ರೆಝಿಲ್ನಲ್ಲಿ ಜರಗಿದ ರಿಯೋ ಒಲಿಂಪಿಕ್ಸ್ ಕ್ರೀಡಾಕೂಟ ಹಾಗೂ ಈ ಕ್ರೀಡಾಕೂಟದ ಇತಿಹಾಸದ ಸುದ್ದಿ- ಚಿತ್ರಣಗಳ ವಿನ್ಯಾಸಕ್ಕಾಗಿ ಪತ್ರಿಕೆಯು ಗೌರವಾನ್ವಿತ ಉಲ್ಲೇಖ (ಹಾನರೇಬಲ್ ಮೆನ್ಷನ್) ಗರಿ ಪ್ರಾಪ್ತವಾಗಿದೆ. ಒಲಿಂಪಿಕ್ಸ್ ಕೂಟದ ಹಾಗುಹೋಗುಗಳನ್ನು ಸುಂದರವಾಗಿ ಚಿತ್ರಿಸಿದ್ದ ಜಗತ್ತಿನ ಪತ್ರಿಕೆಗಳ ಸ್ಪರ್ಧೆಯಲ್ಲಿ 'ಕನ್ನಡಪ್ರಭ'ದ ಪ್ರಧಾನ ವಿನ್ಯಾಸಕಾರ ಬಿ.ಜಿ.ಜನಾರ್ದನ್ ವಿನ್ಯಾಸಗೊಳಿಸಿದ್ದ ಜೂನ್ 26ರ 'ಭಾವ ಬೆಸುಗೆಯ 27 ಕೊಂಡಿಗಳು' ಮತ್ತು ಆಗಸ್ಟ 4ರ '16 ದಿನಗಳ ಅಂತಾರಾಷ್ಟ್ರೀಯ ಮಟ್ಟದ ಏಕೈಕ ಸಂಘಟನೆ ಸೊಸೈಟಿ ಫಾರ್ ಡಿಸೈನ್(ಎಸ್ಎನ್ಡಿ)ನ ಮೆಚ್ಚುಗೆಯ ಪಟ್ಟಿಗೆ ಸೇರ್ಪಡೆಯಾಗಿದೆ.

184. 2016 ಸಿಂಗಾಪುರ ಕನ್ನಡಿಗರ ಸಿಂಗಾರ ಉತ್ಸವದಲ್ಲಿ “ಸಿಂಗಾರ ಸಾಹಿತ್ಯ ರತ್ನ ಪ್ರಶಸ್ತಿ”ಯನ್ನು ನೀಡಲಾಯಿತು?

ಅ) ಡಾ. ಶಿವರಾಜ್ ಕುಮಾರ್

ಆ) ಡಾ. ಎಸ್.ಎಲ್. ಭೈರಪ್ಪ

ಇ) ಚಂದ್ರಶೇಖರ ಗುರೂಜಿ

ಈ) ಎಚ್ ಆರ್ ರಂಗನಾಥ್

ಡಾ. ಎಸ್.ಎಲ್. ಭೈರಪ್ಪ

ಕನ್ನಡದ ಖ್ಯಾತ ಕಾದಂಬರಿಕಾರ, ಪದ್ಮಶ್ರೀ ಡಾ. ಎಸ್ ಎಲ್ ಭೈರಪ್ಪ ಅವರಿಗೆ 2016 ಸಿಂಗಾಪುರ ಕನ್ನಡಿಗರ ಸಿಂಗಾರ ಉತ್ಸವದಲ್ಲಿ 'ಸಿಂಗಾರ ಸಾಹಿತ್ಯ ರತ್ನ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಸರಳ ವಾಸ್ತು ಖ್ಯಾತಿಯ ಚಂದ್ರಶೇಖರ ಗುರೂಜಿ ಅವರಿಗೆ 'ಸಿಂಗಾರ ವಾಸ್ತು ರತ್ನ' ಪ್ರಶಸ್ತಿ ಹಾಗೂ ಡಾ, ಎಸ್ ಎನ್ ಓಂಕಾರ ಅವರಿಗೆ 'ಸಿಂಗಾರ ಯೋಗ ರತ್ನ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

185. ಈ ಕೆಳಗಿನ ಯಾವ ತಾಲ್ಲೂಕುಗಳಲ್ಲಿ ರಾಜ್ಯ ಸರ್ಕಾರ ಗರ್ಭಿಣಿಯರಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ನಿರ್ಧರಿಸಿದೆ?

ಅ) ಮಧುಗಿರಿ, ಜಮಖಂಡಿ, ಮಾನ್ವಿ, ಹೆಚ್.ಡಿ.ಕೋಟೆ

ಆ) ಶಿರಸಿ, ಜಗಳೂರು, ಮಾನ್ವಿ, ಹೆಚ್.ಡಿ.ಕೋಟೆ

ಇ) ಚಿಂತಾಮಣಿ, ಮಾನ್ವಿ, ಸಾಗರ, ಬಂಟ್ವಾಳ

ಈ) ಬೆಂಗಳೂರು ನಗರ, ಕೋಲಾರ, ಸಿಂಧನೂರು, ಜೇವರ್ಗಿ

ಮಧುಗಿರಿ, ಜಮಖಂಡಿ, ಮಾನ್ವಿ, ಹೆಚ್.ಡಿ.ಕೋಟೆ

www.karunaduexams.com

ರಾಜ್ಯದ ಗರ್ಭಿಣಿ ಸ್ತ್ರೀಯರ ಆರೋಗ್ಯ ಮಟ್ಟವನ್ನು ಸುಧಾರಿಸುವ ಸಲುವಾಗಿ ರಾಜ್ಯ ಸರ್ಕಾರ ನಾಲ್ಕು ತಾಲೂಕುಗಳಲ್ಲಿ. ಮಾತೃ ಪುಷ್ಠಿ ವರ್ಧನೆಗಾಗಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಜಾರಿಗೆತರಲು ನಿರ್ಧರಿಸಿದೆ. ಪ್ರಾಯೋಗಿಕವಾಗಿ ಮಧುಗಿರಿ, ಜಮಖಂಡಿ, ಮಾನ್ವಿ, ಹೆಚ್.ಡಿ.ಕೋಟೆ ತಾಲ್ಲೂಕುಗಳಲ್ಲಿ ಡಿಸೆಂಬರ್ 15 ರಿಂದ ಯೋಜನೆ ಜಾರಿಗೆ ಬರಲಿದ್ದು, ನಂತರ ದಿನಗಳಲ್ಲಿ ರಾಜ್ಯದ ಇತರೆ ಭಾಗಗಳಿಗೆ ವಿಸ್ತರಿಸಲಾಗುವುದು.

186. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ:

ಅ) ಮೊದಲ ವಿಶ್ವ ಕನ್ನಡ ಸಮ್ಮೇಳನ 1985 ರಲ್ಲಿ ಮೈಸೂರಿನಲ್ಲಿ ನಡೆದಿತ್ತು

ಆ)ಎರಡನೇ ವಿಶ್ವ ಕನ್ನಡ ಸಮ್ಮೇಳನವನ್ನ 2011 ರಲ್ಲಿ ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು

ಇ) ಮೂರನೇ ವಿಶ್ವ ಕನ್ನಡ ಸಮ್ಮೇಳನ 2017 ರಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆಯ್ಕೆಮಾಡಿ?

ಅ) ಹೇಳಿಕೆ ಒಂದು ಮತ್ತು ಎರಡು ಮಾತ್ರ

ಆ) ಹೇಳಿಕೆ ಎರಡು ಮತ್ತು ಮೂರು ಮಾತ್ರ

ಇ) ಹೇಳಿಕೆ ಒಂದು ಮತ್ತು ಮೂರು ಮಾತ್ರ

ಈ) ಮೇಲಿನ ಎಲ್ಲಾ ಹೇಳಿಕೆಗಳು ಸರಿ

ಹೇಳಿಕೆ ಒಂದು ಮತ್ತು ಎರಡು ಮಾತ್ರ

ಮೂರನೇ ವಿಶ್ವ ಸಮ್ಮೇಳನ ಜೂನ್ 2017 ರಲ್ಲಿ, ಬೆಂಗಳೂರು ಅಥವಾ ಹೈದ್ರಾಬಾದ್-ಕರ್ನಾಟಕ ಭಾಗದ ಯಾವುದಾದರೂ ಒಂದು ನಗರದಲ್ಲಿ ನಡೆಯಲಿದೆ.

187. ಕರ್ನಾಟಕ ಹಕ್ಕಿ ಹಬ್ಬ (Bird Festival) ಮೂರನೇ ಆವೃತ್ತಿ ಎಲ್ಲಿ ನಡೆಯಲಿದೆ?

ಅ) ಹಂಪಿ

ಆ) ಪಿಳಿಕುಲ

ಇ) ಸಕಲೇಶಪುರ

ಈ) ಕೊಳ್ಳೆಗಾಲ

ಹಂಪಿ

ಕರ್ನಾಟಕ ಹಕ್ಕಿ ಹಬ್ಬದ ಮೂರನೇ ಆವೃತ್ತಿ ಹಂಪಿಯಲ್ಲಿ ನಡೆಯಲಿದೆ. ಈ ಹಿಂದಿನ ಎರಡು ಆವೃತ್ತಿಗಳನ್ನು ಅರಣ್ಯ ಇಲಾಖೆ ಮತ್ತು ಪರಿಸರ ಪ್ರವಾಸೋದ್ಯಮ ನಿಗಮ ರಂಗನತಿಟ್ಟು ಮತ್ತು ಕಾಳಿ ಹುಲಿ ಮೀಸಲು ಅರಣ್ಯಗಳಲ್ಲಿ ಹಮ್ಮಿಕೊಂಡಿತ್ತು. ಹಂಪಿ ಸುತ್ತಮುತ್ತಲ ಹಕ್ಕಿಗಳ

www.karunaduexams.com

ವಾಸಸ್ಥಾನ ಮತ್ತು ಬಳ್ಳಾರಿ ಜಿಲ್ಲೆಯ ದರೋಜಿ ಸ್ಲೋತ್ ಬೇರ್ ಪಕ್ಷಿಧಾಮಗಳಲ್ಲಿ ಮೂರು ದಿನಗಳ ಈ ಹಬ್ಬ ಜನವರಿ ಮೊದಲ ವಾರದಲ್ಲಿ ನಡೆಯಲಿದೆ.

188. ತುರ್ತು ಚಿಕಿತ್ಸೆ ನಿರ್ವಹಿಸುವ ಸಂಬಂಧ ರಾಜ್ಯದ ಆರೋಗ್ಯ ಇಲಾಖೆ ಸಿಬ್ಬಂದಿಗೆ ಯಾವ ದೇಶದ ಪರಿಣಿತ ವೈದ್ಯರ ತಂಡ ಜ್ಞಾನಕೌಶಲ್ಯ ತರಭೇತಿ ನೀಡುತ್ತಿದೆ?

ಅ) ಸಿಂಗಪುರ

ಆ) ಅಮೆರಿಕ

ಇ) ಜಪಾನ್

ಈ) ಜರ್ಮನಿ

ಸಿಂಗಪುರ

ಅಪಘಾತ, ವಿಷಸೇವನೆ, ಬೆಂಕಿ ಅವಘಡ ಸೇರಿದಂತೆ ಮುಂತಾದ ಸಮಯದಲ್ಲಿ ತುರ್ತು ಚಿಕಿತ್ಸೆ ನಿರ್ವಹಿಸುವ ಸಂಬಂಧ ರಾಜ್ಯದ ಆರೋಗ್ಯ ಇಲಾಖೆ ಸಿಬ್ಬಂದಿಗೆ ಸಿಂಗಪುರ ದೇಶದ ಪರಿಣಿತ ವೈದ್ಯರ ತಂಡ ಜ್ಞಾನಕೌಶಲ್ಯ ತರಭೇತಿ ನೀಡಲಿದೆ. ಈ ತರಭೇತಿಗೆ ಇತ್ತೀಚೆಗೆ ವಿಕಾಸಸೌಧದಲ್ಲಿ ಚಾಲನೆ ನೀಡಲಾಯಿತು. ಇದರಡಿ ಮುಂದಿನ ಮೂರು ವರ್ಷದಲ್ಲಿ 1200 ಕ್ಕೂ ಹೆಚ್ಚು ಸಿಬ್ಬಂದಿ ತರಭೇತಿ ಪಡೆಯಲಿದ್ದಾರೆ.

189. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

ಅ) 2015-16ನೇ ಸಾಲಿನಲ್ಲಿ ರಾಜ್ಯದ ತಲಾ ಆದಾಯ 1,48,494 ರೂ ಇದೆ

ಆ) ರಾಷ್ಟ್ರ ತಲಾ ಆದಾಯಕ್ಕೆ ಹೋಲಿಸಿದರೆ ರಾಜ್ಯದ ತಲಾ ಆದಾಯ ಶೇ 59% ಹೆಚ್ಚಿದೆ.

ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

2015-16ನೇ ಸಾಲಿನಲ್ಲಿ ರಾಜ್ಯದ ತಲಾ ಆದಾಯ 1,48,494 ರೂ ತಲುಪಿದ್ದು, ರಾಷ್ಟ್ರದ ತಲಾ ಆದಾಯ ರೂ 93,231ಕ್ಕೆ ಹೋಲಿಸಿದರೆ ರಾಜ್ಯದ ತಲಾ ಆದಾಯ ಶೇ 59% ಹೆಚ್ಚಿದೆ.

www.karunaduexams.com

190. ರಾಜ್ಯದಲ್ಲಿ ಜನನ ಮತ್ತು ಮರಣ ಆನ್ ಲೈನ್ ನೋಂದಣಿ ವ್ಯವಸ್ಥೆಗೆ ಯಾವ ಇ-ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ?

ಅ) ಸಂಸ್ಕರಣೆ

ಆ) ಸಾರ್ಥಕ ಜೀವನ

ಇ) ಸಂಸ್ಕಾರ

ಈ) ಜೀವನ ಜ್ಯೋತಿ

ಸಂಸ್ಕರಣೆ

ರಾಜ್ಯದಲ್ಲಿ ಜನನ ಮತ್ತು ಮರಣ ಆನ್ ಲೈನ್ ನೋಂದಣಿ ವ್ಯವಸ್ಥೆಗೆ ಸಂಸ್ಕರಣೆ ಹೆಸರಿನ ಇ-ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.

191. ಹೆಚ್ಎಎಲ್ -ಐಐಎಸ್ಸಿ ಕೌಶಲ್ಯ ಅಭಿವೃದ್ಧಿ ಕೇಂದ್ರ ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗುತ್ತಿದೆ?

ಅ) ಬಳ್ಳಾರಿ

ಆ) ಚಿತ್ರದುರ್ಗ

ಇ) ರಾಯಚೂರು

ಈ) ವಿಜಯಪುರ

ಚಿತ್ರದುರ್ಗ

ಹಿಂದೂಸ್ತಾನ ಏರೋನಾಟಿಕ್ಸ್ ಲಿಮಿಟೆಡ್ ಮತ್ತು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (HAL-IISc)ನ ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ ಚಿತ್ರದುರ್ಗದ ಚಳ್ಳಕೆರೆ ತಾಲ್ಲೂಕಿನಲ್ಲಿ ಗುದ್ದಲಿ ಪೂಜೆ ನೇರವೇರಿಸಲಾಯಿತು. ಭಾರತ ಸರ್ಕಾರದ ಕೌಶಲ್ಯ ಭಾರತ ಅಭಿಯಾನದಡಿ ಈ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಎಂಜನಿಯರಿಂಗ್ ವೃತ್ತಿದಾರರು ಸೇರಿದಂತೆ ಯುವಕರಲ್ಲಿ ವಿವಿಧ ಹಂತದಲ್ಲಿ ಕೌಶಲ್ಯ ಜ್ಞಾನವನ್ನು ವೃದ್ಧಿಸುವುದು ಈ ಕೇಂದ್ರದ ಉದ್ದೇಶ.

192. ರಾಜ್ಯ ಸರ್ಕಾರ ಇತ್ತೀಚೆಗೆ ಮಾಪನ ವಾಹನಗಳಿಗೆ ಚಾಲನೆ ನೀಡಿರುವುದಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

ಅ) ರಾಜ್ಯ ಗೃಹಸಚಿವಾಲಯ ಈ ವಾಹನಗಳನ್ನು ನೀಡಿದ್ದು, ಆರ್‌ಟಿಒ ಸಿಬ್ಬಂದಿ ಮತ್ತು ಸಂಚಾರಿ ಪೊಲೀಸರ ನೆರವಿನೊಂದಿಗೆ ಸಾರ್ವಜನಿಕ ವಾಹನಗಳ ಮಾಲಿನ್ಯ ಪ್ರಮಾಣ ತಪಾಸಣೆ ನಡೆಸಲಾಗುತ್ತದೆ.

www.karunaduexams.com

ಆ)ಈ ವಾಹನಗಳ ಮೂಲಕ ಡೀಸೆಲ್ ವಾಹನದಲ್ಲಿ ಹೊಗೆ ಸಾಂದ್ರತೆ ಮತ್ತು ಪೆಟ್ರೋಲ್ ವಾಹನದಲ್ಲಿ ಕಾರ್ಬನ್ ಮೊನಾಕ್ಸೈಡ್ (CO) ಹಾಗೂ ಹೈಡ್ರೋಕಾರ್ಬನ್ (HC) ಸಾಂದ್ರತೆಗಳ ಮಾಪನ ಮಾಡಬಹುದು.

ಇ) ಬೆಂಗಳೂರಿನಲ್ಲಿ 8 ವಾಹನಗಳು ಮತ್ತು ಮೈಸೂರು, ಮಂಗಳೂರು, ಧಾರವಾಡ ಹಾಗೂ ಕಲಬುರ್ಗಿಯಲ್ಲಿ ತಲಾ ಒಂದು ವಾಹನ ಕಾರ್ಯನಿರ್ವಹಿಸಲಿವೆ.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮತ್ತು ಎರಡು ಮಾತ್ರ

ಆ) ಹೇಳಿಕೆ ಎರಡು ಮತ್ತು ಮೂರು ಮಾತ್ರ

ಇ) ಹೇಳಿಕೆ ಮೂರು ಮಾತ್ರ

ಈ) ಮೇಲಿನ ಎಲ್ಲವು

ಹೇಳಿಕೆ ಎರಡು ಮತ್ತು ಮೂರು ಮಾತ್ರ

ವಾಹನಗಳ ಹೊಗೆ ತಪಾಸಣೆ ಮಾಡುವ 12 ಮಾಪನ ವಾಹನಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸಿರು ನಿಶಾನೆ ತೋರಿದರು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈ ವಾಹನಗಳನ್ನು ನೀಡಿದ್ದು, ಪ್ರಾದೇಶಿಕ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಸಿಬ್ಬಂದಿ ಮತ್ತು ಸಂಚಾರಿ ಪೊಲೀಸರ ನೆರವಿನೊಂದಿಗೆ ಸಾರ್ವಜನಿಕ ವಾಹನಗಳ ಮಾಲಿನ್ಯ ಪ್ರಮಾಣ ತಪಾಸಣೆ ನಡೆಸಲಾಗುತ್ತದೆ. ಈ ವಾಹನಗಳ ಮೂಲಕ ಡೀಸೆಲ್ ವಾಹನದಲ್ಲಿ ಹೊಗೆ ಸಾಂದ್ರತೆ ಮತ್ತು ಪೆಟ್ರೋಲ್ ವಾಹನದಲ್ಲಿ ಕಾರ್ಬನ್ ಮೊನಾಕ್ಸೈಡ್ (CO) ಹಾಗೂ ಹೈಡ್ರೋಕಾರ್ಬನ್ (HC) ಸಾಂದ್ರತೆಗಳ ಮಾಪನ ಮಾಡಬಹುದು. ಬೆಂಗಳೂರಿನಲ್ಲಿ 8 ವಾಹನಗಳು ಮತ್ತು ಮೈಸೂರು, ಮಂಗಳೂರು, ಧಾರವಾಡ ಹಾಗೂ ಕಲಬುರ್ಗಿಯಲ್ಲಿ ತಲಾ ಒಂದು ವಾಹನ ಕಾರ್ಯನಿರ್ವಹಿಸಲಿವೆ. 'ವಾರದಲ್ಲಿ ಒಂದು ಅಥವಾ ಎರಡು ದಿನ ನಿರ್ದಿಷ್ಟ ಸ್ಥಳದಲ್ಲಿ ತಪಾಸಣೆ ಹಮ್ಮಿಕೊಳ್ಳಲಾಗುತ್ತದೆ. ನಿಗದಿತ ಮಿತಿಗಿಂತ ಹೆಚ್ಚಿನ ಹೊಗೆ ಹೊರಸೂಸುವ ವಾಹನಗಳಿಗೆ ಮೋಟಾರು ವಾಹನ ಕಾಯ್ದೆ ಪ್ರಕಾರ ₹1,500 ದಂಡ ವಿಧಿಸಲು ಅವಕಾಶ ಇದೆ.

193. ಚಿತ್ರದುರ್ಗ ಮುರುಘಾಮಠದ ಶಾಖಾಮಠದ ಹೊಸಮಠ ನೀಡುವ ಡಾ. ಶಿವಮೂರ್ತಿ ಮುರುಘಾ ಶರಣ ಪ್ರಶಸ್ತಿಗೆ ('ಡಾ. ಶಿಮುಶ ಪ್ರಶಸ್ತಿ') ಯಾರನ್ನು ಆಯ್ಕೆಮಾಡಲಾಗಿದೆ?

ಅ) ಧರಂಸಿಂಗ್

ಆ) ಬಸವರಾಜ ಹೊರಟ್ಟಿ

ಇ) ರಮೇಶ್ ಕುಮಾರ್

ಈ) ಕಾಗೋಡು ತಿಮ್ಮಪ್ಪ

www.karunaduexams.com

ಬಸವರಾಜ ಹೊರಟ್ಟಿ

ಚಿತ್ರದುರ್ಗ ಮುರುಘಾಮಠದ ಶಾಖಾಮಠವಾದ ಹೊಸಮಠ ನೀಡುವ ಡಾ. ಶಿವಮೂರ್ತಿ ಮುರುಘಾ ಶರಣ ಪ್ರಶಸ್ತಿಗೆ ('ಡಾ. ಶಿಮುಶ ಪ್ರಶಸ್ತಿ') ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹50 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಡಿಸೆಂಬರ್ 3 ರಂದು ಹಾವೇರಿಯಲ್ಲಿ ನಡೆಯುವ 'ಶರಣ ಸಂಸ್ಕೃತಿ ಉತ್ಸವ' ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

194. ಇತ್ತೀಚೆಗೆ ನಿಧನರಾದ ಶ್ರೀಹರಿ ಖೋಡೆ ಅವರು ಪ್ರಸಿದ್ಧ ____?

ಅ) ಉದ್ಯಮಿ

ಆ) ಸಾಹಿತಿ

ಇ) ಸಿನಿಮಾ ನಿರ್ದೇಶಕ

ಈ) ಪತ್ರಕರ್ತ

ಉದ್ಯಮಿ

ಖ್ಯಾತ ಉದ್ಯಮಿ, ಚಲನಚಿತ್ರ ನಿರ್ಮಾಪಕ ಶ್ರೀಹರಿ ಎಲ್. ಖೋಡೆ (77) ಅನಾರೋಗ್ಯದಿಂದ ನಿಧನರಾದರು. ಸದಭಿರುಚಿ ಚಿತ್ರಗಳ ನಿರ್ಮಾಪಕರಾಗಿದ್ದ ಖೋಡೆ ಅವರು, 'ಸಂತ ಶಿಶುನಾಳ ಷರೀಫ', 'ಮೈಸೂರು ಮಲ್ಲಿಗೆ', 'ನಾಗಮಂಡಲ' ಚಿತ್ರಗಳನ್ನು ನಿರ್ಮಿಸಿದ್ದರು. ಇತ್ತೀಚೆಗೆ ಟಿ.ಎಸ್. ನಾಗಾಭರಣ ಅವರ ನಿರ್ದೇಶನದ 'ಅಲ್ಲಮ' ಚಿತ್ರವನ್ನೂ ನಿರ್ಮಾಣ ಮಾಡಿದ್ದಾರೆ. ಮದ್ಯದ ಉದ್ಯಮ ನಡೆಸುವ ಖೋಡೆ ಗ್ರೂಪ್‌ನ ಮುಖ್ಯಸ್ಥರಾಗಿದ್ದರು.

195. ಅತ್ಯಂತ ಸುಗಮವಾಗಿ ವ್ಯಾಪಾರೋದ್ಯಮ ನಡೆಸಲು ಅವಕಾಶ ಇರುವ ರಾಜ್ಯಗಳ ಸಮೀಕ್ಷೆಯಲ್ಲಿ ಕರ್ನಾಟಕ ಎಷ್ಟನೇ ಸ್ಥಾನದಲ್ಲಿದೆ?

ಅ) 09

ಆ) 10

ಇ) 13

ಈ) 15

www.karunaduexams.com

13

ಅತ್ಯಂತ ಸುಗಮವಾಗಿ ವ್ಯಾಪಾರೋದ್ಯಮ ನಡೆಸಲು ಅವಕಾಶ ಇರುವ ರಾಜ್ಯಗಳ ಸಮೀಕ್ಷೆಯಲ್ಲಿ ಕರ್ನಾಟಕ 13ನೇ ಸ್ಥಾನಕ್ಕೆ ಜಾರಿದೆ. ಕಳೆದ ವರ್ಷ ರಾಜ್ಯ 9ನೇ ಸ್ಥಾನ ಪಡೆದಿತ್ತು. ವಿಶ್ವ ಬ್ಯಾಂಕ್ ಹಾಗೂ ಭಾರತದ ಕೈಗಾರಿಕಾ ನೀತಿ ಇಲಾಖೆಯು ನಡೆಸಿದ ಸಮೀಕ್ಷೆಯಲ್ಲಿ ಆಂಧ್ರ ಪ್ರದೇಶ ಮತ್ತು ತೆಲಂಗಾಣ ಜಂಟಿಯಾಗಿ ಮೊದಲ ಸ್ಥಾನ ಪಡೆದಿವೆ. ನಂತರದ ಸ್ಥಾನದಲ್ಲಿ ಗುಜರಾತ್ ಇದೆ. ಛತ್ತೀಸಗಡ, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯಗಳು ಕ್ರಮವಾಗಿ 4, 5 ಮತ್ತು 6ನೇ ಸ್ಥಾನ ಪಡೆದಿವೆ. ವ್ಯಾಪಾರ ಸುಧಾರಣೆ ಕ್ರಿಯಾ ಯೋಜನೆಗೆ ಸಂಬಂಧಿಸಿದ 340 ಅಂಶಗಳ ಅನುಷ್ಠಾನದ ಆಧಾರದಲ್ಲಿ ಸಮೀಕ್ಷೆ ನಡೆಸಲಾಗಿದೆ.

196. ಮಾದರಿ ನೋಂದಣಿ ವ್ಯವಸ್ಥೆಯು (ಎಸ್‌ಆರ್‌ಎಸ್) ನಡೆಸಿದ ಸಮೀಕ್ಷೆ ವರದಿ ಪ್ರಕಾರ ಕರ್ನಾಟಕದಲ್ಲಿ 2010-14ರ ಅವಧಿಯಲ್ಲಿ ಜನರ ಸರಾಸರಿ ಜೀವಿತಾವಧಿ ಎಷ್ಟಿದೆ?

ಅ) 68.8

ಆ) 67.6

ಇ) 70.1

ಈ) 65.4

68.8

ಮಾದರಿ ನೋಂದಣಿ ವ್ಯವಸ್ಥೆಯು (ಎಸ್‌ಆರ್‌ಎಸ್) ಸಮೀಕ್ಷೆ ಪ್ರಕಾರ ಭಾರತದಲ್ಲಿ 2010-14ರ ಅವಧಿಯಲ್ಲಿ ಜನರ ಸರಾಸರಿ ಜೀವಿತಾವಧಿ 67 ವರ್ಷ 11 ತಿಂಗಳಿಗೆ ಏರಿಕೆಯಾಗಿದೆ. ಕರ್ನಾಟಕ ಜನರ ಸರಾಸರಿ ಜೀವಿತಾವಧಿ 68 ವರ್ಷ 8 ತಿಂಗಳು. ಸರಾರಸಿ ಜೀವತಾವಧಿ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 8ನೇ ಸ್ಥಾನದಲ್ಲಿದೆ.

197. ದೇಶದ ಪ್ರಥಮ ಸಾರ್ವಜನಿಕ ಸೈಕಲ್ ವಿನಿಯೋಗ ವ್ಯವಸ್ಥೆ "ಟ್ರಿಣ್ ಟ್ರಿಣ್" ರಾಜ್ಯದ ಯಾವ ನಗರದಲ್ಲಿ ಆರಂಭಗೊಂಡಿದೆ?

ಅ) ಮೈಸೂರು

ಆ) ಬೆಂಗಳೂರು

ಇ) ಧಾರಾವಾಡ

ಈ) ಬೀದರ್

ಮೈಸೂರು

ದೇಶದ ಪ್ರಥಮ ಸಾರ್ವಜನಿಕ ಸೈಕಲ್ ವಿನಿಯೋಗ (Public Bicycle Sharing System) ವ್ಯವಸ್ಥೆ ಮೈಸೂರಿನಲ್ಲಿ ಡಿಸೆಂಬರ್ 1ರಿಂದ ಪ್ರಾಯೋಗಿಕವಾಗಿ ಜಾರಿಗೆ ಬಂದಿದೆ. ಒಂದು ತಿಂಗಳ ಕಾಲ ಪ್ರಾಯೋಗಿಕವಾಗಿ ಜಾರಿಗೊಳ್ಳಲಿದ್ದು, ನಂತರ ನಗರದ 52 ಹಬ್ ಕೇಂದ್ರಗಳಲ್ಲಿ 450 ಬೈಸಿಕಲ್ ಗಳು ಸಾರ್ವಜನಿಕರ ಸೇವೆಗೆ ಮುಕ್ತಗೊಳ್ಳಲಿವೆ. ಟ್ರಿಣ್ ಟ್ರಿಣ್' ಹೆಸರಿನ ಈ ಯೋಜನೆಯನ್ನು ಮೈಸೂರು ಮೂಲದ ಗ್ರೀನ್ ವೀಲ್ ರೈಡ್ ಜಾರಿಗೆ ತಂದಿದೆ..

198. ಈ ಕೆಳಗಿನ ಯಾವ ಮರಗಳನ್ನು ರಾಜ್ಯದಲ್ಲಿ ಬೆಳೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ?

ಅ) ನೀಲಗಿರಿ, ಅಕೇಷಿಯಾ

ಆ) ನೀಲಗಿರಿ, ಸರ್ವೆಮರ

ಇ) ಅಕೇಷಿಯಾ, ಸಿಲ್ವರ್

ಈ) ನೀಲಗಿರಿ, ಸಿಮಾರೂಬಾ

ನೀಲಗಿರಿ, ಅಕೇಷಿಯಾ

ನೀರಿನ ಸೆಲೆಯನ್ನೇ ಬತ್ತಿಸಿ ಬರಡು ಭೂಮಿಗೆ ಕಾರಣವಾಗುವ ನೀಲಗಿರಿ ಮತ್ತು ಅಕೇಷಿಯಾ ಮರ ಬೆಳೆಸುವುದನ್ನು ರಾಜ್ಯದಲ್ಲಿ ಸಂಪೂರ್ಣ ನಿಷೇಧಿಸಲು ರಾಜ್ಯ ಸರಕಾರ ತೀರ್ಮಾನಿಸಿದೆ. ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಅಕೇಷಿಯಾ ಮತ್ತು ನೀಲಗಿರಿ ಮರಗಳನ್ನು ಬೆಳೆಸದಂತೆ ನಿಷೇಧ ಹೇರುವ ಜವಾಬ್ದಾರಿಯನ್ನು ಅರಣ್ಯ ಇಲಾಖೆಗೆ ವಹಿಸಲಾಗಿದೆ.

199. 83ನೇ ಕನ್ನಡ ಸಾಹಿತ್ಯ ಸಮ್ಮೇಳನ ಯಾವ ಜಿಲ್ಲೆಯಲ್ಲಿ ನಡೆಯಲಿದೆ?

ಅ) ಮೈಸೂರು

ಆ) ಬೆಳಗಾವಿ

ಇ) ಧಾರಾವಾಡ

ಈ) ಚಿಕ್ಕಬಳ್ಳಾಪುರ

ಮೈಸೂರು

83ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮೈಸೂರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ. ಕಸಾಪ ಅಧ್ಯಕ್ಷ ಮನು ಬಳಿಗಾರ್ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಪರಿಷತ್‌ನ ಕಾರ್ಯಕಾರಿ ಸಮಿತಿ

www.karunaduexams.com

ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಮುಂದಿನ ಸಮ್ಮೇಳನವನ್ನು ತಮ್ಮ ಜಿಲ್ಲೆಯಲ್ಲಿ ನಡೆಸಬೇಕು ಎಂದು ಮೈಸೂರು, ಹಾವೇರಿ, ಧಾರವಾಡ, ಚಿಕ್ಕಮಗಳೂರು, ಉತ್ತರ ಕನ್ನಡ, ಚಿಕ್ಕಬಳ್ಳಾಪುರ ಜಿಲ್ಲೆಗಳವರು ಕೋರಿಕೆ ಮಂಡಿಸಿದರು. ಆದರೆ ಅಂತಿಮವಾಗಿ ಮೈಸೂರಿನಲ್ಲಿ 83ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಲಾಯಿತು.

200. ಅಸೋಸಿಯೇಷನ್ ಫಾರ್ ಕಂಪ್ಯೂಟರ್ ಮೆಶಿನರಿ (ಎಸಿಎಂ) ಸಂಸ್ಥೆಯ 'ಅತ್ಯುತ್ತಮ ಶಿಕ್ಷಕ' (ಡಿಸ್ಟಿಂಗ್ವಿಷ್ ಎಜುಕೇಟರ್) ಗೌರವಕ್ಕೆ ಪಾತ್ರರಾದ ಎಂ. ವೇಣುಗೋಪಾಲ್ ರವರಯ ಯಾವ ಕಾಲೇಜಿನ ಪ್ರಾಂಶುಪಾಲ?

ಅ) ಸಿದ್ದಗಂಗಾ ಎಂಜನಿಯರಿಂಗ್ ಕಾಲೇಜು

ಆ) ವಿಶ್ವೇಶ್ವರಯ್ಯ ಎಂಜನಿಯರಿಂಗ್ ಕಾಲೇಜು

ಇ) ನಾಗರ್ಜುನ ಎಂಜನಿಯರಿಂಗ್ ಕಾಲೇಜು

ಈ) ಆರ್ ವಿ ಎಂಜನಿಯರಿಂಗ್ ಕಾಲೇಜು

ವಿಶ್ವೇಶ್ವರಯ್ಯ ಎಂಜನಿಯರಿಂಗ್ ಕಾಲೇಜು

ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ನೀಡಿದ ಕೊಡುಗೆಗಾಗಿ ಬೆಂಗಳೂರು ವಿವಿಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಪ್ರಾಂಶುಪಾಲ ಪ್ರೊ. ಕೆ.ಆರ್. ವೇಣುಗೋಪಾಲ್ ಅವರು ಅಸೋಸಿಯೇಷನ್ ಫಾರ್ ಕಂಪ್ಯೂಟರ್ ಮೆಶಿನರಿ (ಎಸಿಎಂ) ಸಂಸ್ಥೆಯ 'ಅತ್ಯುತ್ತಮ ಶಿಕ್ಷಕ' (ಡಿಸ್ಟಿಂಗ್ವಿಷ್ ಎಜುಕೇಟರ್) ಗೌರವಕ್ಕೆ ಪಾತ್ರರಾಗಿದ್ದಾರೆ. ವಿಶ್ವವಿದ್ಯಾಲಯದ ಮಟ್ಟದಲ್ಲಿ ಈ ಗೌರವಕ್ಕೆ ಪಾತ್ರರಾದ ಮೊದಲ ಭಾರತೀಯ ಎಂಬ ಹೆಗ್ಗಳಿಕೆ ವೇಣುಗೋಪಾಲ ಅವರದ್ದು. ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಅಂಡ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ಸಾಧನೆಗಾಗಿ ಪ್ರತಿಷ್ಠಿತ ಐಇಇಇ ಫೆಲೋ ಪ್ರಶಸ್ತಿಯನ್ನು ಈ ವರ್ಷದ ಆರಂಭದಲ್ಲಿ ಪಡೆದಿದ್ದರು.

201. ಆಗ್ರಾ ಮೂಲದ ಭಾರತೀಯ ರಸಾಯನವಿಜ್ಞಾನ ಮಂಡಳಿ ನೀಡುವ 2016ನೇ ಸಾಲಿನ ಪ್ರತಿಷ್ಠಿತ 'ಜೀವಮಾನ ಸಾಧನೆ' ಪ್ರಶಸ್ತಿಗೆ ಆಯ್ಕೆಯಾದ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊಫೆಸರ್ ಯಾರು?

ಅ) ಪ್ರೊ. ಎಸ್. ಟಿ. ನಂದಿಬೇವೂರ

ಆ) ಪ್ರೊ. ಚಂದ್ರಶೇಖರ್

ಇ) ಪ್ರೊ. ರವಿಚಂದ್ರ ನಾಯಕ್

ಈ) ಪ್ರೊ. ಸುರೇಶ ತವಾರ

www.karunaduexams.com

ಪ್ರೊ. ಎಸ್. ಟಿ. ನಂದಿಬೇವೂರ

ಆಗ್ರಾ ಮೂಲದ ಭಾರತೀಯ ರಸಾಯನವಿಜ್ಞಾನ ಮಂಡಳಿ ನೀಡುವ 2016ನೇ ಸಾಲಿನ ಪ್ರತಿಷ್ಠಿತ 'ಜೀವಮಾನ ಸಾಧನೆ' ಪ್ರಶಸ್ತಿಗೆ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನವಿಜ್ಞಾನ ವಿಭಾಗದ ಪ್ರೊ.ಎಸ್.ಟಿ. ನಂದಿಬೇವೂರ ಆಯ್ಕೆಯಾಗಿದೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಇದೇ ಮೊದಲ ಬಾರಿಗೆ ಈ ಪ್ರಶಸ್ತಿ ಬಂದಿದ್ದು, ಇದೇ 22ರಂದು ಪುಣೆಯಲ್ಲಿ ನಡೆಯುವ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪ್ರೊ. ನಂದಿಬೇವೂರ ಅವರು 48 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿಗೆ ಮಾರ್ಗದರ್ಶನ ಮಾಡಿದ್ದಾರೆ. ಅವರ ಸಾಧನೆ ಗಮನಿಸಿ ಅಮೆರಿಕನ್ ಕೆಮಿಕಲ್ ಸೊಸೈಟಿ 2011ರಲ್ಲಿ ಸರ್ಟಿಫಿಕೇಟ್ ಆಫ್ ಅಪ್ರಿಷಿಯೇಷನ್, ಆಗ್ರಾ ಮೂಲದ ಭಾರತೀಯ ರಸಾಯನವಿಜ್ಞಾನ ಮಂಡಳಿಯಿಂದ ಪ್ರೊ. ಮಲಿಕ್ ಸ್ಮಾರಕ ಪ್ರಶಸ್ತಿ, ಕೋಲ್ಕತ್ತಾದ ಇಂಡಿಯನ್ ಕೆಮಿಕಲ್ ಸೊಸೈಟಿ ನೀಡುವ ಪ್ರೊ. ಅಮೇತಾ ಪ್ರಶಸ್ತಿ ಸಂದಿದೆ.

202. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ಕರ್ನಾಟಕ ಸರ್ಕಾರಕ್ಕೆ ಇತ್ತೀಚೆಗೆ _________ ರ ಸವಲತ್ತುಗಳ ಅನುಷ್ಠಾನಕ್ಕೆ ತರುವಲ್ಲಿ ಅತ್ಯುತ್ತಮ ರಾಜ್ಯ ಪ್ರಶಸ್ತಿ ನೀಡಿದೆ?

ಅ) ವಿಧವೆಯರ

ಆ) ಅಲ್ಪಸಂಖ್ಯಾತರ

ಇ) ಅಂಗವಿಕರಲರ

ಈ) ಹಿಂದುಳಿದ ವರ್ಗದವರ

ಅಂಗವಿಕರಲರ

ಸರ್ಕಾರವು ವಿಕಲಚೇತನರ ಕಲ್ಯಾಣಕ್ಕಾಗಿ ಸುಮಾರು 22 ಯೋಜನೆಗಳನ್ನು ಘೋಷಿಸಿದ್ದು, ಇವುಗಳ ಅನುಷ್ಠಾನಕ್ಕೆ ತರುವಲ್ಲಿ ಕರ್ನಾಟಕಕ್ಕೆ "ಅತ್ಯುತ್ತಮ ರಾಜ್ಯ' ಪ್ರಶಸ್ತಿ ಲಭಿಸಿದೆ ಎಂದು ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಂ ಅವರು ತಿಳಿಸಿದ್ದಾರೆ. ಕರ್ನಾಟಕವನ್ನು ವಿಕಲಚೇತನ ಸಬಲೀಕರಣ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ "ಅತ್ಯುತ್ತಮ ರಾಜ್ಯ" ಎಂಬ ರಾಷ್ಟ್ರಪ್ರಶಸ್ತಿಯನ್ನು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ನೀಡಿದ್ದು, ಆ ಪ್ರಶಸ್ತಿಯನ್ನು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ ಅವರು ಭಾಗವಹಿಸಿ ಈ ಪ್ರಶಸ್ತಿಯನ್ನು ಸರ್ಕಾರದ ಪರವಾಗಿ ಸ್ವೀಕರಿಸಲಿದ್ದಾರೆ. ವಿಕಲಚೇತನ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಣೆ,

www.karunaduexams.com

ಬ್ರೈಲ್‌ಯಂತ್ರ ವಿತರಣೆ, ಕೆ.ಎ.ಎಸ್ ಐ.ಎ.ಎಸ್. ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿಕಲಚೇತನರ ವಿದ್ಯಾರ್ಥಿಗಳಿಗೆ ಗರಿಷ್ಠ 1 ಲಕ್ಷದವರೆಗೆ ಧನಸಹಾಯ ನೀಡಲಾಗುತ್ತಿದೆ.

203. ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಆರ್ ಎನ್ ಭಟ್

ಆ) ಎನ್ ಆರ್ ಶೆಟ್ಟಿ

ಇ) ಮನೊರಂಜನ್ ಕೋರೆ

ಈ) ನಂದಿ ಬೇವೂರ

ಎನ್ ಆರ್ ಶೆಟ್ಟಿ

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ನೂತನ ಕುಲಾಧಿಪತಿಯಾಗಿ ಪ್ರೊ. ಎನ್.ಆರ್. ಶೆಟ್ಟಿ ಅವರನ್ನು ನೇಮಿಸಿ ಭಾರತದ ಘನತೆವೆತ್ತ ರಾಷ್ಟ್ರಪತಿಯವರು ಆದೇಶ ಹೊರಡಿಸಿದ್ದಾರೆ.ಪ್ರೊ. ಎನ್.ಆರ್. ಶೆಟ್ಟಿ ಅವರು ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಯಾಗಿ ಕಾರ್ಯ ನಿರ್ವಹಿಸಿದ್ದರು. ಕಾರ್ಯಕಾರಿ ಮಂಡಳಿಯ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಯವರು ಕುಲಾಧಿಪತಿಯೆಂದು ನೇಮಿಸಿದ್ದಾರೆ.

204. "2016 ಬೆಂಗಳೂರುಐಟಿಇ.ಬಿಜ್ (BengaluruITE.biz)" ಧ್ಯೇಯವಾಕ್ಯ _________?

ಅ) Define the Next

ಆ) IT for Tomorrow

ಇ) IT and World

ಈ) Smart Live

Define the Next

205. ಇತ್ತೀಚೆಗೆ ನಿಧನರಾದ "ಅಶೋಕ್ ಬಾದರದಿನ್ನಿ" ರವರು ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?

ಅ) ರಂಗಭೂಮಿ

ಆ) ಕ್ರೀಡೆ

ಇ) ಜಾನಪದ

ಈ) ಪರಿಸರ ಸಂರಕ್ಷಣೆ

www.karunaduexams.com

ರಂಗಭೂಮಿ

ಕನ್ನಡದ ಖ್ಯಾತ ರಂಗಕರ್ಮಿ ಹಾಗೂ ಚಲನಚಿತ್ರ ನಟ ಅಶೋಕ್ ಬಾದರದಿನ್ನಿ ಅನಾರೋಗ್ಯದಿಂದ ಸಾವಿಗೀಡಾಗಿದ್ದಾರೆ. ಅಶೋಕ್ ಬಾದರದಿನ್ನಿ 200ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದು, ಹಲವು ನಾಟಕ ತರಬೇತಿ ಶಿಬಿರಗಳನ್ನು ಆಯೋಜಿಸಿದ್ದರು. ರವಿಚಂದ್ರನ್ ಅಭಿನಯದ 'ಅಂಜದ ಗಂಡು' ಸಿನಿಮಾದಲ್ಲಿ ನಾಯಕನ ಸ್ನೇಹಿತನ ಪಾತ್ರ ಮಾಡಿದ್ದರು. ಇದಲ್ಲದೆ 'ಮನ ಮೆಚ್ಚಿದ ಹುಡುಗಿ' 'ನವತಾರೆ', 'ಏಕಲವ್ಯ', 'ಆಸ್ಫೋಟ', 'ಧರ್ಮಪತ್ನಿ', 'ಭೂತಯ್ಯನ ಮಕ್ಕಳು' ಸೇರಿದಂತೆ 80 ಸಿನಿಮಾಗಳಲ್ಲಿ ಅಭಿನಯಿಸಿದ್ದಲ್ಲದೆ, 300 ಕ್ಕೂ ಹೆಚ್ಚು ಧಾರವಾಹಿಗಳಲ್ಲಿ ಅಭಿನಯಿಸಿದ್ದರು.

206. ತಿಮ್ಮಲಾಪುರ ಕರಡಿ ಸಂರಕ್ಷಿತ ಪ್ರದೇಶ ಯಾವ ಜಿಲ್ಲೆಯಲಿದೆ?

ಅ) ತುಮಕೂರು

ಆ) ಬಳ್ಳಾರಿ

ಇ) ಚಿಕ್ಕಮಗಳೂರು

ಈ) ಚಿತ್ರದುರ್ಗ

ತುಮಕೂರು

ತಿಮ್ಮಲಾಪುರ ಕರಡಿ ಸಂರಕ್ಷಿತ ಪ್ರದೇಶ ತುಮಕೂರಿನ ಮಧುಗಿರಿ ಜಿಲ್ಲೆಯಲ್ಲಿದೆ. ಕೇಂದ್ರ ಸರ್ಕಾರ ಈ ಅರಣ್ಯ ಪ್ರದೇಶವನ್ನು ಕರಡಿ ಸಂರಕ್ಷಿತ ಪ್ರದೇಶವೆಂದು ಘೋಷಿಸಿದೆ.

207. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) 17ನೇ ರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರಿ ಕಾರ್ಯಕ್ರಮ ನಂಜನಗೂಡಿನ ಅಡಕನಹಳ್ಳಿಯಲ್ಲಿ ನಡೆಯಿತು

II) ಕರ್ನಾಟಕದಲ್ಲಿ ಇದುವರೆಗೆ ಮೂರು ಬಾರಿ ಜಾಂಬೂರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ

III) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ 1909 ರಲ್ಲಿ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ಆರಂಭಗೊಂಡಿತು.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

I, II & III

208. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು 2017 ಅನ್ನು ಯಾವ ವರ್ಷವನ್ನಾಗಿ ಆಚರಿಸಲು ನಿರ್ಧರಿಸಿದೆ?

ಅ) ವನ್ಯಜೀವಿ ವರ್ಷ

ಆ) ಸ್ವಚ್ಛ ನದಿ ವರ್ಷ

ಇ) ಪಶ್ಚಿಮಘಟ್ಟ ವರ್ಷ

ಈ) ಅರಣ್ಯ ವರ್ಷ

ವನ್ಯಜೀವಿ ವರ್ಷ

ಕರ್ನಾಟದಲ್ಲಿ ವನ್ಯ ಜೀವಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಪ್ರವಾಸೋದ್ಯಮ ಇಲಾಖೆ 2017 ಅನ್ನು 'ವನ್ಯ ವರ್ಷ' ವನ್ನಾಗಿ ಆಚರಿಸಲು ನಿರ್ಧರಿಸಿದೆ. ವನ್ಯವರ್ಷ ಅಭಿಯಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಖರ್ಗೆ ಇತ್ತೀಚೆಗೆ ಪ್ರಾರಂಭಿಸಿದರು. ಪಶ್ಚಿಮಘಟ್ಟದ 9 ಟ್ರೆಕ್ಕಿಂಗ್ ಮಾರ್ಗಗಳನ್ನು ಶೀಘ್ರದಲ್ಲಿಯೆ ಸೂಚಿಸಲಾಗುವುದು. ಈ ಮಾರ್ಗಗಳಲ್ಲಿ ಟ್ರೆಕ್ಕಿಂಗ್ ಪರಿಣಿತರಿಂದ ಪ್ರವಾಸದ ತರಬೇತಿ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದು ಅಭಿಯಾನದ ಉದ್ದೇಶ ಎಂದು ತಿಳಿಸಿದರು.

209. ಪ್ರಸ್ತುಕ ಸಾಲಿನ ಆಳ್ವಾಸ್ ವಿರಾಸತ್ ಪ್ರಶಸ್ತಿಗೆ ಆಯ್ಕೆಯಾಗಿರುವ ಶಾಸ್ತ್ರೀಯ ನೃತ್ಯ ಕಲಾವಿದ ವನ್ನಾಡಿಲ್ ಪುದಿಯವೀಟಿಲ್ ಧನಂಜಯನ್ ಯಾವ ರಾಜ್ಯದವರು?

ಅ) ಮಹಾರಾಷ್ಟ್ರ

ಆ) ತಮಿಳುನಾಡು

ಇ) ಕೇರಳ

ಈ) ಗೋವಾ

ಕೇರಳ

ಕೇರಳದ ಪ್ರಸಿದ್ಧ ಶಾಸ್ತ್ರೀಯ ನೃತ್ಯ ಕಲಾವಿದ ವನ್ನಾಡಿಲ್ ಪುದಿಯವೀಟಿಲ್ ಧನಂಜಯನ್ ರವರನ್ನು ಪ್ರಸ್ತುಕ ಸಾಲಿನ ಆಳ್ವಾಸ್ ವಿರಾಸತ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ₹ 1

www.karunaduexams.com

ಲಕ್ಷ ನಗದು ಒಳಗೊಂಡದೆ. ಜನವರಿ 13ರಂದು ನಡೆಯುವ ವಿರಾಸತ್‌ನ ಉದ್ಘಾಟನಾ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

210. 2016 ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿರುವ ಕನ್ನಡದ ಹಿರಿಯ ಸಾಹಿತಿ ಯಾರು?

ಅ) ಬೋಳುವಾರು ಮಹಮ್ಮದ್ ಕುಂಞ

ಆ) ತಿರುಮಲೇಶ್

ಇ) ಸಿದ್ದಲಿಂಗಯ್ಯ ಪುರಾಣಿಕ

ಈ) ದೇವನೂರು ಮಹಾದೇವ

ಬೋಳುವಾರು ಮಹಮ್ಮದ್ ಕುಂಞ

ಕನ್ನಡದ ಹಿರಿಯ ಸಾಹಿತಿ ಬೊಳುವಾರು ಮಹಮ್ಮದ್ ಕುಂಞಿ ಅವರನ್ನು 2016ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕುಂಞಿ ರವರ 'ಸ್ವಾತಂತ್ರ್ಯದ ಓಟ' ಕಾದಂಬರಿಗೆ ಈ ಪ್ರಶಸ್ತಿ ಲಭಿಸಿದೆ. ಡಾ.ಎಚ್.ಸಿ. ಬೋರಲಿಂಗಯ್ಯ, ಎಲ್.ಹನುಮಂತಯ್ಯ ಹಾಗೂ ಎಸ್.ಜಿ. ಸಿದ್ದರಾಮಯ್ಯ ಅವರಿದ್ದ ಆಯ್ಕೆ ಸಮಿತಿಯು ಕನ್ನಡ ವಿಭಾಗದಿಂದ ಬೊಳುವಾರು ಅವರ ಈ ಕಾದಂಬರಿಯನ್ನು ಪ್ರಶಸ್ತಿಗಾಗಿ ಶಿಫಾರಸು ಮಾಡಿತ್ತು. ಕನ್ನಡದ ಹಿರಿಯ ಕವಿ ಕೆ.ವಿ. ತಿರುಮಲೇಶ್ ಅವರು 2015ರ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಅವರ 'ಅಕ್ಷಯ ಕಾವ್ಯ' ಕೃತಿಗೆ ಪ್ರಶಸ್ತಿಯನ್ನು ನೀಡಲಾಗಿತ್ತು.

211. ತುಂಬೆ ಅಣೆಕಟ್ಟನ್ನು ಈ ಕೆಳಗಿನ ಯಾವ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ?

ಅ) ಕುಮಾರಧಾರ

ಆ) ನೇತ್ರಾವತಿ

ಇ) ಕುಮುದ್ವತಿ

ಈ) ತುಂಗಭದ್ರಾ

ನೇತ್ರಾವತಿ

ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿ ನೇತ್ರಾವತಿ ನದಿಗೆ ತುಂಬೆಯಲ್ಲಿ ನಿರ್ಮಾಣ ಗೊಂಡ 11ಮೀಟರ್ ಎತ್ತರದ ಹೊಸ ಅಣೆಕಟ್ಟೆಯಲ್ಲಿ ಗುರುವಾರ ಮಧ್ಯಾಹ್ನ 4.5 ಮೀಟರ್‌ನಿಂದ 5 ಮೀಟರ್ ಎತ್ತ ರಕ್ಕೆ ನೀರು ಏರಿಕೆಯಾಗಿದ್ದು ಇದರಿಂದಾಗಿ 18 ಮಂದಿ ರೈತರ ಒಟ್ಟು 30.59 ಎಕರೆ ಜಮೀನು ಮುಳುಗಡೆಯಾಗಿದೆ.

www.karunaduexams.com

212. 2016-17ನೇ ಸಾಲಿನ ಬಸವ ಕೃಷಿ ಪ್ರಶಸ್ತಿಗೆ ಆಯ್ಕೆಯಾಗಿರುವ "ಮಾಣಿಕ್ ಸರ್ಕಾರ್" ರವರು ಯಾವ ರಾಜ್ಯದ ಮುಖ್ಯಮಂತ್ರಿ?

ಅ) ಸಿಕ್ಕಿಂ

ಆ) ತ್ರಿಪುರ

ಇ) ಮಣಿಪುರ

ಈ) ಜಾರ್ಖಂಡ್

ತ್ರಿಪುರ

ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ವತಿಯಿಂದ ನೀಡಲಾಗುವ ರಾಷ್ಟ್ರಮಟ್ಟದ ಪ್ರಸ್ತಕ ಸಾಲಿನ ಬಸವ ಕೃಷಿ ಪ್ರಶಸ್ತಿಗೆ ತ್ರಿಪುರ ರಾಜ್ಯದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ಜನವರಿ 15ರ ಸಂಕ್ರಾಂತಿಯಂದು ಕೂಡಲ ಸಂಗಮದ ಸಭಾಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ 1 ಲಕ್ಷ ರೂ. ನಗದು, ತಾಮ್ರಪತ್ರ ಸ್ಮರಣಿಕೆ ಒಳಗೊಂಡಿರುತ್ತದೆ.

213. ಈ ಕೆಳಗಿನ ಯಾವುದು ಉತ್ತರ ಕರ್ನಾಟಕದ ಮೊದಲ ಡಿಜಿಟಲ್ ಗ್ರಾಮವೆಂಬ ಗೌರವಕ್ಕೆ ಪಾತ್ರವಾಗಿದೆ?

ಅ) ಶೆರವಾಡ

ಆ) ಅಣಕನೂರು

ಇ) ಹಶಿಗನಾಳ

ಈ) ರಾಮಪುರ

ಶೆರವಾಡ

ಹುಬ್ಬಳ್ಳಿಯ ಶೆರೆವಾಡ ಗ್ರಾಮ ಉತ್ತರ ಕರ್ನಾಟಕದ ಮೊದಲ ಡಿಜಿಟಲ್ ಗ್ರಾಮ ಎಂಬ ಶ್ರೇಯಕ್ಕೆ ಪಾತ್ರವಾಗಿದೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಧಾರವಾಡ ಜಿಲ್ಲೆಯಲ್ಲಿ ಒಂಬತ್ತು ಹಳ್ಳಿಗಳನ್ನು ಡಿಜಿಟಲ್ ಆಗಿ ಮಾರ್ಪಡಿಸುವ ಉದ್ದೇಶ ಹೊಂದಿದೆ. ಅದರ ಭಾಗವಾಗಿ ಹಳ್ಳಿಗಳಲ್ಲಿ ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಪರಿಚಯಿಸುತ್ತಿದೆ. ಶೆರೆವಾಡ ಗ್ರಾಮದಲ್ಲಿ 4415 ಜನಸಂಖ್ಯೆ ಇದ್ದರೆ, 4003 ಮಂದಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಖಾತೆ ಹೊಂದಿದ್ದಾರೆ. ಈ ಪೈಕಿ 3964 ಖಾತೆಗಳನ್ನು ಆಧಾರ್ ಜೊತೆಗೆ ಜೋಡಣೆ ಸಹ ಮಾಡಲಾಗಿದೆ. ಇನ್ನು 3803 ರುಪೇ ಕಾರ್ಡ್ ಹಾಗೂ 25 ಕಿಸಾನ್ ಕಾರ್ಡ್ ಸಹ ವಿತರಿಸಲಾಗಿದೆ.

www.karunaduexams.com

214. ನಾಲ್ಕನೇ ಅಂತಾರಾಷ್ಟ್ರೀಯ ಕಿವುಡ ಸಿನಿಮೊತ್ಸವ ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಮೈಸೂರು

ಆ) ಬೆಂಗಳೂರು

ಇ) ಬೆಳಗಾವಿ

ಈ) ಧಾರಾವಾಡ

ಬೆಂಗಳೂರು

ನಾಲ್ಕನೇ ಅಂತಾರಾಷ್ಟ್ರೀಯ ಕಿವುಡ ಸಿನಿಮೋತ್ಸವ ಬೆಂಗಳೂರಿನಲ್ಲಿ ಆಂಭಗೊಂಡಿತು. ಮೂರು ದಿನಗಳ ಈ ಉತ್ಸವದಲ್ಲಿ ಕಿವುಡರೇ ರೂಪಿಸಿದ 35 ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ವಿವಿಧ ಪ್ರಕಾರದ ಸಿನಿಮಾ ಪ್ರದರ್ಶನವಾಗಲಿದೆ. ಈ ಬಾರಿ ಕಿವಿ ಕೇಳುವವರು ನಿರ್ಮಿಸಿದ ಮೂಕಿ ಚಿತ್ರವನ್ನೂ ಪ್ರದರ್ಶನಕ್ಕೆ ಆಯ್ಕೆ ಮಾಡಲಾಗಿದೆ.

215. ಡಾ.ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಕೊಡ ಮಾಡುವ ಪ್ರಸಕ್ತ ಸಾಲಿನ ಡಾ. ಮನಸೂರ ರಾಷ್ಟ್ರೀಯ ಸಮ್ಮಾನವನ್ನು ಯಾರಿಗೆ ನೀಡಲಾಗಿದೆ?

ಅ) ಪಂ. ಮಂಜುನಾಥ ಪ್ರಸಾದ್

ಆ) ಪಂ. ಆಚಾರ್ಯ ಜೋಷಿ

ಇ) ಪಂ. ಶಿವಶಂಕರ್

ಈ) ಪಂ.ಮಣಿಪ್ರಸಾದ್

ಪಂ.ಮಣಿಪ್ರಸಾದ್

ಡಾ.ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಕೊಡ ಮಾಡುವ ಪ್ರಸಕ್ತ ಸಾಲಿನ ಡಾ. ಮನಸೂರ ರಾಷ್ಟ್ರೀಯ ಸಮ್ಮಾನವನ್ನು ಕಿರಾಣಾ ಘರಾಣೆಯ ಹಿರಿಯ ಗಾಯಕ ಪಂ.ಮಣಿಪ್ರಸಾದ್ ರವರಿಗೆ ನೀಡಲಾಗಿದೆ. ಪ್ರಶಸ್ತಿ ₹1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಅಲ್ಲದೇ, ಯುವ ಗಾಯಕರಾದ ಓಂಕಾರನಾಥ ಹವಾಲ್ದಾರ ಮತ್ತು ರಾಜೇಶ್ವರಿ ಪಾಟೀಲ ಅವರಿಗೆ ಯುವ ಪುರಸ್ಕಾರ ನೀಡಿ ಗೌರವಿಸಲಾಯಿತು. ಯುವ ಪುರಸ್ಕಾರ ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ.

216. ಈ ಕೆಳಗಿನ ಯಾವ ಜಿಲ್ಲೆಯಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ)ಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ?

www.karunadueexams.com

ಅ) ರಾಯಚೂರು

ಆ) ವಿಜಯಪುರ

ಇ) ಬಾಗಲಕೋಟೆ

ಈ) ಬೀದರ್

ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ಐಐಐಟಿ ಸ್ಥಾಪನೆಗೆ ಕೇಂದ್ರ ಸರ್ಕಾರ ಹಸಿರು ನಿಶಾನೆ ನೀಡಿದೆ. ಕಳೆದ ವರ್ಷ ರಾಯಚೂರಿಗೆ ಐಐಟಿ ಕೈ ತಪ್ಪಿತ್ತು. ಹೀಗಾಗಿ ರಾಯಚೂರಿನಲ್ಲಿ ಐಐಟಿ ಬದಲು ಐಐಐಟಿ (ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಇನ್ ಫಾರ್ಮೇಶನ್ ಟೆಕ್ನಾಲಜಿ ) ಸ್ಥಾಪನೆಗೆ ಅವಕಾಶ ನೀಡಿದೆ. ರಾಯಚೂರಿನಲ್ಲಿ ಐಐಟಿ ಸ್ಥಾಪಿಸುವಂತೆ ನಂಜುಂಡಪ್ಪ ವರದಿ ಶಿಫಾರಸು ಮಾಡಿತ್ತು. ಆದರೆ ಕಳೆದ ವರ್ಷ ಧಾರವಾಡದಲ್ಲಿ ಐಐಟಿ ಸ್ಥಾಪನೆಗೆ ಕೇಂದ್ರ ಅನುಮತಿ ನೀಡಿತು. ಐಐಟಿ ಸ್ಥಾಪನೆ ಅವಕಾಶ ಕೈತಪ್ಪಿದ್ದಕ್ಕಾಗಿ ರಾಯಚೂರಿನಲ್ಲಿ ತೀವ್ರ ಅಸಮಾಧಾನ, ಪ್ರತಿಭಟನೆ, ಬಂದ್ ನಡೆಸಲಾಗಿತ್ತು.

217. ಇತ್ತೀಚೆಗೆ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದ "ಇ-ಆಡಳಿತ ವ್ಯವಹಾರ (e-governance transaction)" ವರದಿಯಲ್ಲಿ ಕರ್ನಾಟಕ ಎಷ್ಟನೇ ಸ್ಥಾನದಲ್ಲಿದೆ?

ಅ) 9

ಆ) 10

ಇ) 12

ಈ) 15

12

ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿ ಪ್ರಕಾರ ಕರ್ನಾಟಕ ಇ-ಆಡಳಿತ ವ್ಯವಹಾರದಲ್ಲಿ 12ನೇ ಸ್ಥಾನದಲ್ಲಿದೆ. ಕಳೆದ ವರ್ಷಕ್ಕಿಂತ 4 ಸ್ಥಾನ ಕುಸಿತ ಕಂಡಿರುವ ಕರ್ನಾಟಕ, ಈ ವರ್ಷದಲ್ಲಿ 5.67 ಕೋಟಿ ರೂ. ಇ-ವ್ಯವಹಾರ ನಡೆಸಿದೆ. 101 ಕೋಟಿ ಇ-ವ್ಯವಹಾರ ನಡೆಸುವ ಮೂಲಕ ಆಂಧ್ರ ಪ್ರದೇಶ ದೇಶದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ.

218. ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ "'ಔಟ್ ಸ್ಟ್ಯಾಂಡಿಂಗ್ ಲೀಡರ್‌ಷಿಪ್ ಇನ್ ರೂರಲ್ ಡೆವಲೆಪ್‌ಮೆಂಟ್ ಆಂಡ್ ವುಮೆನ್ ಎಂಪವರ್‌ಮೆಂಟ್' ಪ್ರಶಸ್ತಿಯನ್ನು ಇತ್ತೀಚೆಗೆ ಯಾರಿಗೆ ನೀಡಲಾಯಿತು?

ಅ) ಪಂಡಿತ್ ರವಿಶಂಕರ್ ಗುರೂಜಿ

www.karunaduexams.com

ಆ) ಡಾ. ವೀರೇಂದ್ರ ಹೆಗ್ಗಡೆ

ಇ) ಡಾ. ಅಶೋಖ್ ಖೇಣಿ

ಈ) ಹೆಚ್.ಸಿ.ಪರಮೇಶ್ವರ್

ಡಾ. ವೀರೇಂದ್ರ ಹೆಗ್ಗಡೆ

ಶ್ರೀಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆರವರಿಗೆ ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ "'ಔಟ್ ಸ್ಟ್ಯಾಂಡಿಂಗ್ ಲೀಡರ್‌ಷಿಪ್ ಇನ್ ರೂರಲ್ ಡೆವಲೆಪ್‌ಮೆಂಟ್ ಆಂಡ್ ವುಮೆನ್ ಎಂಪವರ್‌ಮೆಂಟ್' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಗ್ರಾಮೀಣಾಭಿವೃದ್ಧಿ ಹಾಗೂ ಮಹಿಳಾ ಸಬಲೀಕರಣ ಕ್ಷೇತ್ರದ ವಿಶೇಷ ಸಾಧನೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

219. ಇತ್ತೀಚೆಗೆ ಮೈಸೂರಿನ ಮೃಗಾಲಯದಲ್ಲಿ ಕಂಡು ಬಂದ ಹಕ್ಕಿಜ್ವರ ವೈರಾಣು ವಿಧ ____?

ಅ) ಎಚ್5ಎನ್1

ಆ) ಎಚ್5ಎನ್8

ಇ) ಎಚ್7ಎನ್2

ಈ) ಎಚ್7ಎನ್7

ಎಚ್5ಎನ್8

ಮೈಸೂರಿನ ಶ್ರೀಚಾಮರಾಜೇಂದ್ರ ಮೃಗಾಲಯದಲ್ಲಿ ಹಕ್ಕಿಜ್ವರ (ಎಚ್5ಎನ್8 ವೈರಾಣು) ಪತ್ತೆಯಾಗಿದೆ. ಹಕ್ಕಿಜ್ವರದ ಹಿನ್ನಲೆಯಲ್ಲಿ 125 ವರ್ಷಗಳ ಇತಿಹಾಸದಲ್ಲಿ ಇದೇ ಪ್ರಥಮ ಬಾರಿಗೆ ಮೃಗಾಲಯವನ್ನು ಮುನ್ನೆಚ್ಚರಿಕೆ ಕ್ರಮವಾಗಿ ಜ.4 ರಿಂದ ಫೆ.2ರವರೆಗೆ ಬಂದ್ ಮಾಡಲಾಗುತ್ತಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈ ಸೆಕ್ಯೂರಿಟಿ ಆಂಡ್ ಅನಿಮಲ್ ಡಿಸೀಸ್ (ಎನ್‌ಐಎಚ್‌ಎಸ್ ಎಡಿ) ಸಂಸ್ಥೆಯು ಮೃತಪಟ್ಟ ಹಕ್ಕಿಗಳಲ್ಲಿ ಎಚ್5ಎನ್8 ವೈರಾಣು ಇರುವುದನ್ನು ದೃಢಪಡಿಸಿದೆ.

220. ಈ ಕೆಳಗಿನ ಯಾವ ಜಿಲ್ಲೆಯಲ್ಲಿ ದಕ್ಷಿಣ ಭಾರತದಲ್ಲೆ ಮೊದಲು ಎನಿಸಿರುವ "ಕೆನಲ್ ಸೋಲಾರ್" ಸೌರಶಕ್ತಿ ಯೋಜನೆ ನಿರ್ಮಾಣವಾಗಲಿದೆ?

ಅ) ಬಳ್ಳಾರಿ

ಆ) ವಿಜಯಪುರ

ಇ) ದಾವಣಗೆರೆ

ಈ) ಧಾರಾವಾಡ

ವಿಜಯಪುರ

www.karunaduexams.com

ವಿಜಯಪುರ ಜಿಲ್ಲೆಯ ನಾರಾಯಣಪುರ ಜಲಾಶಯದ ಕೊಪ್ಪಳ್ ನೀರಾವರಿ ಯೋಜನೆಯಲ್ಲಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಸೋಲಾರ್ ವಿದ್ಯುತ್ ಉತ್ಪಾದನೆಗೆ ಪ್ಯಾನಲ್‌ಗಳ ಅಳವಡಿಕೆಗೆ ಜಾಗದ ಸಮಸ್ಯೆಯ ಕಾರಣ ವಿದ್ಯುತ್ ಉತ್ಪಾದನೆಗೆ ಸಮಸ್ಯೆಗಳಾಗಿದ್ದು, ಸರ್ಕಾರ ರೈತರ ಜತೆ ಒಡಂಬಡಿಕೆ ಮಾಡಿಕೊಂಡು ಯೋಜನೆ ಜಾರಿ ಮಾಡಲು ಮುಂದಾಗಿದೆ. ದಕ್ಷಿಣ ಭಾರತದಲ್ಲೆ ನಾಲೆ ಮೇಲೆ ಸೌರ ಫಲಕ ಅಳವಡಿಸಿ ವಿದ್ಯುತ್ ಉತ್ಪಾದನೆ ಮಾಡುತ್ತಿರುವ ಮೊದಲ ಯೋಜನೆ ಇದಾಗಿದೆ.

221. ಕರ್ನಾಟಕ ರಾಜ್ಯ ಸರ್ಕಾರ ಜಾರಿಗೆ ತರಲಿರುವ "ಭೂಮಾಲೀಕ ಯೋಜನೆ"ಯ ಉದ್ದೇಶ _____?

ಅ) ಪರಿಶಿಷ್ಟ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ನೀಡುವುದು

ಆ) ಅಲ್ಪಸಂಖ್ಯಾತ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ನೀಡುವುದು

ಇ) ವಿಧವೆಯರು, ಮಹಿಳಾ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ನೀಡುವುದು

ಈ) ಮೇಲಿನ ಎಲ್ಲವೂ

ಪರಿಶಿಷ್ಟ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ನೀಡುವುದು

ರಾಜ್ಯ ಸರ್ಕಾರ ಭೂ ರಹಿತ ಪರಿಶಿಷ್ಟರನ್ನು ಭೂ ಮಾಲೀಕರನ್ನಾಗಿ ಮಾಡುವ "ಭೂ ಮಾಲೀಕ" ಯೋಜನೆಗ ಶೀಘ್ರವೇ ಚಾಲನೆ ನೀಡಲಿದೆ. ಈ ಯೋಜನೆಯಡಿ ಪರಿಶಿಷ್ಟರಲ್ಲದ ಇತರೆ ಜನಾಂಗಗಳಿಗೆ ಸೇರಿದ ವ್ಯಕ್ತಿಗಳ ಅನುಭೋಗದಲ್ಲಿರುವ ಖಾಸಗಿ ಜಮೀನನ್ನು ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಖರೀದಿಸಿ ಅದನ್ನು ಪರಿಶಿಷ್ಟ ಭೂ ಕಾರ್ಮಿಕರಿಗೆ (ಭೂ ರಹಿತರಿಗೆ) ನೀಡಲಾಗುವುದು. ಇದಕ್ಕಾಗಿ ಮಾಲೀಕ ಯೋಜನೆ ಅಡಿ 30 ಸಾವಿರ ಎಕರೆ ಜಮೀನನ್ನು ಖರೀದಿ ಮಾಡಲಾಗುವುದು. ಈ ಜಮೀನನ್ನು ತಲಾ ಎರಡು ಎಕರೆಯಂತೆ ಭೂ ರಹಿತರಿಗೆ ವಿತರಿಸಲಾಗುವುದು.

222. ಪುಸ್ತಕ ಸಾಲಿನ "ಗಂಗೂಬಾಯಿ ಹಾನಗಲ್ ಪ್ರಶಸ್ತಿ"ಯನ್ನು ಯಾರಿಗೆ ನೀಡಲಾಗಿದೆ?

ಅ) ಪಂ. ಅಜಯ್ ಪೊಹಣಕರ್

ಆ) ಪಂ. ವಿಜಯ ಮುರಳಿ

ಇ) ಪಂ. ಬಾಲಸುಬ್ರಮಣಿ ಶಾಸ್ತ್ರಿ

ಈ) ಪಂ. ನಿರಂಜನ್ ಶಾಸ್ತ್ರಿ

ಪಂ. ಅಜಯ್ ಪೊಹಣಕರ್

www.karunaduexams.com

ಪಂ. ಅಜಯ್ ಪೋಹಣಕರ್ ರವರಿಗೆ ಗಂಗೂಬಾಯಿ ಹಾನಗಲ್ ಅವರ 9ನೇ ಸಂಗೀತ ಮಹೋತ್ಸವದಲ್ಲಿ 'ಗಂಗೂಬಾಯಿ ಹಾನಗಲ್ ರಾಷ್ಟ್ರೀಯ ಪುರಸ್ಕಾರ' ವನ್ನು ನೀಡಿ ಗೌರವಿಸಲಾಯಿತು. ಪ್ರಶಸ್ತಿಯು ಲಕ್ಷ ರೂ. ನಗದನ್ನು ಒಳಗೊಂಡಿದೆ.

223. ಬೆಂಗಳೂರು ಪ್ರೆಸ್ ಕ್ಲಬ್ ನೀಡುವ 2016ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಎಸ್. ಎಂ. ಕೃಷ್ಣ

ಆ) ಎಚ್. ಡಿ. ದೇವೇಗೌಡ

ಇ) ಸಿದ್ದರಾಮಯ್ಯ

ಈ) ಕುಮಾರ ಸ್ವಾಮಿ

ಎಚ್. ಡಿ. ದೇವೇಗೌಡ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ರವರನ್ನು ಬೆಂಗಳೂರು ಪ್ರೆಸ್ ಕ್ಲಬ್ ನೀಡುವ 2016ನೇ ಸಾಲಿನ ವರ್ಷದ ವ್ಯಕ್ತಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕೃಷಿ ಸಾಧಕಿ ಪ್ರಶಸ್ತಿಗೆ ಹಾವೇರಿಯ ಕೃಷಿ ತಜ್ಞೆ ಜಯಮ್ಮ ನಿಂಗನಗೌಡ ಚನ್ನಗೌಡರ್ ಮತ್ತು ಜೀವಮಾನ ಸಾಧಕಿ ಪ್ರಶಸ್ತಿಗೆ ಪತ್ರಕರ್ತೆ ಸಿ.ಜಿ.ಮಂಜುಳಾ ಆಯ್ಕೆಯಾಗಿದ್ದಾರೆ.

224. ಬೆಂಗಳೂರು ಮೂಲಕ ಯಾವ ಖಾಸಗಿ ಸಂಸ್ಥೆ ಡಿಸೆಂಬರ್ 2017ರ ಅಂತ್ಯಕ್ಕೆ ಚಂದ್ರನ ಮೇಲೆ ತನ್ನ ನೌಕೆಯನ್ನು ಇಳಿಸಲು ಯೋಜನೆ ರೂಪಿಸಿದೆ?

ಅ) ಟೀಂ ಇಂಡಸ್

ಆ) ಮೂನ್ ರೇಕರ್

ಇ) ಮೂನ್ ಗ್ಲೈಡರ್

ಈ) ಟೀಂ ಮೂನ್

ಟೀಂ ಇಂಡಸ್

ಬೆಂಗಳೂರು ಮೂಲದ ಖಾಸಗಿ ಸಂಸ್ಥೆ 'ಟೀಂ ಇಂಡಸ್' ಚಂದ್ರನ ಮೇಲೆ ತನ್ನ ರೋವರ್ ನೌಕೆಯನ್ನು 2017ರ ಡಿಸೆಂಬರ್ ಅಂತ್ಯದ ವೇಳೆಗೆ ಇಳಿಸಲು ಸಿದ್ಧತೆ ನಡೆಸಿದೆ. ಗೂಗಲ್ ಲೂನಾರ್ ಎಕ್ಸ್‌ಪ್ರೈಸ್ ಸ್ಪರ್ಧೆಯ ಅಂಗವಾಗಿ ಟೀಂ ಇಂಡಸ್ ಈ ಸಾಹಸಕ್ಕೆ ಕೈಹಾಕಿದೆ. ಗೂಗಲ್ ಲೂನಾರ್ ಎಕ್ಸ್‌ಪ್ರೈಸ್ ಸ್ಪರ್ಧೆಗೆ ಪ್ರವೇಶ 2010ರಲ್ಲೇ ಮುಗಿದಿದೆ. ಸ್ಪರ್ಧೆಗೆ ಪ್ರವೇಶ ಪಡೆದಿರುವ ಮೊದಲ ನಾಲ್ಕು ತಂಡಗಳಲ್ಲಿ ಟೀಂ ಇಂಡಸ್ ನಾಲ್ಕನೆಯದು. ಒಟ್ಟಾರೆ 16 ತಂಡಗಳು ಈ ಸ್ಪರ್ಧೆಗೆ

www.karunaduexams.com

ತಮ್ಮನ್ನು ನೋಂದಾಯಿಸಿಕೊಂಡಿವೆ. ಖಾಸಗಿ ಸಂಸ್ಥೆಗಳಷ್ಟೇ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

225. ಇತ್ತೀಚೆಗೆ ನಿಧನರಾದ ಚೇತನ್ ರಾಮ್ ರಾವ್ ರವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸಿನಿಮಾ

ಆ) ಕ್ರೀಡೆ

ಇ) ಸಾಹಿತ್ಯ

ಈ) ಕಲೆ

ಸಿನಿಮಾ

ಹಿರಿಯ ಸಿನಿಮಾ ನಟ ಚೇತನ್ ರಾಮ್ ರಾವ್ ನಿಧನರಾದರು. ರಾಮ್ ರಾವ್ ರವರು ರಾಜ್ ಕುಮಾರ್, ಡಾ.ವಿಷ್ಣುವರ್ಧನ್ ಅಭಿನಯದ ಚಿತ್ರಗಳಲ್ಲಿ ಪೋಷಕ ಪಾತ್ರದಲ್ಲಿ ಅಭಿನಯಿಸಿದ್ದರು. ಡಾ. ರಾಜ್‌ಕುಮಾರ್ ಅಭಿನಯದ 'ಮಾರ್ಗದರ್ಶಿ' ಚಿತ್ರದ ಮೂಲಕ 1968ರಲ್ಲಿ ಚಿತ್ರರಂಗ ಪ್ರವೇಶಿಸಿದ ಅವರು ಸುಮಾರು 350 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಚೇತನ್ ರಾಮರಾವ್ ಅವರಿಗೆ ರಾಜ್ಯೋತ್ಸವ, ಕಲಾರತ್ನ, ಕಲಾಭೀಷ್ಮ, ಕಲಾದ್ರೋಣ, ನಟ ಚತುರ ಮುಂತಾದ ಪ್ರಶಸ್ತಿಗಳಿಗೆ ಪಾತ್ರರಾಗಿದ್ದರು. ಆಪರೇಷನ್ ಡೈಮಂಡ್ ರಾಕೆಟ್, ಹುಲಿಯ ಹಾಲಿನ ಮೇವು, ಆಪ್ತರಕ್ಷಕ, ಒಲವೇ ಗೆಲುವು, ಬಾಳು ಬೆಳಗಿತು, ರಾಜ ನನ್ನ ರಾಜ, ಲಗ್ನ ಪತ್ರಿಕೆ ಮುಂತಾದ ಚಿತ್ರಗಳಲ್ಲಿ ಅವರು ನಟಿಸಿದ್ದರು.

226. ಇತ್ತೀಚೆಗೆ ಐಎಸ್‌ಓ ಮಾನ್ಯತೆ ಪಡೆದ ಕರ್ನಾಟಕದ ಮೊದಲ ಗ್ರಾಮ ಪಂಚಾಯತಿ "ಲೈಲಾ" ಯಾವ ಜಿಲ್ಲೆಯಲ್ಲಿದೆ?

ಅ) ಉತ್ತರ ಕನ್ನಡ

ಆ) ದಕ್ಷಿಣ ಕನ್ನಡ

ಇ) ಚಿಕ್ಕಮಗಳೂರು

ಈ) ಬೀದರ್

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಲೈಲಾ ಗ್ರಾಮ ಪಂಚಾಯಿತಿಗೆ ಅಂತಾರಾಷ್ಟ್ರೀಯ ಸ್ಟ್ಯಾಂಡರ್ಡ್ ಆರ್ಗನೈಸೇಷನ್(ಐಎಸ್‌ಓ)ನ ಪ್ರಶಸ್ತಿ ಪತ್ರ ದೊರೆತಿದೆ. ಈ ಮೂಲಕ ಐಎಸ್‌ಓ ಮಾನ್ಯತೆ ಪಡೆದ ರಾಜ್ಯದ ಪ್ರಥಮ ಪಂಚಾಯತ್ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಆಸನಗಳ

www.karunaduexams.com

ವ್ಯವಸ್ಥೆ ಸರ್ವಜನಿಕರ ಸೇವೆ, ಕುಡಿಯುವ ನೀರು, ಶೌಚಾಲಯ, ದಿನಪತ್ರಿಕೆ, ಗ್ರಂಥಾಲಯ, ಸಭಾಂಗಣ ಮುಂತಾದ ಗುಣಮಟ್ಟವನ್ನು ಪರಿಗಣಿಸಿ ಈ ಪ್ರಶಸ್ತಿ ಪತ್ರ ನೀಡಲಾಗಿದೆ.

227. ರಾಜ್ಯ ಸರ್ಕಾರ ಇತ್ತೀಚೆಗೆ ಸೌರವಿದ್ಯುತ್ ನೀತಿ 2014- 2021'ಕ್ಕೆ ತಂದಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

ಅ) ಈ ನೀತಿಯಡಿ 2021ರ ವೇಳೆಗೆ 6 ಸಾವಿರ ಮೆಗಾವಾಟ್ ಸೌರವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ.

ಆ) ಹೊಲಗದ್ದೆಗಳಲ್ಲಿ ಸೌರವಿದ್ಯುತ್ ಉತ್ಪಾದಿಸುವ ರೈತರಿಗೆ ಪ್ರೋತ್ಸಾಹವನ್ನು ನೀಡಲಾಗುವುದು

ಇ) ಸೌರವಿದ್ಯುತ್ ಕ್ಷೇತ್ರದ ತಂತ್ರಜ್ಞಾನ, ಕೌಶಲ ಅಭಿವೃದ್ಧಿ, ಸಂಶೋಧನೆ ಪ್ರೋತ್ಸಾಹಿಸಲು 'ಸೋಲಾರ್ ಎನರ್ಜಿ ಸೆಂಟರ್ ಆಫ್ ಎಕ್ಸಲೆನ್ಸ್ ಅಂಡ್ ಇನ್ಕ್ಯುಬೇಶನ್ ಸೆಂಟರ್' ಸ್ಥಾಪಿಸಲಾಗವುದು.

ಮೇಲಿನ ಯಾವ ಹೇಳಿಕೆ/ಹೇಳಿಕೆ ಸರಿಯಾಗಿದೆ?

ಅ) I & II

ಆ) II & III

ಇ) I & III

ಈ) I, II & III

I & III

ಹೇಳಿಕೆ ಒಂದು ಮತ್ತು ಮೂರು ಸರಿಯಾಗಿದೆ. ಹೇಳಿಕೆ ಮೂರು ತಪ್ಪಾಗಿದೆ ಏಕೆಂದರೆ ಹೊಲಗದ್ದೆಗಳಲ್ಲಿ ಸೌರವಿದ್ಯುತ್ ಉತ್ಪಾದಿಸುವ ರೈತರಿಗೆ ಪ್ರೋತ್ಸಾಹ ನೀಡುವ ಯೋಜನೆಯನ್ನು ಕೈಬಿಡಲಾಗಿದೆ.

228. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

I) ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್ಆರ್) ಇತ್ತೀಚೆಗೆ ಸುವರ್ಣಮಹೋತ್ಸವನ್ನು ಆಚರಿಸಿಕೊಂಡಿತು



www.karunaduexams.com

II) ಐಐಎಚ್‌ಆರ್ ದೇಶದ ಮೊದಲ ತೋಟಗಾರಿಕೆ ಸಂಶೋಧನಾ ಸಂಸ್ಥೆ

III) ಐಐಎಚ್‌ಆರ್ ಬೆಂಗಳೂರಿನ ಹೆಸರಘಟ್ಟದ ಬಳಿಯಿದೆ

ಸರಿಯಾದ ಉತ್ತರವನ್ನು ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ:

ಅ) I & II

ಆ) II & III

ಇ) I & III

ಈ) I, II & III

I, II & III

ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಇತ್ತೀಚೆಗೆ ಸುವರ್ಣಮಹೋತ್ಸವನ್ನು ಆಚರಿಸಿಕೊಂಡಿತು. ಐಐಎಚ್‌ಆರ್ ಅನ್ನು ಸೆಪ್ಟೆಂಬರ್ 1967ರಲ್ಲಿ ಸ್ಥಾಪಿಸಲಾಗಿದೆ. ಮೊದಲು ಇದನ್ನು ನವದೆಹಲಿಯಲ್ಲಿ ಸ್ಥಾಪಿಸಲಾಗಿತ್ತು, ನಂತರ ಬೆಂಗಳೂರಿಗೆ ವರ್ಗಾಯಿಸಲಾಯಿತು. ಐಐಎಚ್‌ಆರ್ ಪ್ರಸ್ತುತ ಬೆಂಗಳೂರಿನ ಹೆಸರಘಟ್ಟದಲ್ಲಿದೆ.

229. ಗ್ರೀನ್ ಪೀಸ್ ಎನ್ಜಿಓ ಸಮೀಕ್ಷೆ ಪ್ರಕಾರ ಕರ್ನಾಟಕದ ಮೊದಲ ಮೂರು ಅತ್ಯಂತ ಕಲುಷಿತ ನಗರಗಳು ಯಾವುವು?

ಅ) ಬೆಂಗಳೂರು, ಧಾರವಾಡ, ತುಮಕೂರು

ಆ) ತುಮಕೂರು, ರಾಯಚೂರು, ಬೀದರ್

ಇ) ಬೆಂಗಳೂರು, ತುಮಕೂರು, ದಾವಣಗೆರೆ

ಈ) ಹಾಸನ, ಚಿಕ್ಕಮಗಳೂರು, ತುಮಕೂರು

ಬೆಂಗಳೂರು, ತುಮಕೂರು, ದಾವಣಗೆರೆ

ಬೆಂಗಳೂರು ತುಮಕೂರು ಮತ್ತು ದಾವಣಗೆರೆ ರಾಜ್ಯದ ಅತ್ಯಂತ ಕಲುಷಿತ ನಗರಗಳಾಗಿವೆ ಎಂದು ಇತ್ತೀಚೆಗೆ ನಡೆಸಲಾದ ಅಧ್ಯಯನದಿಂದ ತಿಳಿದುಬಂದಿದೆ. ರಾಜ್ಯದ 20 ನಗರಗಳ ವಾಯುಮಾಲಿನ್ಯ ದತ್ತಾಂಶಗಳನ್ನು ಹೋಲಿಕೆ ಮಾಡಿದ್ದು ಬೆಂಗಳೂರು,

www.karunadulexams.com

ತುಮಕೂರು ಮತ್ತು ದಾವಣಗೆರೆ ಅತ್ಯಂತ ಕಲುಷಿತ ನಗರಗಳೆಂದು ಘೋಷಿಸಲ್ಪಟ್ಟಿದೆ. ರಾಯಚೂರು, ಕಲಬುರ್ಗಿ, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ವಾಯುಮಾಲಿನ್ಯ ಮಟ್ಟ ಕೂಡಾ ರಾಷ್ಟ್ರೀಯ ಸರಾಸರಿಗಿಂತ ಮಿಗಿಲಾಗಿದೆ. ಗ್ರೀನ್ಪೀಸ್ ಎಂಬ ಎನ್ಜಿಒ ಸಂಸ್ಥೆ 24 ರಾಜ್ಯಗಳ 168 ನಗರಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಿತ್ತು. ಉತ್ತರ ಭಾಗದ ನಗರಗಳಿಗೆ ಹೋಲಿಸಿದಲ್ಲಿ ದಕ್ಷಿಣ ಭಾಗದ ನಗರಗಳ ಲ್ಲಿ ಸ್ವಚ್ಛವಾದ ಗಾಳಿಯ ಪ್ರಮಾಣ ಹೆಚ್ಚಿದೆ ಎಂದು ವರದಿ ತಿಳಿಸಿದೆ. ಪಿಎಂ-10 (10 ಮೈಕ್ರಾನ್ ಡಯಾಮೀಟರ್ ಪ್ರಮಾಣದ ದೂಳಿನ ಕಣ) ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ಈ ಅಧ್ಯಯನ ನಡೆಸಲಾಗಿದೆ.

230. ಜೋನ್ಸ್ ಲ್ಯಾಂಗ್ ಲಾಸೆಲ್ಲೆ(ಜೆಎಲ್ಎಲ್) ರಿಯಲ್ ಎಸ್ಟೇಟ್ ಸಂಸ್ಥೆಯ ವಾರ್ಷಿಕ ಸಿಟಿ ಮೂಮೆಂಟಂ ಇಂಡೆಕ್ಸ್ ನಲ್ಲಿ ವಿಶ್ವದ ಡೈನಾಮಿಕ್ ನಗರಗಳ ಪೈಕಿ ಬೆಂಗಳೂರು ಎಷ್ಟನೇ ಸ್ಥಾನದಲ್ಲಿದೆ?

ಅ) ಒಂದು

ಆ) ಎರಡು

ಇ) ಮೂರು

ಈ) ನಾಲ್ಕು

ಒಂದು

ವಿಶ್ವದ 10 ಡೈನಮಿಕ್ ನಗರಗಳ ಪಟ್ಟಿಯಲ್ಲಿ ಉದ್ಯಾನ ನಗರಿ ಮೊದಲ ಸ್ಥಾನ ಪಡೆದುಕೊಂಡಿದೆ.ಜೋನ್ಸ್ ಲ್ಯಾಂಗ್ ಲಾಸೆಲ್ಲೆ(ಜೆಎಲ್ಎಲ್) ರಿಯಲ್ ಎಸ್ಟೇಟ್ ಸಂಸ್ಥೆ ನಡೆಸಿದ ವಾರ್ಷಿಕ ಸಿಟಿ ಮೂಮೆಂಟಂ ಇಂಡೆಕ್ಸ್ ನಲ್ಲಿ ಸಿಲಿಕಾನ್ ಸಿಟಿ ಬೆಂಗಳೂರು ಮೊದಲ ಸ್ಥಾನ ಪಡೆದರೆ, ವಿಯೇಟ್ನಾಂನ ಹೋ ಚಿ ಮಿನ್ಸ್ ಸಿಟಿ, ಅಮೆರಿಕದ ಸಿಲಿಕಾನ್ ವ್ಯಾಲಿ ನಂತರದ ಸ್ಥಾನ ಹಾಗೂ ಹೈದರಾಬಾದ್ ಐದನೇ ಸ್ಥಾನ ಪಡೆದಿದೆ.ಭಾರತದ ಪುಣೆ(13ನೇ ಸ್ಥಾನ), ಚೆನ್ನೈ(17)ನೇ ಸ್ಥಾನ ಮುಂಬೈ(25ನೇ ಸ್ಥಾನ) ಹಾಗೂ ದೆಹಲಿ(23ನೇ ಸ್ಥಾನ) ಸ್ಥಾನ ಪಡೆದಿವೆ.

231. ಕರ್ನಾಟಕದಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಇರುವ ಅನಿವಾಸಿ ಕನ್ನಡಿಗರಿಗೆ ಉತ್ತೇಜನ ನೀಡಲು ರಾಜ್ಯ ಸರ್ಕಾರ ಯಾವ ಯೋಜನೆ ಘೋಷಿಸಿದೆ?

ಅ) ನಮ್ಮ ಊರು, ನಮ್ಮ ನಾಡು

ಆ) ನಮ್ಮ ಕರ್ನಾಟಕ



www.karunaduexams.com

ಇ) ನಮ್ಮ ನೆಲ, ನಮ್ಮ ಉದ್ಯಮ

ಈ) ಕರುನಾಡು, ಉದ್ಯಮ ಬೀಡು

ನಮ್ಮ ಊರು, ನಮ್ಮ ನಾಡು

14ನೇ ಪ್ರವಾಸಿ ಭಾರತೀಯ ದಿನದಂದು ರಾಜ್ಯ ಸರ್ಕಾರ ಅನಿವಾಸಿ ಭಾರತೀಯ ನೀತಿಯನ್ನು ಬಿಡುಗಡೆಗೊಳಿಸಿದೆ. ಈ ನೀತಿಯಡಿ 'ನಮ್ಮ ಊರು, ನಮ್ಮ ನಾಡು' ಯೋಜನೆ ಆರಂಭ ಮಾಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ.. ಇದರಡಿ ಕರ್ನಾಟಕದಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಇರುವ ಅನಿವಾಸಿ ಕನ್ನಡಿಗರಿಗೆ ಉತ್ತೇಜನ ನೀಡಲಾಗುವುದು.

232. ಇತ್ತೀಚೆಗೆ ಬಿಡುಗಡೆಗೊಂಡ "ಉತ್ತರಕಾಂಡ" ಈ ಕೆಳಗಿನ ಯಾರ ಪುಸ್ತಕವಾಗಿದೆ?

ಅ) ಎಸ್.ಎಲ್.ಭೈರಪ್ಪ

ಆ) ಜಿ.ಎಸ್.ಶಿವರುದ್ರಪ್ಪ

ಇ) ಚಂದ್ರಶೇಖರ ಕಂಬಾರ

ಈ) ಚಂದ್ರಶೇಖರ ಪಾಟೀಲ

ಎಸ್.ಎಲ್.ಭೈರಪ್ಪ

ಕನ್ನಡದ ಖ್ಯಾತ ಕಾದಂಬರಿಕಾರ ಎಸ್ ಎಲ್ ಭೈರಪ್ಪನವರ ನೂತನ ಕಾದಂಬರಿ 'ಉತ್ತರಕಾಂಡ' ಮಾರುಕಟ್ಟೆಗೆ ಬಿಡುಗಡೆಯಾಗಿದ್ದು ಅಭೂತಪೂರ್ವ ಯಶಸ್ಸು ಕಂಡಿದೆ. ರಾಮಾಯಣದ ಒಂದು ಭಾಗವಾಗಿರುವ 'ಉತ್ತರಕಾಂಡ'ವನ್ನು ಕಾದಂಬರಿ ರೂಪಕ್ಕೆ ಇಳಿಸಿದ್ದಾರೆ ಭೈರಪ್ಪ. ಈ ಹಿಂದೆ ಮಹಾಭಾರತವನ್ನು ಕೂಡ ಕಾದಂಬರಿ ರೂಪದಲ್ಲಿ ಬರೆದಿದ್ದ 'ಪರ್ವ' ಭಾರಿ ಜನಪ್ರಿಯತೆ ಪಡೆದಿತ್ತು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ಗಳಿಸಿತ್ತು

233. ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನರಿಗೆ ಒಬ್ಬ ಪೊಲೀಸ್ ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದಾರೆ?

ಅ) 760

ಆ) 876

www.karunaduexams.com

ಇ) 912

ಈ) 458

876

ಕರ್ನಾಟಕದಲ್ಲಿ ಪ್ರತಿ 876 ಜನರಿಗೆ ಒಬ್ಬ ಪೊಲೀಸ್  ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವ ಸಂಸ್ಥೆಯ ಪ್ರಕಾರ ಪ್ರತಿ 454 ಜನರಿಗೆ ಒಬ್ಬ ಪೊಲೀಸ್ ಸಿಬ್ಬಂದಿಯಿರಬೇಕು. ರಾಜ್ಯದಲ್ಲಿ ಪ್ರತಿ ಪೊಲೀಸ್ ಸಿಬ್ಬಂದಿಗೆ ಮಂಜೂರಾಗಿರುವ ಜನಸಂಖ್ಯೆ: 564 ವಾಸ್ತವವಾಗಿ ಇರುವುದು: 876. ಪ್ರತಿ ಪೊಲೀಸ್ ಸಿಬ್ಬಂದಿಯ ಕಾರ್ಯನಿರ್ವಹಣೆಯ ಪ್ರದೇಶ, ಮಂಜೂರಾಗಿರುವುದು: 1.74 ಚದರ ಕಿಲೋ ಮೀಟರ್ವಾಸ್ತವವಾಗಿ ಇರುವುದು: 2.7 ಚದರ ಕಿಲೋ ಮೀಟರ್.

234. ಪ್ರಸ್ತುಕ ಸಾಲಿನಿಂದ ರಾಜ್ಯ ಸರ್ಕಾರ ಈ ಕೆಳಗಿನ ಯಾರಿಗೆ ಉಚಿತವಾಗಿ ಲ್ಯಾಪ್ಟಾಪ್ ವಿತರಿಸಲು ನಿರ್ಧರಿಸಿದೆ?

ಅ) ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ SC/ST ವಿದ್ಯಾರ್ಥಿಗಳಿಗೆ

ಆ) ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ SC/ST ವಿದ್ಯಾರ್ಥಿಗಳಿಗೆ

ಇ) ಸ್ನಾತಕೋತ್ತರ ಪದವಿಗಳಲ್ಲಿ ಮಾಡುತ್ತಿರುವ SC/ST ವಿದ್ಯಾರ್ಥಿಗಳಿಗೆ

ಈ) ಎಂಜನಿಯರಿಂಗ್ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ SC/ST ವಿದ್ಯಾರ್ಥಿಗಳಿಗೆ

ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ SC/ST ವಿದ್ಯಾರ್ಥಿಗಳಿಗೆ

ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಉಚಿತವಾಗಿ ಲ್ಯಾಪ್ಟಾಪ್ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ .

235. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) 2016-17ನೇ ಸಾಲಿನ ರಾಷ್ಟ್ರೀಯ ಇ-ಆಡಳಿತ ಪ್ರಶಸ್ತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್ಆರ್ಟಿಸಿ) ಲಭಿಸಿದೆ.

II) ಈ ಪ್ರಶಸ್ತಿಯನ್ನು ಪಡೆಯುತ್ತಿರುವ ದೇಶದ ಮೊದಲ ಸಾರಿಗೆ ಸಂಸ್ಥೆ ಎಂಬ ಖ್ಯಾತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಭಾಜನವಾಗಿದೆ.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

www.karunaduexams.com

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

2016-17ನೇ ಸಾಲಿನ ರಾಷ್ಟ್ರೀಯ ಇ-ಆಡಳಿತ ಪ್ರಶಸ್ತಿಗೆ ನಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್‌ಆರ್ಟಿಸಿ) ಭಾಜನವಾಗಿದೆ. ಕೇಂದ್ರ ಸರ್ಕಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ ಆಂಧ್ರಪ್ರದೇಶದ ವಿಶಾಖಪಟ್ಟಣನಲ್ಲಿ ಹಮ್ಮಿಕೊಂಡಿದ್ದ 20ನೇ ರಾಷ್ಟ್ರೀಯ ಇ-ಆಡಳಿತ ಸಮ್ಮೇಳನದಲ್ಲಿ ಕೆಎಸ್‌ಆರ್ಟಿಸಿಯ ವ್ಯವಸ್ಥಾಪಕ ನಿರ್ದೇಶಕರಾದ ರಾಜೇಂದ್ರ ಕುಮಾರ್ ಕಟಾರಿಯ ಅವರು ಕೇಂದ್ರ ಸಚಿವ ಪಿಪಿ ಚೌದರಿ ಅವರಿಂದ ಪ್ರಶಸ್ತಿ ಪಡೆದರು. ರಾಷ್ಟ್ರೀಯ ಇ-ಆಡಳಿತ ಪ್ರಶಸ್ತಿ ಪಡೆಯುತ್ತಿರುವ ದೇಶದ ಮೊದಲ ಸಾರಿಗೆ ಸಂಸ್ಥೆ ಎಂಬ ಖ್ಯಾತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಭಾಜನವಾಗಿದೆ.

236. “ಕಾವ್ಯನಂದ” ಇದು ಯಾವ ಲೇಖಕರ ಕಾವ್ಯನಾಮ ಆಗಿತ್ತು?

ಅ) ಬೆಟ್ಟಗೇರಿ ಕೃಷ್ಣಶರ್ಮ

ಆ) ಸಿದ್ದಯ್ಯ ಪುರಾಣಿಕ

ಇ) ಸಿದ್ದಲಿಂಗ ದೇಸಾಯಿ

ಈ) ಎಸ್ ಎಲ್ ಭೈರಪ್ಪ

ಸಿದ್ದಯ್ಯ ಪುರಾಣಿಕ

www.karunaduexams.com